ಊಹಿಸಬಹುದೇ ಹೊರತು ಅದರ ಯಥಾರ್ಥ ಚಿತ್ರ ದೊರೆಯುವುದಿಲ್ಲ. ಹೊಸ ಹರ್ಷನಾಟಕದ ಗ್ರೀಕ್ ನಿದರ್ಶನ ಯಾವುದೂ ಇಲ್ಲದಿದ್ದರೂ ಪ್ಲಾಟಸ್ ಸ್ಟಾಷಿಯಸ್ ಟೆರೆನ್ಸ್ ಎಂಬ ಪ್ರಾಚೀನ ರೋಮನರ ಹರ್ಷನಾಟಕ ಅದರ ಮಾದರಿಯಲ್ಲಿ ಕಟ್ಟಿದ್ದಾದ್ದರಿಂದ ಅದರ ಲಕ್ಷಣ ನಮಗೆ ತಿಳಿಯುತ್ತದೆ. ಅಷ್ಟೊಂದು ವಿನೋದ ನಾಟಕಗಳ ನಷ್ಟ ಹೇಗಾಯಿತೊ ಏಕಾಯಿತೊ ಹೇಳಲಾಗದು.

ಕಾಮೆಡಿ (ಹರ್ಷನಾಟಕ) ಎಂಬ ಶಬ್ದ ಕೋಮೆ ಎಂದರೆ ಹಳ್ಳಿ ಎಂಬುದರಿಂದ ಉತ್ಪನ್ನವಾಯಿತೆಂದೂ ಹಳ್ಳಿಗಾಡಿನವರು ಗುಂಪುಗುಂಪಾಗಿ ಹಾಡಿ ಲೇವಡಿ ಕುಣಿತವನ್ನು ಮೆರೆಯಿಸುತ್ತ ನೋಟಕರಿಗೆ ಸಂತಸ ಉಂಟುಮಾಡುತ್ತಿದ್ದರೆಂದೂ ಅದರಿಂದ ಕಾಮೆಡಿಯ ಪ್ರಾರಂಭವೆಂದೂ ಅರಿಸ್ಟಾಟಲ್ ವಿವರಿಸಿದ. ಆ ಸ್ವಚ್ಛಂದ ತಂಡದವರು ಬಹುವಾಗಿ ಶಿಶ್ನಗೀತ ಗಾಯನಮಾಡುತ್ತ ಶಿಶ್ನಲಾಂಛನವನ್ನು (ಫ್ಯಾಲಸ್) ಅಲಂಕರಿಸಿ ಎತ್ತಿ ಹಿಡಿಯುತ್ತಿದ್ದುದರಿಂದ ಅವರಿಗೆ ನಗರಗಳಲ್ಲಿ ಅವಕಾಶ ಸಿಕ್ಕದೆ ಹೋಯಿತು; ಕ್ರಮೇಣ ಆ ಅಶ್ಲೀಲತೆ ನಗರಗಳನ್ನೂ ಪ್ರವೇಶಿಸಿತು. ಇದೂ ಅವನ ಅಭಿಪ್ರಾಯ. ಆದರೆ ಕಾಮೆಡಿ ಪದ ಬಂದದ್ದು ಕೋಮೆಯಿಂದಲ್ಲ; ಕಾಮಾಸ್ (ಬಹುವಚನ ಕಾಮಾಯ್) ಪದದಿಂದ, ಅದರ ಅರ್ಥ ಮೋದಗಾರರು (ರೆವೆಲರ್ಸ್). ದ್ರಾಕ್ಷಿಯನ್ನು ಕೊಯ್ದು ಮದ್ಯಮಾಡುವ ಸಮಯದಲ್ಲೂ ಬೆಳೆಯನ್ನು ಕೊಯ್ದು ಕಣಜಕ್ಕೆ ತುಂಬುವಾಗಲೂ ಜನರಿಗೆ ಸ್ವಾಭಾವಿಕವಾಗಿ ಸುಗ್ಗಿಯ ಉಲ್ಲಾಸ. ಕುಡಿತ ಕುಣಿತ ಪೈರುಪಚ್ಚೆಗಳ ಅಧಿದೇವತೆಯಾದ ಡಯೊನೈಸಸ್ಸನನ್ನು ಭಜಿಸುತ್ತ ಒಂದೆರಡು ದಿನ ಆಮೋದದ ಹಬ್ಬವನ್ನು ಆಚರಿಸುತ್ತಿದ್ದರು; ಅದರ ಅಂಗವಾಗಿ ಪ್ರಜೋತ್ಪತ್ತಿಯ ಸಂಕೇತಕ್ಕೆ ಅವರು ಮುಚ್ಚುಮರೆಯಿಲ್ಲದೆ ಪೂಜೆ ಸಲ್ಲಿಸಿದುದು ಅಚ್ಚರಿಯಲ್ಲ. ಅಷ್ಟೇಕೆ, ಕಾಮೆಡಿ ಕಲಾತ್ಮಕವಾಗಿ ಅಭಿವೃದ್ಧಿ ಹೊಂದಿದ ಮೇಲೂ ಅದರ ನಟರು ದೊಡ್ಡ ಕೃತಕ ಶಿಶ್ನವನ್ನು ತಮ್ಮ ವೇಷದ ಭಾಗವಾಗಿ ಕಟ್ಟಿಕೊಳ್ಳುತ್ತಿದ್ದರು. ಕಾಮೆಡಿ ಅಂತ್ಯವಾಗುವುದು ನಾಯಕನಾಯಕಿಯರ ವಿವಾಹದಿಂದ; ಗ್ರೀಕರಲ್ಲೂ ಅವರ ಶಿಷ್ಯರಾದ ರೋಮನರಲ್ಲೂ ಕೆಲವು ವೇಳೆ ಯಾವುದೊ ಹುಡುಗಿಯನ್ನು ತಂದು ನಾಯಕನಿಗೆ ಮದುವೆಮಾಡಿಸುವುದೂ ನಾಟಕದಲ್ಲಿ ಜರುಗುತ್ತಿತ್ತು. ಮೈಥುನದ ವಿಚಾರ ನಿರ್ಲಜ್ಜೆಯಿಂದ ಪ್ರಕಟಿತವಾಗುತ್ತಿತ್ತು, ನಟರ ಮೂಲಕ. ಅರಿಸ್ಟಾಫನೀಸ್ ತನ್ನಿಂದ ಹರ್ಷನಾಟಕದ ಶುದ್ಧೀಕರಣ ಮತ್ತು ಅಂದಗೊಳಿಕೆ ಆಯಿತು ಎಂದು ಹೇಳಿದ ಮಾತಿನಲ್ಲಿ ಅವನ ಹಿಂದೆ ಅದು ಹೇಗಿದ್ದಿತೆಂಬುದು ವ್ಯಂಜಕವಾಗುತ್ತದೆ. ಗಂಭೀರನಾಟಕಕ್ಕಿಂತ ಹರ್ಷನಾಟಕ ವಾಸ್ತವಿಕ ಜೀವನಕ್ಕೆ ಬಲು ಹತ್ತಿರವಾದ್ದು.

ಕಾಮೆಡಿ ಮೊದಲು ಬೆಳೆದುಬಂದದ್ದು ಸಿಸಿಲಿಯಲ್ಲಿ, ಆಮೇಲೆ ಆಟಿಕದಲ್ಲಿ. ನಾನಾ ರೀತಿಯ ವಿನೋದ ದೃಶ್ಯಗಳೂ ಪ್ರಸಂಗಗಳೂ ಮೂಕಾಭಿನಯಗಳೂ ಮೆಗಾರಾ ಮೊದಲಾದ ಸ್ಥಳಗಳಲ್ಲಿ ಎದ್ದುಬಂದುವು. ಪ್ರ.ಶ.ಪೂ. ಸು. 580ರ ಹೊತ್ತಿಗೇ ಸುಸಾರಿಯನ್ ಎಂಬಾತನ ಮೆಗಾರಾ ಪ್ರಹಸನಕ್ಕೆ ಪ್ರಸಿದ್ಧಿ ಬಂದಿತ್ತು. ಪ್ರ.ಶ.ಪೂ. ಸು. 526ರಲ್ಲಿ ಜನಿಸಿದ ಎಪಿಕಾರ್ಮಸ್ ಪಡೆದ ಖ್ಯಾತಿ ದೊಡ್ಡದು. ಆತ ಮೆಗಾರಾದಲ್ಲಿದ್ದು ಆಮೇಲೆ ಸಿರಕ್ಯೂಸಿಗೆ ಹೋದ. ಅವನ ಕೃತಿಗಳು ಮೂರು ಬಗೆಯವು: ಪುರಾಣ ಕಥಾವಳಿಯ ಶ್ರೇಷ್ಠ ಪುರುಷರನ್ನು ನಕಲಿಗೈಯುವ ಅಣಕನಾಟಕ; ಜನಜೀವನದ ಸಾಮಾನ್ಯ ಲಘುಪ್ರಸಂಗಗಳ ದೃಶ್ಯಾವಳಿ; ತತ್ತ್ವ ಪ್ರಮುಖವಾದ ವಾದವಿವಾದ. ತ್ವರೆ ಗಡಿಬಿಡಿ ಓಡಾಟಗಳಿಂದ ಅವನ ನಾಟಕ ತುಂಬಿರುತ್ತಿತ್ತಂತೆ. ಇನ್ನೊಬ್ಬ ನಾಟಕಕಾರ ಸೊಫ್ರಾನ್; ಗಂಡು ಮೈಮ್, ಹೆಣ್ಣು ಮೈಮ್ ಎಂಬ ಎರಡು ಬಗೆಯ ಕೃತಿ ಅವನಿಂದ ರಚಿತವಾದುವು. ಅವನಿಗೂ ಪ್ರಖ್ಯಾತಿಯಿತ್ತು. ಸಿಸಿಲಿಯ ವಿನೋದನಾಟಕದ ಪ್ರಭಾವ ಆಟಿಕದ ಮೇಲೂ ಬಿದ್ದಿತೆಂಬುದು ನಿಸ್ಸಂದೇಹ.

ಆದರೂ ಹರ್ಷನಾಟಕ ಕಲಾಪೂರ್ಣವಾದದ್ದೂ ಉತ್ತಮ ಪ್ರಗತಿ ಹೊಂದಿದ್ದೂ ಆಟಿಕದ ಪ್ರಧಾನಪಟ್ಟಣವೂ ಪ್ರಾಚೀನ ಗ್ರೀಕರ ಸಮಸ್ತಸಂಸ್ಕೃತಿಯ ಏಕೈಕ ಕೇಂದ್ರವೂ ಆದ ಅಥೆನ್ಸಿನಲ್ಲಿ. ಪ್ರ.ಶ.ಪೂ. ಸು. 486ರಂದು ಹರ್ಷನಾಟಕಕ್ಕೆ ಅಧಿಕೃತವಾಗಿ ಕೋರಸ್ಸು ಸಿಕ್ಕಿತು; ಎಂದರೆ ರಾಷ್ಟ್ರದ ಡಯೊನೈಸಿಯ ಲೀನಿಯ ಉತ್ಸವ ಸಮಯದಲ್ಲಿ ಅದೂ ಪ್ರದರ್ಶನಗೊಳ್ಳಬೇಕೆಂದು ನೇಮಕವಾಯಿತು. ಐದು ಕವಿಗಳಿಗೆ ಒಬ್ಬೊಬ್ಬರೂ ಒಂದೊಂದು ಕೃತಿ ಆಡಿಸುವಂತೆ ಏರ್ಪಾಡು. ಗೆದ್ದವನಿಗೆ ಬಹುಮಾನ. ಅವರು ಗಂಭೀರನಾಟಕದ ವಸ್ತುಸಂವಿಧಾನವನ್ನೇ ಅನುಕರಿಸಿ ಹರ್ಷನಾಟಕಕ್ಕೂ ಒಂದು ಅಂಗಾಂಗ ಸಂಯೋಜನೆಯನ್ನು ನೆರವೇರಿಸಿದರು. ಮೋದಗಾರರಿಂದ ಇಳಿದುಬಂದಿದ್ದ ಪರಿಹಾಸ ಚತುರೋಕ್ತಿ ವ್ಯಕ್ತಿವಿಡಂಬನ ಗೇಲಿಯ ಜೊತೆಗೆ ರಾಜಕೀಯ ಸಾಮಾಜಿಕ ಸಾಹಿತ್ಯಕ ಕಟುವಿಮರ್ಶೆಯನ್ನೂ ಸೇರಿಸಿದರು. ದೇವತೆಯ ಹಬ್ಬವಾದ್ದರಿಂದ ಕೋರಸ್ಸಿನ ನೃತ್ಯಗೀತ ಕಡ್ಡಾಯವಾಗಿ ಇರಬೇಕಾಯಿತು. ಹೀಗೆ ಕಾವ್ಯ ನಾಟ್ಯ ಸಂಗೀತ ಚಾಟೂಕ್ತಿ ಚರ್ಚೆ ಉಪದೇಶ ಭಾಷಣ ವಿಡಂಬನೆ ಮೊದಲಾದ ಅಂಶಗಳ ಕೂಟವಾದ್ದು ಹಳೆಯ ಹರ್ಷನಾಟಕದ ಸ್ವಂತಿಕೆ, ಸ್ವಾರಸ್ಯ, ಸೊಗಸು. ಕೋರಸ್ಸಿನ ಸಂಖ್ಯೆ 24; ಕೆಲವು ಸಾರಿ ಅದು 12, 12 ಆಗಿ ಇಬ್ಭಾಗವಾಗುತ್ತಿತ್ತು, ಮುಖ್ಯವಾಗಿ ಗಂಡು ಹೆಣ್ಣುಗಳ ಸಮಾಗಮ ಆವಶ್ಯಕವಾದಾಗ. ಆದಿಯಲ್ಲಿ ಒಂದು ಪೀಠಿಕೆ, ಆಮೇಲೆ ಪಕ್ಷಿಗಳಂತೆ ವಸನ ಧರಿಸಿದ ನೃತ್ಯಮೇಳದ ಪ್ರವೇಶ, ಅನಂತರ ನಾಟಕದ ಮುಖ್ಯವಿಷಯವಾದ ಒಂದು ಸೆಣಸಾಟ, ಅನಂತರ ನಮಗೆ ವಿಸ್ಮಯ ಹಿಡಿಸುವ ಒಂದು ವಿಚಿತ್ರ ಅಂಶ: ಮುಂಬರುವಿಕೆ (ಪ್ಯರಾಬಸಿಸ್). ಅದರಲ್ಲಿ ಮುಖ್ಯ ಪಾತ್ರವೊ ಪ್ರತ್ಯಕ್ಷವಾಗಿ ಕವಿಯೊ ರಂಗದ ಮುಂಭಾಗಕ್ಕೆ ಬಂದು ನಾನಾ ವಿಚಾರಗಳನ್ನು ಕುರಿತು ಸ್ಪಷ್ಟ ಅಭಿಪ್ರಾಯ ಒತ್ತಿಹೇಳುತ್ತಿದ್ದ. ಪ್ಯರಾಬಸಿಸ್ ಆದ ಮೇಲೆ ಕೆಲವು ಘಟನಾವಳಿ (ಎಪಿಸೋಡಿಯ). ಅವು ನಾಟಕದ ಕಥೆಯನ್ನು ಮುಂದುವರಿಸುವುದಕ್ಕಿಂತ ಹೆಚ್ಚಾಗಿ ಸೆಣಸಾಟದ ತೀರ್ಮಾನಕ್ಕೆ ಪುಷ್ಟಿಕೊಡುವ ಉದಾಹರಣೆ. ಮುಕ್ತಾಯವಾಗಿ ಭೋಜನಕೂಟಕ್ಕೋ ವಿವಾಹಕ್ಕೋ ತೆರಳುವ ಗಲಭೆ, ಮೆರವಣಿಗೆ.

ನಾಟಕದ ವಿಷಯ ಕಲ್ಪಿತವೂ ನವನವ್ಯವೂ ನಗು ಬರಿಸುವಂಥದೂ ದ್ವಿಪಕ್ಷವುಳ್ಳದ್ದೂ ಜಗಳಕ್ಕೆ ಆಸ್ಪದ ಕೊಡುವಂಥದೂ ಆದರೆ ಸಮಕಾಲೀನ ಪರಿಸ್ಥಿತಿಗೆ ಮೋಪಾಗಿ ಅನ್ವಯಿಸುವುದೂ ಆದ ಒಂದು ಸಮಸ್ಯೆ: ಈ ಹಾಳು ಒಲಂಪಿಕ್ ದೇವತೆಗಳಿಂದ ನರರಿಗೆ ತ್ರಾಸ: ಅವರೇತಕ್ಕೆ ಆಗಸದಲ್ಲಿ ಒಂದು ಅಡ್ಡ ರಾಜ್ಯ ಸ್ಥಾಪಿಸಿ ಆಹುತಿ ಅರ್ಪಣೆ ಯಾವುದೂ ದೇವತೆಗಳಿಗೆ ತಲಪದಂತೆ ತಡೆಗಟ್ಟಬಾರದು? ಗಂಡಸರು ಎಲ್ಲವನ್ನೂ ಹದಗೆಡಿಸಿಬಿಟ್ಟಿದ್ದಾರೆ: ಹೆಂಗಸರು ಆಡಳಿತವನ್ನು ಪೂರ್ತಿ ಕಸಿದುಕೊಂಡು ನೇರ್ಪಾಟಿಸಬಾರದೇತಕ್ಕೆ? ಸರಿ, ಎರಡು ಕಕ್ಷಿಗಳು ಅನಿವಾರ್ಯ; ವಾಗ್ಯುದ್ಧ ಹಣಾಹಣಿ ಆಗಲೇಬೇಕು. ನೃತ್ಯಮೇಳದ ಕೆಲಸ ಹೋರಾಟಕ್ಕೆ ಸಮಾಧಾನ ಬಗೆಯುವುದಲ್ಲ, ಅದನ್ನು ಇನ್ನೂ ಹೆಚ್ಚಾಗಿ ಉಲ್ಬಣಗೊಳಿಸುವುದು. ವಿನೋದಪ್ರಮುಖವಾದರೂ ಅರಿಸ್ಟಾಫನೀಸನ ನಾಟಕಗಳಲ್ಲಿ ಮನನೀಯವಾದ ವಿವೇಕತತ್ತ್ವ ಹೇರಳವಾಗಿದೆ; ಹಾಸ್ಯಗಾರನಾದರೂ ಅವನೊಬ್ಬ ಹೃದಯಸೂರೆಮಾಡುವ ಅತ್ಯುತ್ತಮ ಕವಿ, ಮನಸ್ಸು ತುಂಬುವ ದೊಡ್ಡ ದಾರ್ಶನಿಕ.

ಹಳೆಯ ಹರ್ಷನಾಟಕಕಾರರಲ್ಲಿ ಮೊದಲು ಹೆಸರು ಗಳಿಸಿದವ ಕ್ರಾಟಿನಸ್ (ಪ್ರ.ಶ.ಪೂ. ಸು. 520–ಪ್ರ.ಶ.ಪೂ. 423). ಆತ 21 ಕೃತಿಗಳನ್ನು ಕಟ್ಟಿದನಂತೆ. ಪ್ರಧಾನ ವ್ಯಕ್ತಿ ಪೆರಿಕ್ಲೀಸನನ್ನೇ ಆತ ತನ್ನ ವಿಡಂಬನೆಗೆ ಗುರಿಮಾಡಿದ. ಅವನೊಬ್ಬ ಕುಡುಕ, ಶಕ್ತಕವಿಯಾಗಿದ್ದರೂ ಅವನ ವೃದ್ಧಾಪ್ಯದಲ್ಲಿ ಯುವಕನಾದ ಅರಿಸ್ಟಾಫನೀಸ್ ಶೂರರು ಎಂಬ ತನ್ನ ನಾಟಕದಲ್ಲಿ ಅವನನ್ನು ಅಪಹಾಸ್ಯಗೈದ; ಕ್ರಾಟಿನಸ್ ರೇಗಿ ಮದ್ಯದ ಹೂಜಿ ಎಂಬ ಹರ್ಷನಾಟಕ ಬರೆದು, ಸ್ಪರ್ಧೆಯಲ್ಲಿ ಅರಿಸ್ಟಾಫನೀಸನ ಘನ ಕೃತಿ ಮೋಡಗಳು ಎಂಬುದನ್ನು ಸೋಲಿಸಿ, ಬಹುಮಾನ ಗಳಿಸಿದ. ಕ್ರೇಟೀಸ್ ಮತ್ತು ಅವನ ಹಿಂಬಾಲಕ ಪೆರಿಕ್ರೇಟೀಸ್ ಇಬ್ಬರೂ ಒಳ್ಳೆಯ ಕವಿಗಳು. ಕ್ರೇಟೀಸ್ ಮೊದಲಾಗಿ ಬಿಡಿ ವ್ಯಕ್ತಿಯ ಅವಹೇಳನವನ್ನು ತ್ಯಜಿಸಿ ಹಲವರಿಗೆ ಅನ್ವಯಿಸುವ ಸಾಧಾರಣ ಸಂಗತಿಯ ವಿಡಂಬನವನ್ನು ಬಳಕೆಗೆ ತಂದ. ಆಮೇಲೆ ಬಂದ ಯೂಪೋಲಿಸ್ ಶ್ರೇಷ್ಠ ಕವಿ, ಕಲ್ಪನಾ ಪ್ರವೀಣ, ಬಲಿಷ್ಠ ವಿಡಂಬನಕಾರ, ಅರಿಸ್ಟಾಫನೀಸನ ಸಮಕಾಲೀನ, ಸ್ನೇಹಿತ, ಜೊತೆಗಾರ ಕಾವ್ಯಕರ್ತೃ ಹಾಗೂ ವಿರೋಧಿ.

ನಡುವಣ ಹರ್ಷನಾಟಕದ ಬಗೆಗೆ ಹೇಳುವ ಸಂಗತಿ ಹೆಚ್ಚಾಗಿಲ್ಲ, ಹಳೆಯ ಹರ್ಷನಾಟಕದ ವ್ಯಕ್ತಿನಿಂದೆ, ಬಯ್ಗಳ, ಕೀಳು ಅಪಹಾಸ್ಯ ಅದರಲ್ಲಿ ಇರಲಿಲ್ಲ. ಬದಲಾಗಿ ಉಚ್ಚ ಕೃತಿಗಳ ಅಣಕ, ಪುರಾಣ ಕಥಾವಳಿಯ ಹೀನಯಿಕೆ, ತತ್ತ್ವಶಾಸ್ತ್ರದ ಟೀಕೆ, ಸಾಹಿತ್ಯದ ಲಘು ವಿಮರ್ಶೆಗಳು ತುಂಬಿಕೊಂಡು ರಸಯುಕ್ತವಾಗುತ್ತಿದ್ದುವು. ಆಂಟಿಫೇನೀಸ್ ಮತ್ತು ಅಲೆಕ್ಸಿಸ್ ನಡುನಾಟಕದ ಲೇಖಕರು. ಒಬ್ಬೊಬ್ಬರೂ ಇನ್ನೂರಕ್ಕೂ ಹೆಚ್ಚಾಗಿ ರೂಪಕ ರಚಿಸಿದರಂತೆ. ಅರಿಸ್ಟಾಫನೀಸ್ ಕೊನೆಯಲ್ಲಿ, ಎಂದರೆ ಪ್ರ.ಶ.ಪೂ. 388ರಲ್ಲಿ, ಬರೆದ ಕೃತಿ ಧನ (ಪ್ಲೂಟಸ್). ಇದು ಅವನ ಇತರ ಕೃತಿಗಳಿಂದ ಬಹುಮಟ್ಟಿಗೆ ಬೇರೆಯಾಗಿದೆ. ಅದು ಹಳೆಯ ಹರ್ಷನಾಟಕ ಅಲ್ಲವೇ ಅಲ್ಲ, ನಡುವಣ ಹರ್ಷನಾಟಕ ಎಂದು ತಜ್ಞರು ನಿರ್ಧರಿಸಿದ್ದಾರೆ. ನಡುವಣ ಹರ್ಷನಾಟಕದಲ್ಲಿ ಕಟ್ಟರೆ ಊಟದ ಮತ್ತು ಕಂಠಪೂರ್ತಿ ಪಾನದ ಆಸಕ್ತ ವರ್ಣನೆ ಮತ್ತೆಮತ್ತೆ ಬರುತ್ತಿತ್ತಂತೆ. ಅದು ಕವಿಗಳ ದೈಹಿಕಾಪೇಕ್ಷೆಯ ಕ್ಷುದ್ರತನವೆಂದು ದೂರಿದ್ದಾರೆ. ನಿಜಾಂಶ ಅದಲ್ಲ. ಆಗಿನದು ಬರಗಾಲ. ಕ್ಷುದ್ಬಾಧೆಯಿಂದ ಸಂತಪ್ತರಾದವರಿಗೆ ಮೃಷ್ಟಾನ್ನಭೋಜನದ ವಿವರಣೆಯೇ ಒಂದು ವಿಧದಲ್ಲಿ ತೃಪ್ತಿಕಾರಕ.

ಹೊಸ ಹರ್ಷನಾಟಕದ ಕರ್ತರಲ್ಲಿ ಮಿನಾಂಡರ್, ಫಿಲಿಮಾನ್, ಡೀಫಿಲಸ್ ಮುಖ್ಯರು. ಮೊದಲಿನ ಇಬ್ಬರೂ ಬರೆದ ರೂಪಕ 200ಕ್ಕೂ ಹೆಚ್ಚು; ಮೂರನೆಯವ ಬರೆದವು 100. ಮಿನಾಂಡರ್ ಬಹಳ ಖ್ಯಾತಿವಂತ, ದಕ್ಷ. ಅವರ ಯಾರದೂ ಒಂದು ಕೃತಿಯೂ ಉಳಿದುಬಂದಿಲ್ಲ. ಹೊಸ ನಾಟಕದ ಲಕ್ಷಣಗಳು ನಮಗೆ ಅರಿವಾಗಬೇಕಾದರೆ ಪ್ರಾಚೀನ ರೋಮನರ ಹರ್ಷನಾಟಕಕಾರರ ಬರವಣಿಗೆ ಉಂಟು, ಅದರ ನಿರ್ದುಷ್ಟ ಸಹಾಯವೂ ಉಂಟು. ರೋಮನರ ಟೆರೆನ್ಸ್, ಅವನಿಗಿಂತಲೂ ಹೆಚ್ಚಾಗಿ ಪ್ಲಾಟಸ್, ಗ್ರೀಕ್ 'ಹೊಸ' ಹರ್ಷನಾಟಕಕ್ಕೆ ಕನ್ನಡಿ. ಅದರ ಲಕ್ಷಣಗಳಲ್ಲಿ ಮುಖ್ಯವಾದವು ಇವು; ಕಾಲ್ಪನಿಕ ಪಾತ್ರಗಳ ಮೂಲಕ ಸಮಕಾಲದ ವಾಸ್ತವ ಜೀವನದ ಚಿತ್ರಣ; ಕಥಾಸಂವಿಧಾನದ ಅಚ್ಚುಕಟ್ಟು; ಪಾತ್ರಶಿಲ್ಪ; ಬರಿ ಚತುರೋಕ್ತಿಯಲ್ಲದ ಉತ್ತಮ ಹಾಸ್ಯ; ಮೇಲಾಗಿ ಸಾಹಸಗೂಡಿದ ರೊಮ್ಯಾಂಟಿಕ್ ಪ್ರಣಯ. ಹಲವಾರು ನಾಟಕಗಳಲ್ಲಿ ಕೊನೆಯ ಅಂಶದ ಮೇಲೆಯೇ ಅವಧಾರಣೆ. ನಾಯಕಿ ವೇಶ್ಯಾವರ್ಗಕ್ಕೆ ಸೇರಿದವಳಾಗಿರಬಹುದು. ಪ್ರಾಮಾಣಿಕ ಪ್ರಿಯ

ದೊರೆತು ಅವನ ಮುಖಾಂತರ ಅಡ್ಡಿ ಅಡಚಣೆ ದಾಟಿ ಅವಳು ಗೃಹಸ್ಥೆಯಾಗುತ್ತಾಳೆ. ಅಥವಾ ನಾಯಕಿ ಬಾಲ್ಯದಲ್ಲಿ ಅಪಹೃತಳಾಗಿ ಕೆಟ್ಟ ಹೆಂಗಸರ ಕೈಗೆ ಸಿಕ್ಕಿ ತೊಳಲಿ ಕೊನೆಗೆ ಒಬ್ಬ ಧೀರ ಬಂಧುವಿನಿಂದ ಬಿಡುಗಡೆ ಹೊಂದುತ್ತಾಳೆ. ಒಂದೆರಡು ನಾಟಕಗಳಲ್ಲಿ ಉನ್ನತ ವಂಶದವಳೋ ರಾಜಕುಮಾರಿಯಾದವಳೋ ಕಷ್ಟಗಳಿಗೆ ಪಕ್ಕಾಗಿ ಪಾರಾಗುತ್ತಾಳೆ. ಒಟ್ಟಿನಲ್ಲಿ ನಾಟಕ ನಗುವಿಗಿಂತಲೂ ಹೆಚ್ಚಾಗಿ ಒಳ್ಳೆಯ ರಾಗಭಾವವನ್ನು ಪ್ರಚೋದಿಸುತ್ತದೆ. ಹೊಸ ಹರ್ಷನಾಟಕಕ್ಕೆ ಯೂರಿಪಿಡೀಸನ ಇಯಾನ್ ಮೊದಲಾದ ನಾಟಕಗಳೇ ಆಕರ; ಆಧುನಿಕ ನಾಟಕ ಹೊಸ ಹರ್ಷನಾಟಕದ ಸಂತಾನ. (ಎಸ್.ವಿ.ಆರ್.)

ಅರಿಸ್ಟಾಫನೀಸ್ (448–385) ಸುಮಾರು ನಲವತ್ತು ನಾಟಕಗಳನ್ನು ಬರೆದ. ಹನ್ನೊಂದು ಉಳಿದಿದೆ. ಇವನ ನಾಟಕಗಳಲ್ಲಿ ಪ್ರಸಂಗಗಳು ಒಂದಕ್ಕೊಂದು ಹೊಂದಿಕೊಂಡು ವಿಕಸಿತವಾಗುವುದಿಲ್ಲ. ಇವನ ನಾಟಕಗಳಿಗಾಗಿ ನೃತ್ಯಮೇಳಗಳ ಹೆಸರುಗಳೇ ಸಾಮಾನ್ಯ ಕೆಲವು ನಾಟಕಗಳಲ್ಲಿ ಪ್ರಾಣಿಗಳು ಪಕ್ಷಿಗಳು ನೃತ್ಯಮೇಳ; ಆದುದರಿಂದಲೇ ಅವುಗಳಿಗೆ 'ದಿ ಫ್ರಾಗ್' 'ದಿ ಬರ್ಡ್ಸ್' ಮೊದಲಾದ ಹೆಸರುಗಳು.

ಪ್ರ.ಶ.ಪೂ. 413ರಲ್ಲಿ ಅಥೆನ್ಸ್ ಪೆಲೆಪೊನೀಷಿಯನ್ ಯುದ್ಧದಲ್ಲಿ ಸೋತು ಪೇಚೋವಧೆ ಅನುಭವಿಸಿತು. ಈ ಕಾಲದ ಅನಂತರ ಅರಿಸ್ಟಾಫನೀಸ್ ಬರೆದ ನಾಟಕಗಳಲ್ಲಿ ಹಿಂದಿನ ಲವಲವಿಕೆ, ಚೈತನ್ಯ, ಫ್ಯಾಂಟಸಿಯ ಪ್ರಾಧಾನ್ಯವಿಲ್ಲ. ಗ್ರೀಕ್ ನಾಟಕದ ಮಹಾಯುಗಕ್ಕೆ ತೆರೆ ಬೀಳುತ್ತಿರುವುದು ಸ್ಪಷ್ಟವಾಗಿದೆ.

ಇವರ ಮುಂಚಿನ ನಾಟಕಗಳು ಅದ್ಭುತ ಮನರಂಜನೆ ನೀಡುತ್ತವೆ. ಅರಿಸ್ಟಾಫನೀಸನ ಹಾಸ್ಯ ಯಾವಾಗಲೂ ಸದಭಿರುಚಿಯದು ಎಂದು ಹೇಳುವಂತಿಲ್ಲ. ನಮಗೆ ಅಸಾಧ್ಯ ಎನ್ನಿಸುವ, ತೀರ ಒರಟು ಎನ್ನಿಸುವ ಮಾತುಗಳೂ ಉಂಟು. ದೈಹಿಕ ಚಟುವಟಿಕೆಗಳನ್ನು ಆಧರಿಸಿದ ಹಾಸ್ಯವೂ ಉಂಟು.

ಅರಿಸ್ಟಾಫನೀಸ್ ಫ್ಯಾಂಟಸಿಯನ್ನು ದೃಷ್ಟಿಗೆ ರಂಜಕವಾಗಿ ಬಳಸುತ್ತಾನೆ. ಒಂದು ಅಸಂಬದ್ಧ ಕಲ್ಪನೆಯನ್ನು (ಉದಾ: ಭೂಮಿಗೂ ಸ್ವರ್ಗಕ್ಕೂ ನಡುವೆ ಗೋಡೆಯನ್ನು ಕಟ್ಟುವುದು) ಅದು ತರ್ಕಬದ್ಧ ಎನ್ನುವಂತೆ ಬಳಸಬಲ್ಲ. ತನ್ನ ಹಾಸ್ಯನಾಟಕಗಳಲ್ಲಿ ಗಂಭೀರ ವಿಷಯಗಳನ್ನು ಪ್ರಸ್ತಾಪಿಸಿದ. ಅವನು ತನ್ನನ್ನು 'ಡಿಸ್ಕಲಾಯ್' (ಉಪಾಧ್ಯಾಯ) ಎಂದು ಕರೆದುಕೊಳ್ಳುತ್ತಾನೆ. ತನ್ನ ನಗರದ ಆಡಳಿತದಲ್ಲಿ, ಧೋರಣೆಯಲ್ಲಿ ಕಂಡ ಸಣ್ಣತನವನ್ನು, ದ್ವೇಷ ಅಸೂಯೆಗಳನ್ನು ಎತ್ತಿ ತೋರಿಸುತ್ತಾನೆ. ಶಾಂತಿಗಾಗಿ ಹಂಬಲಿಸುತ್ತಾನೆ.

ಯುರೋಪಿನ ಸಾಹಿತ್ಯದ ಮೇಲೆ ಮಾತ್ರವಲ್ಲ, ಜಗತ್ತಿನ ಹಲವು ದೇಶಗಳ ಸಾಹಿತ್ಯಗಳ ಮೇಲೆ ಪ್ರಾಚೀನ ಗ್ರೀಕ್ ನಾಟಕ ಪ್ರಭಾವ ಬೀರಿದೆ. ಯುರೋಪ್ ಮತ್ತು ಅಮೆರಿಕಗಳ ನಾಟಕಕಾರರು ಮತ್ತೆ ಮತ್ತೆ ಪ್ರಾಚೀನ ಗ್ರೀಕ್ ನಾಟಕಗಳು, ಅವುಗಳಲ್ಲಿ ವ್ಯಕ್ತವಾದ ಜೀವನ ಪರಾಮರ್ಶೆ, ಇವುಗಳತ್ತ ತಿರುಗುತ್ತಾರೆ. ಕನ್ನಡ ಸಾಹಿತ್ಯದ ನವೋದಯದ ಪ್ರಾರಂಭದಲ್ಲಿ ಆಚಾರ್ಯ 'ಶ್ರೀ' ಯವರು ಈಸ್ಕಿಲಸನ 'ಪಾರಸಿಕರು' ನಾಟಕವನ್ನೇ ಅನುವಾದಿಸಿದರು. 'ಅಶ್ವತ್ಥಾಮ' ನಾಟಕಕ್ಕೆ ಸಾಫೊಕ್ಲೀಸನ 'ಅಯಾಸ್' ನಾಟಕವನ್ನು ಆಧಾರ ಮಾಡಿಕೊಂಡರು. ಪ್ರಾಚೀನ ಗ್ರೀಸ್‌ನ ಶ್ರೇಷ್ಠ ನಾಟಕಗಳು ಮತ್ತೆ ಮತ್ತೆ ಕನ್ನಡಕ್ಕೆ ಅನುವಾದವಾಗುತ್ತಲೇ ಇವೆ. (ಎಲ್.ಎಸ್.ಎಸ್.)

**ಗ್ರೀಕ್ ನ್ಯಾಯ :** ಮೂರು ಸಾವಿರ ವರ್ಷಗಳಿಗೂ ದೀರ್ಘವಾದ ಇತಿಹಾಸ ಪಡೆದಿರುವ ಗ್ರೀಸ್ ದೇಶ ಪಾಶ್ಚಾತ್ಯ ಸಂಸ್ಕೃತಿಯ ತೊಟ್ಟಿಲು ಎಂದು ಪರಿಗಣಿತವಾಗಿದೆ. ಒಂದು ದೇಶದ ಸಂಸ್ಕೃತಿಯ ಪ್ರಮುಖ ಲಕ್ಷಣಗಳಲ್ಲಿ ಅದರ ನ್ಯಾಯಸೂತ್ರಗಳೂ ಸೇರಿರುತ್ತವೆ. ಪ್ರಪಂಚದ ಚರಿತ್ರೆಯಲ್ಲಿ ವಿಶಿಷ್ಟವಾದಂಥ ಗುರುಶಿಷ್ಯ ಪರಂಪರೆಯ–ಸಾಕ್ರಟೀಸ್, ಪ್ಲೇಟೊ, ಅರಿಸ್ಟಾಟಲ್, ಅಲೆಗ್ಸಾಂಡರ್ ಇವರ–ವೈಚಾರಿಕ ಕೊಡುಗೆಗಳಲ್ಲಿ ಗ್ರೀಸ್ ದೇಶದಲ್ಲಿದ್ದ ನ್ಯಾಯದ ರೂಪರೇಷೆಗಳನ್ನು ಕಾಣಬಹುದು. ಅವರಿಗೂ ಹಿಂದಿನ ಕಾಲದ ಗ್ರೀಕ್ ನ್ಯಾಯದ ಸ್ವರೂಪವನ್ನು ಹೋಮರನ ಇಲಿಯಡ್ ಮತ್ತು ಒಡಿಸ್ಸಿ ಮಹಾಕಾವ್ಯಗಳಿಂದ ತಿಳಿಯಬಹುದು. ವಿಶ್ವದ ಪ್ರಮುಖ ನ್ಯಾಯವ್ಯವಸ್ಥೆಗಳಲ್ಲಿ ಗ್ರೀಕ್ ನ್ಯಾಯವೂ ಒಂದು. ಇದು ಒಂದು ಪ್ರಾಚೀನ ಕುರುಹು ಆಗಿರದೆ ಜೀವಂತ ಸಂಪ್ರದಾಯವಾಗಿದೆ. ಗ್ರೀಕ್ ನ್ಯಾಯದ ಇತಿಹಾಸವನ್ನು ಐದು ಪ್ರಮುಖ ಘಟ್ಟಗಳನ್ನಾಗಿ ಪರಿಗಣಿಸುವುದುಂಟು: 1 ಪ್ರಾಚೀನ ಯುಗ (ಗ್ರೀಸ್ ದೇಶ ರೋಮನ್ ಸಾಮ್ರಾಜ್ಯದ ಪ್ರಾಂತ್ಯವಾಗುವ ವರೆಗೆ), 2 ಹೆಲೆನಿಸ್ಟಿಕ್ ಯುಗ (ಬೈಜಾಂಟಿಯನ್ ಸಾಮ್ರಾಜ್ಯ ಸ್ಥಾಪನೆಯ ವರೆಗೆ), 3 ಬೈಜಾಂಟಿಯನ್ ಯುಗ (ಕಾನ್‌ಸ್ಟಾಂಟಿನೋಪಲ್ ನಗರದ ಪತನದ ವರೆಗೆ), 4 ಬೈಜಾಂಟಿಯನ್ ಅನಂತರದ ಯುಗ (1821ರ ಗ್ರೀಕ್ ಕ್ರಾಂತಿಯ ವರೆಗೆ) ಮತ್ತು 5 ಆಧುನಿಕ ಯುಗ (1821ರ ಗ್ರೀಕ್ ಸ್ವಾತಂತ್ರ್ಯ ಸಮರದಿಂದ ಈಚೆಗೆ).

1 **ಪ್ರಾಚೀನ ಯುಗ** : ಗ್ರೀಸ್ ದೇಶದ ನಗರರಾಜ್ಯಗಳ ಉದಯದ ಕಾಲದಿಂದ ಗ್ರೀಕ್ ನ್ಯಾಯ ವ್ಯವಸ್ಥಿತವಾಗಿ ಬೆಳೆದಿದೆ. ಅದಕ್ಕೆ ಮುಂಚೆ ಗ್ರೀಕ್ ನ್ಯಾಯಪದ್ಧತಿಗೆ ಪಂಗಡದ ಅಥವಾ ಬುಡಕಟ್ಟಿನ ನಿಯಮಗಳು ಮತ್ತು ಕಟ್ಟಳೆಗಳು ಆಧಾರವಾಗಿದ್ದುವು. ಬಂಧುತ್ವದ ಗುಂಪುಗಳಲ್ಲಿಯ ವ್ಯಾಜ್ಯಗಳನ್ನು ಸಾಧಾರಣವಾಗಿ ಪರಸ್ಪರ ಹೊಂದಾವಣೆಯ ಒಡಂಬಡಿಕೆಗಳ ಮೂಲಕ ಇತ್ಯರ್ಥಗೊಳಿಸಿಕೊಳ್ಳಲಾಗುತ್ತಿತ್ತು. ಪಂಗಡಗಳ ನಾಯಕರು, ರಾಜರು ಆಗಿನ ಕಾಲದಲ್ಲಿ ವ್ಯಾಜ್ಯಗಳನ್ನು ಬಗೆಹರಿಸುತ್ತಿದ್ದರು. ಪಂಗಡಗಳಲ್ಲಿ ಒಮ್ಮತವನ್ನು ಕಾಯ್ದುಕೊಳ್ಳಲು ಮತ್ತು ಪಂಗಡಗಳಲ್ಲಿ ಪರಸ್ಪರ ಸ್ನೇಹ ನಂಬಿಕೆಗಳನ್ನು ಕಾಯ್ದುಕೊಳ್ಳಲು ಏಕರೀತಿಯ ನಿಯಮಗಳನ್ನು ರೂಢಿಸಿಕೊಳ್ಳಬೇಕಾಯಿತು. ಈ ರೀತಿಯ, ರೂಢಿಗತವಾಗಿ ಬಂದ, ನಿಯಮಗಳು ಸಾಧಾರಣವಾಗಿ ಜನಪದ ಸ್ಮೃತಿಶಕ್ತಿಯನ್ನವಲಂಬಿಸಿದ್ದುವು. ಅವುಗಳಲ್ಲಿ ಬದಲಾವಣೆಯಾಗಲು ಬಹುಕಾಲ ಬೇಕಾಗುತ್ತಿತ್ತು. ವ್ಯತ್ಯಾಸ ಮಾಡದಿರುವುದಕ್ಕೆ ದೈವ ಭಯವೂ ಒಂದು ಕಾರಣವಾಗಿತ್ತು. ರಾಜರು ವಿವಾದಗಳನ್ನು ನಿರ್ಣಯಿಸುತ್ತಿದ್ದ ರೀತಿಯನ್ನು ಹೋಮರನ ಇಲಿಯಡ್ ಕಾವ್ಯದಲ್ಲಿ ಕಾಣಬಹುದು. ಪಂಗಡಗಳಲ್ಲಿ ನ್ಯಾಯವಿತರಣೆ ಹೆಚ್ಚಾಗಿ ಸ್ವಸಹಾಯ ಮತ್ತು ಜನಬೆಂಬಲವನ್ನವಲಂಬಿಸಿತ್ತು. ಆಪಾದಿತ ತನಗಿದ್ದ ಬಲದ ಮೇಲೆ ವಿವಾದವನ್ನು ಬಗೆಹರಿಸಿಕೊಳ್ಳುತ್ತಿದ್ದ. ಸ್ವಸಹಾಯ ಅಥವಾ ಇತರರ ಬಲವಿಲ್ಲದಿದ್ದಲ್ಲಿ ಅವನು ಓಡಿ ಹೋಗಬೇಕಾಗುತ್ತಿತ್ತು; ಇಲ್ಲವೇ, ತಪ್ಪು ಮಾಡಿರಲಿ ಮಾಡದಿರಲಿ, ತಪ್ಪು ಮಾಡಿದೆನೆಂದು ಒಪ್ಪಿಕೊಳ್ಳಬೇಕಾಗುತ್ತಿತ್ತು. ಪ್ರ.ಶ.ಪೂ. 7ನೆಯ ಶತಮಾನದ ವರೆಗೆ ಕೌಟುಂಬಿಕ ಜೀವನಕ್ಕೆ ಸಂಬಂಧಿಸಿದ ನಿಯಮಗಳಲ್ಲಿ ಯಾವ ಕ್ರಾಂತಿಕಾರಕ ಬದಲಾವಣೆಗಳೂ ಆದಂತೆ ಕಂಡುಬರುವುದಿಲ್ಲ. ಆದರೆ ಖೂನಿ ಮಾಡುವುದನ್ನು ತಡೆಗಟ್ಟುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಲು ಆರಂಭಮಾಡಿತು. ಖೂನಿ, ಸುಲಿಗೆ, ಕಳವು, ಹಟಸಂಭೋಗ ಮುಂತಾದ ಅನೇಕ ಅಪರಾಧಗಳ ವಿಚಾರಣೆ ಮತ್ತು ದಂಡನೆಗೆ ಸರ್ಕಾರ ಕ್ರಮೇಣ ವ್ಯವಸ್ಥೆ ಮಾಡತೊಡಗಿತು. ನ್ಯಾಯಾಧೀಶರು ನ್ಯಾಯವನ್ನು ನಿರ್ಣಯಿಸುವುದನ್ನು ಬಿಟ್ಟು ಕೇವಲ ಸಂಗತಿಗಳ ಆಧಾರದ ಮೇಲೆ ತೀರ್ಪು ಕೊಡುತ್ತಿದ್ದುದಕ್ಕೆ ಲಿಖಿತ ನ್ಯಾಯಸೂತ್ರಗಳಿಲ್ಲದಿದ್ದುದು ಮತ್ತು ಸಂಪ್ರದಾಯಗಳು ಅಸ್ಪಷ್ಟವಾಗಿದ್ದುದು ಕಾರಣಗಳಾಗಿದ್ದುವು. ಹೊಸ ಸಮಸ್ಯೆಗಳು ಉದ್ಭವಿಸಿದಾಗ ಅಂಥ ಸಂದರ್ಭಗಳಿಗೆ ಅನ್ವಯವಾಗುವ ನ್ಯಾಯಸೂತ್ರಗಳು ಇಲ್ಲದ್ದು ನ್ಯಾಯ ವಿತರಣೆಯಲ್ಲಿಯ ತೊಡಕುಗಳಲ್ಲಿ ಒಂದಾಗಿತ್ತು. ಪ್ರ.ಶ.ಪೂ. 683ರಲ್ಲಿ ಆರು ಸದಸ್ಯರ ಸಮಿತಿಯೊಂದನ್ನು ಸಂಪ್ರದಾಯಗಳ ನಿರ್ಣಯಕಾರರಾಗಿರಲು ನೇಮಿಸಲಾಗಿತ್ತು. ನ್ಯಾಯಾಧೀಶರು ತಾವು ನಿರ್ಧರಿಸಬೇಕಾಗಿದ್ದ ಘಟನೆಗಳಿಗೆ ಅನ್ವಯವಾಗುವ ನ್ಯಾಯಪತ್ರಗಳನ್ನು ಅವರಿಂದ ಪಡೆಯಬೇಕಾಗಿತ್ತು.

ಪ್ರ.ಶ.ಪೂ. 7ನೆಯ ಶತಮಾನದಲ್ಲಿ ಗ್ರೀಸ್ ದೇಶದ ನಗರ ರಾಜ್ಯಗಳು ನ್ಯಾಯಸೂತ್ರಗಳನ್ನು ಬರೆಯಿಸಿ ರಚಿಸಲು ಆರಂಭಿಸಿದುವು. ಎಲ್ಲ ನ್ಯಾಯಸೂತ್ರಗಳನ್ನೂ ಕ್ರೋಡೀಕರಿಸುವ ಮತ್ತು ಅವನ್ನು ಪ್ರಕಟಿಸುವ ಕಾರ್ಯವನ್ನು ಏಕಸದಸ್ಯ ನ್ಯಾಯ ನಿರ್ಧಾರಕನಿಗೆ (ನೋಮಾಥಿಟೀಸ್) ವಹಿಸಿಕೊಡುವ ಪದ್ಧತಿ ಜಾರಿಗೆ ಬಂತು. ಆ ಕಾಲದ ಕ್ರೋಡೀಕೃತ ಕೃತಿಗಳು ಉಪಲಬ್ಧವಾಗಿಲ್ಲ. ಕೆಲವು ಬಿಡಿಭಾಗಗಳು ಮಾತ್ರ ದೊರಕಿವೆ. ಏನು ಮಾಡಬೇಕು, ಏನು ಮಾಡಬಾರದು, ಮಾಡಬಾರದ್ದನ್ನು ಮಾಡಿದಾಗ ಮತ್ತು ನಿಯಮಗಳನ್ನು ಪಾಲಿಸದಿದ್ದಾಗ ಆ ಬಗ್ಗೆ ಕ್ರಮ ಮತ್ತು ದಂಡಗಳು–ಇವುಗಳ ಬಗ್ಗೆ ವಿವರಗಳು ದೊರೆತಿವೆ. ಈ ಪ್ರಾಚೀನ ಸಂಹಿತೆಗಳು ಧಾರ್ಮಿಕ ಮತ್ತು ವ್ಯಾವಹಾರಿಕ ನಿಯಮಗಳ ಸಂಗ್ರಹಗಳ ರೂಪದಲ್ಲಿರುತ್ತಿದ್ದುವು.

ಪ್ರತಿ ನಗರ ರಾಜ್ಯವೂ ತನ್ನದೇ ಆದ ನ್ಯಾಯಸೂತ್ರಗಳನ್ನು ಮತ್ತು ನ್ಯಾಯಿಕ ವ್ಯವಸ್ಥೆಯನ್ನು ಹೊಂದಿರುತ್ತಿತ್ತು. ಆದ್ದರಿಂದ ಆಗಿನ ಕಾಲದಲ್ಲಿ ಗ್ರೀಕ್ ನ್ಯಾಯವೆಂಬ ಏಕೈಕ ನ್ಯಾಯಿಕ ವ್ಯವಸ್ಥೆ ಇರಲಿಲ್ಲವಾದರೂ ಪ್ರ.ಶ.ಪೂ. 7ರಿಂದ ಪ್ರ.ಶ.ಪೂ. 4ನೆಯ ಶತಮಾನದ ವರೆಗಿನ ಕಾಲದಲ್ಲಿ ನ್ಯಾಯಸೂತ್ರಗಳ ಬೆಳವಣಿಗೆ ಏಕರೂಪದತ್ತ ಸಾಗಿತ್ತು. ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳಲ್ಲಿ ಬೆಳೆದುಬಂದ ಸಾಮಾನ್ಯ ನ್ಯಾಯ ಇಲ್ಲಿ ಬೆಳೆಯಲಿಲ್ಲ. ಅಥೆನ್ಸ್ ನಗರದ ಡ್ರೇಕೋ ಪ್ರ.ಶ.ಪೂ. 621ರ ಸುಮಾರಿಗೆ ಒಂದು ಸಂಹಿತೆಯನ್ನು ಸಿದ್ಧಗೊಳಿಸಿದ್ದ. ಝಲ್ಯೂಕಸ್ ಸಿದ್ಧಗೊಳಿಸಿದ್ದ ಸಂಹಿತೆ ಲೋಕ್ರಿಸಿನಲ್ಲಿ ಪ್ರಚಲಿತವಿತ್ತು. ಆ ನ್ಯಾಯಸೂತ್ರಗಳು ಸಿಬರಿಸಿನಲ್ಲೂ ಪ್ರಭಾವ ಗಳಿಸಿದ್ದುವು. ಕ್ಯಾಟನಕ್ಕೆ ಅನ್ವಯವಾಗುವಂತೆ ಸಿದ್ಧಗೊಳಿಸಲಾಗಿದ್ದ ನ್ಯಾಯಸೂತ್ರಗಳನ್ನು ಇಟಲಿ ಮತ್ತು ಸಿಸಿಲಿ ನಗರರಾಜ್ಯಗಳೂ ಅಳವಡಿಸಿಕೊಂಡಿದ್ದುವು. ಗ್ರೀಸಿನ ನಗರರಾಜ್ಯಗಳ ನ್ಯಾಯಸೂತ್ರಗಳಲ್ಲಿ–ಅದರಲ್ಲೂ ವಿವಾಹ, ವ್ಯವಹಾರ, ಉತ್ತರಾಧಿಕಾರ, ದತ್ತುಸ್ವೀಕಾರ ಮುಂತಾದವಕ್ಕೆ ಸಂಬಂಧಿಸಿದ ನ್ಯಾಯಸೂತ್ರಗಳಲ್ಲಿ–ಸಾಮ್ಯ ಇತ್ತು. ಅರಿಸ್ಟಾಟಲ್ ಮುಂತಾದವರು ಹೇಳುವಂತೆ ಅಥೆನ್ಸ್ ನಗರರಾಜ್ಯದ ನ್ಯಾಯಸೂತ್ರಗಳು ಬಹು ಮುಖ್ಯವಾದವು.

ಡ್ರೇಕೋಗಿಂತ ಮುಂಚೆ ಕೆಲವೇ ಜನ ಸರ್ಕಾರವನ್ನು ನಡೆಸುತ್ತಿದ್ದರು. ಜನತೆಯ ಬಹುಭಾಗ ಭೂಮಾಲೀಕರ ಪರವಾಗಿ ವ್ಯವಸಾಯ ಮಾಡುತ್ತಿದ್ದ ಜೀತಗಾರರು (ಸರ್ಫ್ಸ್). ಗೇಣಿಯನ್ನು ಸರಿಯಾಗಿ ಕೊಡದಿದ್ದವರನ್ನು ಗುಲಾಮರನ್ನಾಗಿ ಪರಿಗಣಿಸಲಾಗಿತ್ತು. ರಾಜ, ಪಾಲಿಮಾರ್ಕ್ (ದಂಡನಾಯಕ) ಮತ್ತು ಆರ್ಕಾನ್ (ಮುಖ್ಯನ್ಯಾಯಾಧೀಶ) ಇವರು ಕಾಲಾನುಕ್ರಮದಲ್ಲಿ ತೀರ್ಪುಗಳನ್ನು ಕೊಡುತ್ತಿದ್ದರು. ರಾಜಕೀಯ ಸಭೆಗಳಿಗೆ ಸದಸ್ಯರಾಗಿಯೂ

ಬರದಿದ್ದವರು ದಂಡ ತೆರಬೇಕಾಗುತ್ತಿತ್ತು. ಭೂಮಿ ಕೆಲವೇ ಜನರ ಸ್ವತ್ತಾಗಿತ್ತು. ಸಾಲ ವ್ಯಕ್ತಿಗತವಾಗಿತ್ತು. ಡ್ರೇಕೋನ ಮೇರೆಗೆ ಆರಿಜಪೆಗಸ್ ಪರಿಷತ್ತು ಆಗಿನ ನ್ಯಾಯಸೂತ್ರಗಳನ್ನು ರಕ್ಷಿಸಿಕೊಂಡು ಬರುತ್ತಿತ್ತು. ತೀರ್ಪುಗಳನ್ನು ಬಹಿರಂಗವಾಗಿ ಕೊಡುವುದಕ್ಕೆ ಮತ್ತು ಅವನ್ನು ಕಾಪಾಡಿಕೊಂಡು ಬರುವುದಕ್ಕೆ ಥೆಸ್ಮಾಥಿಟೀಸ್‌ರನ್ನು (ನ್ಯಾಯ ನಿರ್ಣಯಕಾರರು) ನೇಮಿಸುವ ಪದ್ಧತಿ ರೂಢಿಯಲ್ಲಿತ್ತು.

ಆಗಿನ ನ್ಯಾಯವ್ಯವಸ್ಥೆಗೂ ರಾಜಕೀಯ ಸ್ವರೂಪಕ್ಕೂ ನಿಕಟ ಸಂಬಂಧವಿತ್ತು. ಬಡವರ ಮತ್ತು ಶ್ರೀಮಂತರ ನಡುವೆ ರಾಜಕೀಯ ಹಕ್ಕುಬಾಧ್ಯತೆಗಳಿಗಾಗಿ ಘರ್ಷಣೆ ನಡೆಯುತ್ತಲೇ ಇತ್ತು. ಕೊನೆಗೆ ಉಭಯ ಪಕ್ಷದವರೂ ಸೇರಿ ಮಧ್ಯಸ್ಥ ಮತ್ತು ತೀರ್ಪುಗಾರನನ್ನಾಗಿ ಸೋಲಾನನನ್ನು (ಪ್ರ.ಶ.ಪೂ. ಸು. 639– ಪ್ರ.ಶ.ಪೂ. ಸು. 559) ನೇಮಿಸಿದರು. ಆತ ರೂಪಿಸಿದ್ದ ನ್ಯಾಯಸೂತ್ರಗಳ ರೂಪರೇಷೆಗಳು ಪುರಾತನ ಗ್ರಂಥಗಳಲ್ಲಿ ದೊರೆಯುತ್ತವೆ. ಆತನ ಕಾಲದಲ್ಲಿ ಸ್ವತ್ತಿನ ಆಧಾರದ ಮೇಲೆ ಚುನಾವಣೆಗಳು ನಡೆಯುತ್ತಿದ್ದುವು. ಆಸ್ತಿಯ ಆಧಾರದ ಮೇಲೆ ಸಾಲ ತೆಗೆದುಕೊಳ್ಳಬಹುದಾಗಿತ್ತು. ತನಗೆ ನ್ಯಾಯ ದೊರೆತಿಲ್ಲವೆಂಬ ಕಾರಣದ ಮೇಲೆ ನ್ಯಾಯದರ್ಶಿಗಳ ನ್ಯಾಯಾಲಯಕ್ಕೆ ಮೇಲರ್ಜಿ ಹಾಕಿಕೊಳ್ಳಬಹುದಾಗಿತ್ತು. ಗೌರವಾನ್ವಿತ ವರ್ಗಗಳಿಗೆ ಪ್ರತ್ಯೇಕ ವಿಶೇಷ ನ್ಯಾಯಾಧೀಶರನ್ನು ನೇಮಿಸಲಾಗುತ್ತಿತ್ತು. ಅಪರಾಧವನ್ನವಲಂಬಿಸಿ ದಂಡ ವಿಧಿಸುವುದಕ್ಕಿಂತ ವ್ಯಕ್ತಿಯ ವರ್ಗೀಕರಣದ ಮೇಲೆ ದಂಡ ವಿಧಿಸಲಾಗುತ್ತಿತ್ತು. ಪಿತ್ರಾರ್ಜಿತ ಸ್ವತ್ತಿಗೆ ಸ್ತ್ರೀಪುರುಷರು ವಾರಸುದಾರರಾಗಬಹುದಿತ್ತು. ಪ್ರಶ.ಪೂ. 450ಕ್ಕೆ ಮುಂಚೆ ಉಯಿಲು ಮಾಡುವ ಹಕ್ಕಿಗೆ ನ್ಯಾಯದ ಮನ್ನಣೆ ದೊರೆತಿರಲಿಲ್ಲ. ಹಟಸಂಭೋಗವನ್ನು ಅಪರಾಧವೆಂದು ಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು ಮತ್ತು ಆ ಬಗ್ಗೆ ದಂಡ ವಿಧಿಸಲಾಗುತ್ತಿತ್ತು. ದಂಡ ವ್ಯಕ್ತಿಯ ವರ್ಗೀಕರಣವನ್ನವಲಂಬಿಸಿದಂತೆ, ಸಾಕ್ಷಿಗಳ ಸಂಖ್ಯೆಗೂ ವರ್ಗೀಕರಣ ಆಧಾರವಾಗಿತ್ತು.

ಸೋಲಾನ್ ನರಹತ್ಯೆಗೆ ಸಂಬಂಧಿಸಿದ ನ್ಯಾಯಸೂತ್ರಗಳನ್ನುಳಿದು ಇತರ ನ್ಯಾಯಸೂತ್ರಗಳಲ್ಲಿ ಬದಲಾವಣೆ ಮಾಡಿದ. ಹುಟ್ಟಿನ ಆಧಾರದ ಮೇಲೆ ವ್ಯಕ್ತಿಯ ವರ್ಗೀಕರಣ ಮಾಡುವುದನ್ನು ತಪ್ಪಿಸಿ ಆಸ್ತಿಯ ಆಧಾರದ ಮೇಲೆ ವ್ಯಕ್ತಿಯ ವರ್ಗೀಕರಣ ಮಾಡಿದ. ಆಟಿಕದಲ್ಲಿಯ ಎಲ್ಲ ಸ್ವತಂತ್ರ ವಯಸ್ಕರಿಗೂ ಮತದಾನದ ಹಕ್ಕನ್ನು ನೀಡಲಾಗಿತ್ತು. ಸಾಮಾಜಿಕ ಸ್ಥಾನಮಾನ ಮತ್ತು ಸರ್ಕಾರಿ ಸೇವೆಗಳಲ್ಲಿ ವ್ಯಕ್ತಿಯ ವರ್ಗೀಕರಣ ಮಹತ್ತ್ವದ ಪಾತ್ರ ವಹಿಸುತ್ತಿತ್ತು. ಈ ನ್ಯಾಯಸೂತ್ರಗಳು ಹೆಚ್ಚಿನ ಬದಲಾವಣೆಯಿಲ್ಲದೆಯೇ ಪೈಸಿಸ್ಟ್ರೇಟಸ್ (ಮರಣ ಪ್ರಶ.ಪೂ. 57) ಮತ್ತು ಕ್ಲೈಸ್ಥೆನೀಸರ (ಪ್ರ.ಶ.ಪೂ. 507) ಕಾಲದಲ್ಲಿಯೂ ಜಾರಿಯಲ್ಲಿದ್ದುವು.

ಪ್ರ.ಶ.ಪೂ. 411ಕ್ಕೂ ಮುಂಚೆಯೇ ಕಾನೂನುಗಳನ್ನು ಪ್ರಜಾತಂತ್ರದ ತಳಹದಿಯ ಮೇಲೆ ರೂಪಿಸುವ ಕಾರ್ಯ ಆರಂಭವಾಗಿತ್ತು. ಅಲ್ಲಿಯವರೆಗೆ ಯಾವಾಗಲಾದರೊಮ್ಮೆ ಪ್ರಾಸಂಗಿಕವಾಗಿ ಕಾನೂನುಗಳನ್ನು ಮಾಡಲಾಗುತ್ತಿತ್ತು; ಕಾನೂನು ಮಾಡುವುದು ಸರ್ಕಾರದ ನಿಯತ ಚಟುವಟಿಕೆಗಳಲ್ಲಿ ಒಂದಾಗಿರಲಿಲ್ಲ. ಆದರೆ ಜನಸಾಮಾನ್ಯರ ಹಕ್ಕುಬಾಧ್ಯತೆಗಳಿಗೆ ಹೆಚ್ಚುಹೆಚ್ಚು ಮಾನ್ಯತೆ ದೊರೆತಂತೆಲ್ಲ, ಪ್ರಜಾತಂತ್ರದ ತಳಹದಿ ಭದ್ರವಾದ ಹಾಗೆಲ್ಲ ಅಥೆನ್ಸಿನ ನ್ಯಾಯಸೂತ್ರಗಳಲ್ಲಿ ವರ್ಷವರ್ಷಕ್ಕೂ ಬದಲಾವಣೆಯಾದ್ದನ್ನು ಕಾಣಬಹುದು. ವರ್ಷದ ಪ್ರಥಮ ಸಭೆಯಲ್ಲಿ ಇಂಥ ಬದಲಾವಣೆಗಳನ್ನು ಮತಕ್ಕೆ ಹಾಕುವುದರ ಮೂಲಕ ಮಾಡಲಾಗುತ್ತಿತ್ತು. ಸಂದರ್ಭದ ಆವಶ್ಯಕತೆಯನ್ನು ಪೂರೈಸುವ ಕಾನೂನಿನ ಉಪಬಂಧಗಳನ್ನು ಕುರಿತು ಪ್ರಕರಣಪ್ರಕರಣವಾಗಿ ಚರ್ಚಿಸಲಾಗುತ್ತಿತ್ತು. ಕಾನೂನುಗಳ ಅಧಿಕೃತ ಪ್ರತಿಯನ್ನು ಕಲ್ಲಿನ ಮೇಲೆ ಕೆತ್ತಿಸಲಾಗುತ್ತಿತ್ತು. ಪ್ರ.ಶ.ಪೂ. 410 – ಪ್ರ.ಶ.ಪೂ. 404ರಲ್ಲಿ ಕೆತ್ತಲಾದ ಕಲ್ಲಿನ ಫಲಕಗಳು ಮತ್ತು ಅದಕ್ಕೂ ಹಿಂದಿನ ಕಾಲದ ಡ್ರೇಕೋನ ಕಾನೂನುಗಳ ಫಲಕಗಳು ದೊರೆತಿವೆ. ಅಥೆನ್ಸಿನ ಕಾನೂನುಗಳು ಸರಳ ಭಾಷೆಯಲ್ಲಿದ್ದುವು. ಸಂದರ್ಭಗಳ ಆಧಾರದ ಮೇಲೆ ರಚಿತವಾಗಿದ್ದ ಇವುಗಳಲ್ಲಿ ವಿಶಿಷ್ಟ ಘಟನೆಯನ್ನು ಕುರಿತ ನ್ಯಾಯದ ವಿವೇಚನೆ ಇರುತ್ತಿತ್ತು. ಪ್ರಕ್ರಿಯಾನಿಯಮಗಳು ಹಲವು ಸಲ ನಿರ್ದಿಷ್ಟ ರೂಪದಲ್ಲಿ ಇರುತ್ತಿರಲಿಲ್ಲ; ಸಂಕ್ಷಿಪ್ತವಾಗಿಯೂ ಇರುತ್ತಿದ್ದುವು. ಒಮ್ಮೊಮ್ಮೆ ಬಹಳ ವಿವರವಾಗಿರುತ್ತಿದ್ದದ್ದೂ ಉಂಟು. ದಂಡಾಪರಾಧಿಗಳಿಗೆ ವಿಧಿಸಲಾಗುತ್ತಿದ್ದ ದಂಡಗಳು ಬಹಳ ಕಠೋರವಾಗಿದ್ದುವು. ವಿವಿಧ ದಂಡಗಳಲ್ಲಿ ಮರಣದಂಡನೆಯೂ ಒಂದಾಗಿತ್ತು.

ಗ್ರೀಕ್ ನ್ಯಾಯವ್ಯವಸ್ಥೆಯಲ್ಲಿ ಪ್ರಶ.ಪೂ. 4ನೆಯ ಶತಮಾನಕ್ಕೆ ಮುಂಚೆಯೇ ವಿವಾದಗಳ ವರ್ಗೀಕರಣ ಇದ್ದದ್ದನ್ನು ನೋಡಬಹುದು. ಸಾಧಾರಣವಾಗಿ ವಿವಾದಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗುತ್ತಿತ್ತು: 1 ವಿಶೇಷ ವಿವಾದಗಳು, 2 ಡಿಕಾಯ್ ಅಥವಾ ಖಾಸಗಿ ವಿವಾದಗಳು, 3 ಗ್ರಾಫಯ್ ಅಥವಾ ಸಾರ್ವತ್ರಿಕ ವಿವಾದಗಳು.

ವಿಶೇಷ ವಿವಾದಗಳನ್ನು ಮಹಾಪರಾಧಗಳನ್ನಾಗಿ ಪರಿಗಣಿಸಲಾಗುತ್ತಿತ್ತು. ರಾಜ್ಯ ವಿರೋಧಿ ಅಪರಾಧಗಳು, ರಾಜದ್ರೋಹಕ್ಕೆ ಸಂಬಂಧಿಸಿದ ಅಪರಾಧಗಳು, ಸರ್ಕಾರ ಅಥವಾ ಸೇನೆಗೆ ಎಸಗಿದ ವಿಶ್ವಾಸಘಾತಕ ಕೃತ್ಯಗಳು, ವೈರಿ ಸರ್ಕಾರ ಅಥವಾ ಸೇನೆಯ ಜೊತೆಗೆ ಇರಿಸಿಕೊಂಡಿದ್ದ ಗುಪ್ತ ವ್ಯವಹಾರಗಳು–ಇವೇ ಮುಂತಾದವು ಮಹಾಪರಾಧಗಳಾಗಿದ್ದುವು. ಇವಕ್ಕೆ ದಂಡಗಳನ್ನು ನಿಗದಿಗೊಳಿಸಲಾಗಿತ್ತು. ಸಂದರ್ಭಾನುಗುಣವಾಗಿ ಕಠೋರ ಇಲ್ಲವೆ ಸಾಮಾನ್ಯ ದಂಡಗಳನ್ನು ಹಾಕಲಾಗುತ್ತಿತ್ತು. ದುಷ್ಟ ಅಪರಾಧಿಗಳನ್ನು ವಿಚಾರಣೆಗೆ ಮುನ್ನ ಕಾರಾಗೃಹದಲ್ಲಿಡಲಾಗುತ್ತಿತ್ತು. ದಂಡದ ಮೊತ್ತ ಮತ್ತು ಅಪರಾಧದ ಘೋರತನವನ್ನು ಲಕ್ಷ್ಯದಲ್ಲಿಟ್ಟು ಪರಿಷತ್ತಿಗೆ ಅಥವಾ ಸಭೆಗೆ ವಿಚಾರಣೆಗಾಗಿ ವರ್ಗಾಯಿಸಲಾಗುತ್ತಿತ್ತು.

ಖಾಸಗಿ ವಿವಾದಗಳನ್ನು ನರಹತ್ಯೆಗೆ ಸಂಬಂಧಿಸಿದ ವಿವಾದಗಳು ಮತ್ತು ವ್ಯವಹಾರ ದಾವೆಗಳು ಎಂದು ವಿಂಗಡಿಸಬಹುದಾಗಿತ್ತು. ನರಹತ್ಯೆಗೆ ಸಂಬಂಧಿಸಿದ ನ್ಯಾಯಸೂತ್ರಗಳಲ್ಲಿ ಸ್ವಸಹಾಯ, ಬಲಾಬಲಗಳ ಪಾತ್ರ ಪ್ರಮುಖವಾಗಿತ್ತು. ತಂದೆ, ಸಹೋದರ, ಮಗ ಅಥವಾ ಮೃತನ ಇತರ ಸಂಬಂಧಿಕರು ಫಿರ್ಯಾದಿಗಳಾಗಬಹುದಿತ್ತು. ಡ್ರೇಕೋನ ಕಾಲಕ್ಕಾಗಲೇ ಉದ್ದೇಶಿತ ಕೊಲೆ ಮತ್ತು ಇತರ ರೀತಿಯ ಕೊಲೆಗಳಲ್ಲಿಯ ವ್ಯತ್ಯಾಸವನ್ನು ಗಣನೆಗೆ ತೆಗೆದುಕೊಳ್ಳಲಾಗಿತ್ತು. ಉದ್ದೇಶಿತ ಕೊಲೆಯ ವಿವಾದದ ಇತ್ಯರ್ಥವನ್ನು ಆರಿಜಪೆಗಸಿನ ಸರ್ವಸದಸ್ಯರ ಸಭೆ ಮಾಡುತ್ತಿತ್ತು. ಸಾಧಾರಣ ರೀತಿಯ ಅಪರಾಧಗಳನ್ನು 51 ಜನ ಸದಸ್ಯರು ವಿಚಾರಣೆ ಮಾಡುತ್ತಿದ್ದರು. ಉದ್ದೇಶಿತ ಕೊಲೆಗೆ ಸಾಮಾನ್ಯವಾಗಿ ಮರಣದಂಡನೆ ಅಥವಾ ದೇಶೋಚ್ಚಾಟನೆಯ ಶಿಕ್ಷೆ ವಿಧಿಸಲಾಗುತ್ತಿತ್ತು.

ವ್ಯವಹಾರ ದಾವೆಗಳನ್ನು ಸಂಬಂಧಪಟ್ಟವರು ಅಥವಾ ಅವರ ವಿಧಿಮಾನ್ಯ ಪ್ರತಿನಿಧಿಗಳು ಹಾಕಬಹುದಾಗಿತ್ತು. ಇತರ ಅನೇಕ ರೀತಿಯ ದಾವೆಗಳನ್ನು ಮಧ್ಯಸ್ಥರು ನಿರ್ಣಯ ಮಾಡುತ್ತಿದ್ದರು. ಪಂಚನಾಗಲು ನಿರಾಕರಿಸುವುದಕ್ಕೆ ರಾಜಕಾರ್ಯದ ಹೊರತು ಅನ್ಯಥಾ ಕಾರಣದಿಂದ ಸಾಧ್ಯವಿರಲಿಲ್ಲ. ಸಾರ್ವತ್ರಿಕ ವಿವಾದಗಳಿಗೂ ವ್ಯವಹಾರ ದಾವೆಗಳಿಗೂ ಹೆಚ್ಚಿನ ಭೇದವಿರಲಿಲ್ಲ. ಸಾರ್ವತ್ರಿಕ ವಿವಾದಗಳು ಸಾಮಾನ್ಯವಾಗಿ ಸಾಮಾಜಿಕ ಅಥವಾ ಧಾರ್ಮಿಕ ಜೀವನಕ್ಕೆ ಸಂಬಂಧಪಟ್ಟ ವಿವಾದಗಳಾಗಿರುತ್ತಿದ್ದುವು. ನ್ಯಾಯಾಧೀಶರು ವಕೀಲರಾಗಿರಬೇಕಾಗಿರಲಿಲ್ಲ. ಯಾರೂ ವಕೀಲರನ್ನು ನೇಮಿಸಿಕೊಳ್ಳಬೇಕಾಗಿರಲಿಲ್ಲವೆಂಬುದು ಪ್ರಾಚೀನ ಗ್ರೀಕ್ ನ್ಯಾಯವ್ಯವಸ್ಥೆಯ ಮುಖ್ಯ ಲಕ್ಷಣಗಳಲ್ಲಿ ಒಂದು. ವಿವಾದ ಉದ್ಭವಿಸಿದಾಗ ಗ್ರೀಕರು ಹೊಡೆದಾಡುತ್ತಿರಲಿಲ್ಲ. ನ್ಯಾಯಾಲಯಕ್ಕೆ ಹೋಗುವುದು ಸಾಮಾನ್ಯವಾಗಿತ್ತು. ವೃತ್ತಿಯಿಂದ ವಕೀಲರಲ್ಲದವರೂ–ಸರ್ವರೂ–ವಕೀಲರೆಂಬುದು ಗ್ರೀಕರ ಹೆಮ್ಮೆಯಾಗಿತ್ತು. ನ್ಯಾಯಾಧಿಕರಣದ (ಟ್ರಿಬ್ಯೂನಲ್) ಸದಸ್ಯರ ಸಂಖ್ಯೆ 201 ರಿಂದ 2,500ರ ವರೆಗೆ ಇರುತ್ತಿತ್ತು. ಆರಿಜಪೆಗಸಿನ ಸದಸ್ಯರ ಸಂಖ್ಯೆ 220 ಇರುತ್ತಿತ್ತು. ಸಾಕ್ಷ್ಯವನ್ನು ವಿವೇಚಿಸುವುದು ನ್ಯಾಯದರ್ಶಿಗಳ ಕಾರ್ಯವಾಗಿತ್ತು. ಪ್ರಮಾಣದ ಮೇಲೆ ಸಾಕ್ಷ್ಯವನ್ನು ಸ್ವೀಕರಿಸಲಾಗುತ್ತಿತ್ತು. ನರಹತ್ಯದ ಅಪರಾಧದ ಸಂಬಂಧದಲ್ಲಿ ಗುಲಾಮರು, ಹುಡುಗರು ಮತ್ತು ಹೆಂಗಸರ ಸಾಕ್ಷ್ಯವನ್ನು ಸ್ವೀಕರಿಸಲಾಗುತ್ತಿತ್ತು. ಪ್ರ.ಶ.ಪೂ. 403ರ ವರೆಗೆ ವಾದ ಮೌಖಿಕವಾಗಿರುತ್ತಿತ್ತು. ಆದರೆ ಮೇಲರ್ಜಿ ಹಾಕಬೇಕಾಗಿದ್ದ ಸಂದರ್ಭದಲ್ಲಿ ವಾದ ಲಿಖಿತರೂಪದಲ್ಲಿರುತ್ತಿತ್ತು. ವ್ಯಾವಹಾರಿಕ ವಿವಾದವನ್ನು ಯಾವಾಗ ಬೇಕಾದರೂ ಹಿಂತೆಗೆದುಕೊಳ್ಳಬಹುದಿತ್ತು. ವ್ಯಾಜ್ಯಗಳ ಸಂಬಂಧದಲ್ಲಿ ನ್ಯಾಯಾಲಯಕ್ಕೆ ಶುಲ್ಕ ಸಂದಾಯ ಮಾಡಬೇಕಾಗುತ್ತಿತ್ತು. ನ್ಯಾಯಾಲಯದಲ್ಲಿ ಗುಮಾಸ್ತರು ಇರುತ್ತಿದ್ದರು ಮತ್ತು ಅವರು ವಾದಿ–ಪ್ರತಿವಾದಿಗಳ ಮತ್ತು ಇತರರ ಉಲ್ಲೇಖಗಳನ್ನು ಓದಿ ಹೇಳುತ್ತಿದ್ದರು. ಸಾಕ್ಷಿಗಳು ಹಾಜರಿರಲು ಮತ್ತು ಸಾಕ್ಷ್ಯಕ್ಕೆ ಸಂಬಂಧಿಸಿದ ಕಾಗದಪತ್ರಗಳನ್ನು ಹಾಜರುಪಡಿಸಲು ಒತ್ತಾಯಪಡಿಸಬಹುದಾಗಿತ್ತು.

ಪ್ರ.ಶ.ಪೂ. 329 ರಿಂದ ಪ್ರ.ಶ.ಪೂ. 322ರ ವರೆಗಿನ ಅವಧಿಯಲ್ಲಿ ಅರಿಸ್ಟಾಟಲ್ ಅಥೆನ್ಸಿನ ಸಂವಿಧಾನವನ್ನು ಬರೆದಿರಬಹುದಾಗಿದೆ. ಸಮಾಜದಲ್ಲಿಯ ಆಂತರಿಕ ಸಂಬಂಧಕ್ಕೆ ಜನತೆಯೇ ಹೊಣೆಯೆಂಬ ಸೋಲಾನನ ಉಕ್ತಿ ಅಥೆನ್ಸಿನ ಜನಮನದಲ್ಲಿ ನೆಲೆನಿಂತಿತಷ್ಟೇ ಅಲ್ಲ, ಅನಂತರದ ಪೀಳಿಗೆಯಲ್ಲೂ ರಕ್ತಗತವಾಗಿದ್ದನ್ನು ಅರಿಸ್ಟಾಟಲನ, ಇತರರ ಗ್ರಂಥಗಳಿಂದ ತಿಳಿಯಬಹುದು. ಕೆಲವೇ ಜನ ನ್ಯಾಯಶಾಸ್ತ್ರ ಪಂಡಿತರ ಕೈಯಲ್ಲಿ ನ್ಯಾಯವ್ಯವಸ್ಥೆಯ ಹೊಣೆಯನ್ನು ವಹಿಸಿಕೊಡುವುದನ್ನು ಅಲ್ಲಿಯ ಜನ ಬಯಸಲಿಲ್ಲ. ಆದ್ದರಿಂದ ರೋಮನ್ ನ್ಯಾಯದಂತೆ ಗ್ರೀಕ್ ನ್ಯಾಯ ತಜ್ಞರ ಕೈಗೂಸಾಗಿ ಉಳಿಯದೆ ಸಾಮಾನ್ಯ ಜನತೆಯ ವಿವೇಕದ ಪ್ರತಿರೂಪವಾಗಿ ಬೆಳೆಯಿತು.

**2. ಹೆಲೆನಿಸ್ಟಿಕ್ ಯುಗ :** ಪ್ರ.ಶ.ಪೂ. 146–ಪ್ರ.ಶ. 565. ಪ್ರ.ಶ.ಪೂ. 1ನೆಯ ಶತಮಾನದ ಮುಕ್ತಾಯದ ವೇಳೆಗೆ ಗ್ರೀಕ್ ನಗರರಾಜ್ಯಗಳು ರೋಮನ್ ಸಾಮ್ರಾಜ್ಯದ ಭಾಗಗಳಾಗಿದ್ದುವು. ಅನೇಕ ಶತಮಾನಗಳ ವರೆಗೆ ಈ ಭೂಭಾಗದಲ್ಲಿ ರೋಮನ್ ಮತ್ತು ಗ್ರೀಕ್ ನ್ಯಾಯಸೂತ್ರಗಳು ಪರಸ್ಪರ ಪೂರಕವಾಗಿ ಬೆಳೆದುವು. ಪ್ರ.ಶ. 212ರಲ್ಲಿ ರೋಮನ್ ಸಾಮ್ರಾಜ್ಯದ ಸಮಸ್ತ ಜನರಿಗೂ ನಾಗರಿಕ ಹಕ್ಕುಬಾಧ್ಯತೆಗಳು ದೊರೆತಮೇಲೆ ರೋಮನ್ ಮತ್ತು ಗ್ರೀಕ್ ನ್ಯಾಯಸೂತ್ರಗಳಲ್ಲಿ ಹೆಚ್ಚಿನ ಒಡಂಬಡಿಕೆ ತಲೆದೋರಹತ್ತಿತು. ಎರಡೂ ನ್ಯಾಯವ್ಯವಸ್ಥೆಗಳ ಸಂಮಿಶ್ರ ಸ್ವರೂಪದ ನ್ಯಾಯಸೂತ್ರಗಳು ಆಚರಣೆಯಲ್ಲಿ ಬರಹತ್ತಿದವು. ಜಸ್ಟಿನಿಯನನ ನ್ಯಾಯಸೂತ್ರಗಳು ಗ್ರೀಕಿಗೆ ಭಾಷಾಂತರವಾದುವು. ಇವು ಮತ್ತು ಗ್ರೀಕರ ಪ್ರಾಚೀನ ನ್ಯಾಯಸೂತ್ರಗಳು ಪರಸ್ಪರ ಹೊಂದಿಕೆಯಾಗುವಂತೆ ಮಾರ್ಪಾಡು ಹೊಂದಿದುವು.

ರೋಮನರು ರಾಜಕೀಯವಾಗಿ ಗ್ರೀಸ್ ದೇಶವನ್ನು ವಶಪಡಿಸಿಕೊಂಡಿದ್ದರೂ ಗ್ರೀಕರ ಬಗ್ಗೆ ಅವರಿಗೆ ವೈಷಮ್ಯವಿರಲಿಲ್ಲ. ಅಲ್ಲದೆ ಗ್ರೀಕರ ಕಲೆ, ವೈಚಾರಿಕ ಪ್ರಜ್ಞೆ, ಸಾಹಿತ್ಯ ಇವುಗಳ ಬಗ್ಗೆ ಅವರಿಗೆ ಆದರವಿತ್ತು. ಅಂತೆಯೇ ಗ್ರೀಕ್ ನ್ಯಾಯ ಮತ್ತು ಸಂಸ್ಕೃತಿಗಳು ಉಳಿದುಕೊಂಡವು.

**3 ಬೈಜಾಂಟಿಯನ್ ಯುಗ:** 565–1453. ಬೈಜಾಂಟಿಯನ್ ಚಕ್ರಾಧಿಪತ್ಯದ ಕಾಲದಲ್ಲಿ ನ್ಯಾಯಸೂತ್ರಗಳನ್ನು ಗ್ರೀಕ್ ಭಾಷೆಯಲ್ಲಿ ಬರೆಯಲಾಗುತ್ತಿತ್ತು. ಎಕ್ಲೋಗ ಲೀಗಂ ಎಂಬ ನ್ಯಾಯಸಂಹಿತೆ 3ನೆಯ ಲಿಯೋ ಚಕ್ರವರ್ತಿಯಿಂದ (717–740) ಮಂಜೂರಾತಿ ಪಡೆದಿತ್ತು. ಈ ಕಾಲದ ಗ್ರೀಕ್ ನ್ಯಾಯವನ್ನು ರೋಮನರ ಸಂಪ್ರದಾಯಬದ್ಧತೆ, ಕ್ರೈಸ್ತಧರ್ಮದ ನೀತಿ ಮತ್ತು ಗ್ರೀಕರ ನ್ಯಾಯಿಕವಿವೇಚನೆ ಇವುಗಳ ತ್ರಿವೇಣೀಸಂಗಮವೆಂದು ಹೇಳಬಹುದು. ಈ ಕಾರಣದಿಂದಾಗಿ ಪೂರ್ವ ಐರೋಪ್ಯ ದೇಶಗಳಲ್ಲಿ ಮತ್ತು ಬಾಲ್ಕನ್ ದೇಶಗಳಲ್ಲಿ ಬೈಜಾಂಟಿಯನರ ಕಾಲದ ನ್ಯಾಯಸೂತ್ರಗಳ ಪ್ರಭಾವ ಬಿತ್ತು.

ಒಂಬತ್ತನೆಯ ಕಾನ್ಸ್‌ಟಂಟೈನ್ 1045ರ ಸುಮಾರಿಗೆ ಕಾನ್‌ಸ್ಟಾಂಟಿನೋಪಲಿನಲ್ಲಿ ಒಂದು ನ್ಯಾಯಶಾಸ್ತ್ರಶಾಲೆ ಆರಂಭಿಸಿದ. ಈ ಕಾಲದಲ್ಲಿ ನ್ಯಾಯಸೂತ್ರಗಳು, ನ್ಯಾಯವ್ಯವಸ್ಥೆ ಮತ್ತು ನ್ಯಾಯವಿತರಣೆಗಳನ್ನು ಕುರಿತು ಕೆಲವು ಸಂಗ್ರಹಗಳು ಪ್ರಕಟವಾದವು ಮತ್ತು ಗ್ರೀಕರ ಪುರಾತನ ಸಂಪ್ರದಾಯಗಳು ಮತ್ತು ಚರ್ಚಿನ ಕಾನೂನುಗಳು ಹೊರಬಂದವು.

4 **ಬೈಜಾಂಟಿಯನ್ ಅನಂತರದ ಯುಗ :** 1453–1821. ಕಾನ್‌ಸ್ಟಾಂಟಿನೋಪಲಿನ ಪತನ (1453), ಬೈಜಾಂಟಿಯನ್ ಸಾಮ್ರಾಜ್ಯದ ಅಂತ್ಯ, ತುರ್ಕರ ವಿಜಯ ಇವು ಗ್ರೀಕ್ ನ್ಯಾಯದ ಇತಿಹಾಸದಲ್ಲಿ ನಾಲ್ಕನೆಯ ಘಟ್ಟಕ್ಕೆ ಎಡೆಮಾಡಿಕೊಟ್ಟವು. ತುರ್ಕರ ನ್ಯಾಯ ಅತಿಧಾರ್ಮಿಕ ಸ್ವರೂಪದ್ದಾದ ಕಾರಣ ಅವರು ಗ್ರೀಕರ ನ್ಯಾಯವನ್ನು ವ್ಯಕ್ತಿಗತ ನ್ಯಾಯವನ್ನಾಗಿ ಪರಿಗಣಿಸಿದರು. ಸ್ಥಳೀಯ ಆಂತರಿಕ ವ್ಯವಹಾರವನ್ನು ಗ್ರೀಕರಿಗೆ ಬಿಟ್ಟುಕೊಟ್ಟಿದ್ದ ಕಾರಣ ಗ್ರೀಕ್ ನ್ಯಾಯ ಬೆಳೆಯಲವಕಾಶವಾಯಿತು. ಕಾಜಿಗಳು ಮುಸ್ಲಿಂ ಪ್ರಜೆಗಳಿಗೆ ಇಸ್ಲಾಮೀ ನ್ಯಾಯವನ್ನು ಮತ್ತು ಗ್ರೀಕ್ ಪ್ರಜೆಗಳಿಗೆ ಅವರ ವೈಯಕ್ತಿಕ ನ್ಯಾಯವನ್ನು ಅನ್ವಯ ಮಾಡುತ್ತಿದ್ದರು. ಥೆಸಲೋನಿಕದ ಒಬ್ಬ ನ್ಯಾಯಮೂರ್ತಿಯಾಗಿದ್ದ ಹಾರ್ಮೆನೊಪ್ಯುಲಾಸ್ 1345ರಲ್ಲಿ ಗ್ರೀಕೊ–ರೋಮನ್ ಅಥವಾ ಬೈಜಾಂಟಿಯನ್ ನ್ಯಾಯವನ್ನು ಆರು ಪುಸ್ತಕಗಳಲ್ಲಿ ಸಂಗ್ರಹಿಸಿ ಬರೆದ ಹೆಕ್ಸಬಿಬ್ಲಾಸ್ ಎಂಬುದು ಆಗ ಆಧಾರಗ್ರಂಥವಾಗಿತ್ತು. ಗ್ರೀಕರು ತಮ್ಮ ವಿವಾದಗಳನ್ನು ಕಾಜಿಗಳ ನ್ಯಾಯಾಲಯಗಳಿಗೆ ಸಾಮಾನ್ಯವಾಗಿ ತೆಗೆದುಕೊಂಡು ಹೋಗುತ್ತಿರಲಿಲ್ಲ. ಈ ಕಾರಣದಿಂದ ಸ್ಥಳೀಯ ಪ್ರಾಧಿಕಾರಕ್ಕೊಳಪಟ್ಟ ನ್ಯಾಯಾಲಯಗಳು, ಬಿಷಪ್ಪರ ನ್ಯಾಯಾಲಯಗಳು ಮತ್ತು ಕಾನ್‌ಸ್ಟಾಂಟಿನೋಪಲಿನ ಪೇಟ್ರಿಯಾರ್ಕ್ ನ್ಯಾಯಾಲಯ–ಇವು ಅಸ್ತಿತ್ವಕ್ಕೆ ಬಂದವು.

**5. ಆಧುನಿಕ ಯುಗ :** 1821ರ ಕ್ರಾಂತಿ ಗ್ರೀಕ್ ನ್ಯಾಯಶಾಸ್ತ್ರದ ಇತಿಹಾಸದಲ್ಲಿ ಒಂದು ಹೊಸ ಯುಗಕ್ಕೆ ನಾಂದಿಯಾಯಿತು. 1822 ಜನವರಿ 1 ರಂದು ಎಪಿಡಾರಸಿನಲ್ಲಿ ಸೇರಿದ್ದ ಕ್ರಾಂತಿಕಾರಿ ಸಭೆ ಫ್ರಾನ್ಸಿನಲ್ಲಿ ಘೋಷಿಸಲಾದ ಮಾನವ ಹಕ್ಕುಗಳ ಆಧಾರದ ಮೇಲೆ ರೂಪುಗೊಂಡ ಸ್ವತಂತ್ರ ಹಾಗೂ ಪ್ರಜಾಸತ್ತಾತ್ಮಕ ಸ್ವರೂಪದ ಸಂವಿಧಾನವನ್ನು ಅಂಗೀಕರಿಸಿತು. ಪರಮಾಧಿಕಾರವುಳ್ಳ ಸಂಸತ್ತನ್ನು ಸ್ಥಾಪಿಸುವ ಸಂವಿಧಾನ 1823ರಲ್ಲಿ ಅಸ್ತಿತ್ವಕ್ಕೆ ಬಂತು. ಆದರೆ ಟಾಯಿಜೀನದಲ್ಲಿ ಅಂಗೀಕರಿಸಲಾದ ಮೂರನೆಯ ಸಂವಿಧಾನದ ಮೇರೆಗೆ ಕಾರ್ಯಪಾಲಿಕಾಧಿಕಾರವನ್ನು ಕ್ಯಾಪೊಡಿಸ್ಟ್ರಿಯಾಸನಿಗೆ ವಹಿಸಿಕೊಡಲಾಯಿತು. ಈತ ತನ್ನ ಅಧಿಕಾರ ಚಲಾವಣೆಯ ನೆಪದಲ್ಲಿ ಸಂಸತ್ತನ್ನು ರದ್ದುಗೊಳಿಸಿದ. 1831ರ ವರೆಗೆ ರಾಜ್ಯಭಾರ ನಡೆಸಿದ. ಜನತೆಗೆ ಇವನ ಬಗ್ಗೆ ಗೌರವವಿರಲಿಲ್ಲ. ಹೀಗಾಗಿ ಇವನ ಕೊಲೆಯಾಯಿತು. ಗ್ರೀಸಿನಲ್ಲಿ ಸ್ವಲ್ಪ ಕಾಲ ಅರಾಜಕತೆಯಿತ್ತು. ರಾಜಕುಮಾರ ಓತೋ ಪ್ರಾಪ್ತವಯಸ್ಕನಾಗಿ ರಾಜನಾಗಿ ಬಂದಮೇಲೆ ಅರಾಜಕತೆ ಕಡಿಮೆಯಾಗಹತ್ತಿತ್ತು. ಆತನ ಸರ್ವಾಧಿಕಾರವೂ ಜನಕ್ಕೆ ಹಿತವೆನಿಸಲಿಲ್ಲ. 1844ರಲ್ಲಿ ಕ್ರಾಂತಿಯಾಗಿ ಫ್ರೆಂಚರ 1830ರ ಪ್ರಣಾಳಿಕೆಯ ಮಾದರಿಯ ಸಂವಿಧಾನ ಆಚರಣೆಗೆ ಬಂತು. 1862ರಲ್ಲಾದ ಮತ್ತೊಂದು ಕ್ರಾಂತಿಯ ಫಲವಾಗಿ ಓತೋ ಅಧಿಕಾರ ಕಳೆದುಕೊಂಡ. ಎರಡು ವರ್ಷಗಳ ಅನಂತರ 1ನೆಯ ಜಾರ್ಜ್ ಹೊಸ ಪ್ರಜಾಸತ್ತಾತ್ಮಕ ಸಂವಿಧಾನವನ್ನು ಘೋಷಿಸಿದ. ಈ ಸಂವಿಧಾನದ ಮೇರೆಗೆ ರಾಜಕೀಯ ಪರಮಾಧಿಕಾರ ಜನತೆಗೆ ಸೇರಿದ್ದು, ಶಾಸನವನ್ನು ಮಾಡುವ ಅಧಿಕಾರ ರಾಜ ಮತ್ತು ಸಂಸತ್ತುಗಳಲ್ಲಿ ನಿಹಿತವಾಗಿತ್ತು. ಮತಹಕ್ಕು ಪುರುಷರಿಗೆ ಪ್ರಥಮವಾಗಿ ದೊರೆತದ್ದು, ರಹಸ್ಯಮತದಾನ–ಇವು ಈ ಸಂವಿಧಾನದ ಪ್ರಮುಖ ಲಕ್ಷಣಗಳು.

1911ರಲ್ಲಾದ ಶಾಂತಿಯುತ ಮತ್ತು ರಕ್ತರಹಿತ ಕ್ರಾಂತಿಯ ಪರಿಣಾಮವಾಗಿ ಸಂವೈಧಾನಿಕ ಬದಲಾವಣೆಗಳಾದವು. ಸ್ವಲ್ಪ ಕಾಲ 1864ರ ಸಂವಿಧಾನ ಆಚರಣೆಯಲ್ಲಿತ್ತು. ಒಂದನೆಯ ಮಹಾಯುದ್ಧದ ಕಾಲದಲ್ಲಿ ಸಂವಿಧಾನವನ್ನು ಹಲವು ಸಲ ಸ್ಥಗಿತಗೊಳಿಸಲಾಗಿತ್ತು. 1927ರಲ್ಲಿ ರಾಜ ಮನೆತನದ ಅಧಿಕಾರವನ್ನು ರದ್ದುಗೊಳಿಸಲಾಯಿತು. ಆದರೆ 1935ರಲ್ಲಿ ರಾಜಮನೆತನದ ಅಧಿಕಾರ ಮತ್ತು ಹಿಂದಿನ ಸಂವಿಧಾನ ಮತ್ತೆ ಅಸ್ತಿತ್ವಕ್ಕೆ ಬಂದವು.

ಎರಡನೆಯ ಮಹಾಯುದ್ಧಾನಂತರ 1952ರಲ್ಲಿ ಹೊಸ ಸಂವಿಧಾನ ಕಾರ್ಯರೂಪಕ್ಕೆ ಬಂತು. 1967ರಲ್ಲಿ ಮಿಲಿಟರಿ ಕ್ರಾಂತಿಯಾಯಿತು. ಅದರಿಂದಾಗಿ 1952ರ ಸಂವಿಧಾನದ ಬಹುಭಾಗವನ್ನು ಸ್ಥಗಿತಗೊಳಿಸಲಾಯಿತು. ಇನ್ನೊಂದು ಸಂವಿಧಾನವನ್ನು ಸಿದ್ಧಗೊಳಿಸಲು ಒಂದು ತಜ್ಞರ ಸಮಿತಿಯನ್ನು ನೇಮಿಸಲಾಯಿತು. ಆ ಸಮಿತಿಯವರು ಸಿದ್ಧಗೊಳಿಸಿದ ಸಂವಿಧಾನವನ್ನು 1968ರ ಸೆಪ್ಟೆಂಬರ್ 29ರಂದು ಜನಮತಗಣನೆಯ ಮೂಲಕ ಅಂಗೀಕರಿಸಲಾಯಿತು. ಸಂವೈಧಾನಿಕ ಪರಿಮಿತ ರಾಜಪ್ರಭುತ್ವ ಹಾಗೂ ಸಂಸತ್ತಿನ ಅಧಿಕಾರ, ವ್ಯಕ್ತಿಸ್ವಾತಂತ್ರ್ಯ, ಬಂದಿಪ್ರತ್ಯಕ್ಷೀಕರಣ, ಶಾಸನ ದೃಷ್ಟಿಯಲ್ಲಿ ಸಮಾನತೆ ಮುಂತಾದವು ಇದರ ಮುಖ್ಯ ಲಕ್ಷಣಗಳು. ದೇಶದ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಲಾಗುವ ವಿದೇಶೀ ಹಣಕ್ಕೆ ಭದ್ರತೆ, ವಕೀಲ, ವೈದ್ಯಕ ವೃತ್ತಿಗಳು ನಾಗರಿಕರಿಗೆ ಮಾತ್ರ ಮೀಸಲು ಎಂಬ ಉಪಬಂಧಗಳು ಇದರಲ್ಲಿವೆ. ಈಗ ಗ್ರೀಸ್ ಗಣರಾಜ್ಯವಾಗಿದೆ.

ಗ್ರೀಕ್ ದಿವಾಣಿ ಸಂಹಿತೆಗೆ ಬೈಜಾಂಟಿಯನ್ ಸಾಮ್ರಾಟರ ಕಾನೂನುಗಳು ಆಧಾರವಾಗಿದ್ದುವು. ಆದರೆ 1827ರ ಸಂವಿಧಾನದಲ್ಲಿ ಫ್ರೆಂಚ್ ನ್ಯಾಯದ ಆಧಾರದ ಮೇಲೆ ಮುಂದಿನ ಸಂಹಿತೆಯನ್ನು ರೂಪಿಸಬೇಕೆಂಬ ಅಭಿಪ್ರಾಯವನ್ನು ವ್ಯಕ್ತಮಾಡಲಾಗಿತ್ತು. ಗ್ರೀಸಿನಲ್ಲಿ 1804ಕ್ಕಿಂತಲೂ ಮುಂಚಿನಿಂದಲೇ ಫ್ರೆಂಚ್ ನ್ಯಾಯಸೂತ್ರಗಳ ಪ್ರಭಾವ ಇತ್ತು. ಫ್ರೆಂಚ್ ವಾಣಿಜ್ಯ ಸಂಹಿತೆ ಗ್ರೀಕ್ ಭಾಷೆಗೆ ಅನುವಾದಗೊಂಡು ಅಲ್ಲೂ ಆಚರಣೆಗೆ ಬಂತು. 1823ರಲ್ಲಿ ಫ್ರೆಂಚ್ ದಂಡಸಂಹಿತೆಯ ಆಧಾರದ ಮೇಲೆ ದಂಡಸಂಹಿತೆಯನ್ನು ರಚಿಸಲಾಯಿತು. ಇತರ ವಿಷಯದಲ್ಲಿ ಬೈಜಾಂಟಿಯನ್ ಕಾನೂನುಗಳು ಆಚರಣೆಯಲ್ಲಿದ್ದುವು.

ಓತೋ ದೊರೆಯ ಕಾಲದಲ್ಲಿ ಜಿ.ಎಲ್. ಮೌರರನ ನೇತೃತ್ವದಲ್ಲಿ ಫ್ರೆಂಚ್ ಮತ್ತು ಬವೇರೀಯನ್ ಮಾದರಿಯಲ್ಲಿ ನಾಲ್ಕು ಸಂಹಿತೆಗಳನ್ನು ತಯಾರಿಸಲಾಯಿತು. ಇವುಗಳ ಪೈಕಿ ವ್ಯವಹಾರ ಸಂಹಿತೆ ಹಲವಾರು ತಿದ್ದುಪಡಿಗಳೊಡನೆ 20ನೆಯ ಶತಮಾನದ ಉತ್ತರಾರ್ಧದ ವರೆಗೆ ಆಚರಣೆಯಲ್ಲಿತ್ತು. ಹಾಗೆಯೇ ದಂಡಸಂಹಿತೆ ಮತ್ತು ದಂಡಪ್ರಕ್ರಿಯಾಸಂಹಿತೆಗಳೂ ಆಚರಣೆಯಲ್ಲಿದ್ದುವು.

ಗ್ರೀಕ್ ನ್ಯಾಯದ ಕ್ರೋಡೀಕರಣ ಕಾರ್ಯದಲ್ಲಿ 1922ರ ಅನಂತರ ಹೆಚ್ಚಿನ ಕಾರ್ಯ ನಡೆದಿದೆ ಎನ್ನಬಹುದು. 1922ರಲ್ಲಿ ಸಿದ್ಧಗೊಳಿಸಲಾದ ಕರಡು ಹಾಗೆಯೇ ಉಳಿಯಿತು. 1930ರಲ್ಲಿ ಒಂದು ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿಯವರು 1937ರಲ್ಲಿ ಕೆಲವು ಕರಡುಪತ್ರಗಳನ್ನು ಪ್ರಕಟಿಸಿದರು. ಈ ಕರಡುಗಳನ್ನು ಸಮನ್ವಯಗೊಳಿಸಲು ಜಿ. ವೇಲ್ಲನ್ನು ನೇಮಿಸಲಾಯಿತು. 1940ರಲ್ಲಿ ದಿವಾಣಿ ಸಂಹಿತೆ ಸಿದ್ಧವಾಯಿತು. ಇದು 1941ರ ಜುಲೈ ತಿಂಗಳಲ್ಲಿ ಆಚರಣೆಯಲ್ಲಿ ಬರಬೇಕಾಗಿತ್ತು. ಆದರೆ ವಿದೇಶಿ ಸೇನೆಯ ಆಕ್ರಮಣಕ್ಕೆ ದೇಶ ಒಳಗಾಯಿತು. ದೇಶ ಸ್ವತಂತ್ರವಾದ ಮೇಲೆ 1945ರಲ್ಲಿ ಒಂದು ಹೊಸ ಸಂಹಿತೆಯನ್ನು ಜಾರಿಗೆ ತಂದರೂ 1946ರಲ್ಲಿ ಹಿಂದಿನ 1940ರ ಸಂಹಿತೆಯನ್ನು ಆಚರಣೆಗೆ ತರಲಾಯಿತು.

ಗ್ರೀಸಿನ ಆಧುನಿಕ ನ್ಯಾಯವನ್ನು ದಿವಾಣಿ ಸಂಹಿತೆ, ವಾಣಿಜ್ಯ ಸಂಹಿತೆ, ದಂಡ ಸಂಹಿತೆ, ವ್ಯವಹಾರ ಪ್ರಕ್ರಿಯಾ ಮತ್ತು ದಂಡ ಪ್ರಕ್ರಿಯಾ ಸಂಹಿತೆಗಳು, ಸಾಮಾಜಿಕ ಸುಧಾರಣಾ ಕಾನೂನುಗಳು ಹಾಗೂ ಅಂತಾರಾಷ್ಟ್ರೀಯ ವೈಯಕ್ತಿಕ ಮತ್ತು ಸಾಮಾನ್ಯ ನ್ಯಾಯ ಎಂಬುದಾಗಿ ವಿಂಗಡಿಸಬಹುದು. ದಿವಾಣಿ ಸಂಹಿತೆಯಲ್ಲಿ ಸಾಮಾನ್ಯ ತತ್ತ್ವಗಳು, ಕರಾರುಗಳಿಗೆ ಅನ್ವಯಿಸುವ ನ್ಯಾಯಸೂತ್ರಗಳು, ಸ್ವತ್ತಿಗೆ ಸಂಬಂಧಿಸಿದ ನ್ಯಾಯಸೂತ್ರಗಳು, ಕೌಟುಂಬಿಕ ವಿಷಯಗಳಿಗೆ ಸಂಬಂಧಿಸಿದ ನ್ಯಾಯಸೂತ್ರಗಳು ಮತ್ತು ಉತ್ತರಾಧಿಕಾರ ಎಂಬ 5 ಭಾಗಗಳಿವೆ.

ಪ್ರಥಮ ಭಾಗದಲ್ಲಿ ದಿವಾಣಿ ನ್ಯಾಯದ ಸಾಮಾನ್ಯ ತತ್ತ್ವಗಳನ್ನು ವಿವೇಚಿಸುವಲ್ಲಿ ನ್ಯಾಯದ ಸಾಮಾನ್ಯ ಲಕ್ಷಣಗಳು, ವ್ಯಕ್ತಿ ಮತ್ತು ವಿಧಿಬದ್ಧ ವ್ಯಕ್ತಿ, ವಿಧಿಬದ್ಧವಲ್ಲದ ಮತ್ತು ವಿವರ್ಜ್ಯ ಕ್ರಿಯೆಗಳು, ಸರ್ವಸಮಾನತೆಯ ಆಧಾರದ ಮೇಲೆ ವಿವಾದಗಳನ್ನು ನಿರ್ಧರಿಸಲು ನ್ಯಾಯಾಧೀಶರಿಗೆ ಕೊಡಲಾಗಿರುವ ಅಧಿಕಾರ, ಸ್ವರಕ್ಷಣೆ, ಸ್ವಸಹಾಯ ಮುಂತಾದವುಗಳ ಬಗ್ಗೆ ಮತ್ತು ಕರಾರುಗಳ ಬಗ್ಗೆ ಹೇಳಲಾಗಿದೆ. ಎರಡನೆಯ ಭಾಗದಲ್ಲಿ ಕರಾರುಗಳನ್ನು ಕುರಿತ ನ್ಯಾಯದ ವಿವರಣೆ ಇದೆ. ಸ್ವತ್ತಿನ ವಿಕ್ರಯದ ತತ್ತ್ವಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಕರಾರುಗಳನ್ನು ಕಾರ್ಯರೂಪಕ್ಕೆ ತರುವುದನ್ನು ವಿವರಿಸಲಾಗಿದೆ. ಸ್ಥಿರಸ್ವತ್ತಿನ ವಿಕ್ರಯ, ಒಡೆತನದ ಹಸ್ತಾಂತರ ಇವುಗಳ ಬಗ್ಗೆಯೂ ಈ ಭಾಗದಲ್ಲಿ ಹೇಳಲಾಗಿದೆ. ವ್ಯವಹಾರಾಪಕೃತ್ಯದ ಬಗೆಗಿನ ಉಪಬಂಧಗಳೂ ಈ ಭಾಗದಲ್ಲಿವೆ.

ಸ್ವತ್ತನ್ನು ಕುರಿತ, ಎಂದರೆ ಸ್ವಾಧೀನತೆ ಮತ್ತು ಒಡೆತನ ಇವುಗಳ ಸಂಬಂಧದ ನ್ಯಾಯಸೂತ್ರಗಳು, ಸ್ವತ್ತು ಸಂಗ್ರಹಣೆಯ ವಿವಿಧರೀತಿಗಳು, ಸ್ವತ್ತಿಗೆ ಸಂಬಂಧವಿರುವ ಹಕ್ಕುಬಾಧ್ಯತೆಗಳು, ಒತ್ತೆ ಮುಂತಾದವುಗಳಿಗೆ ಸಂಬಂಧಿಸಿದ ಉಪಬಂಧಗಳು ಮೂರನೆಯ ಭಾಗದಲ್ಲಿವೆ. ನಾಲ್ಕನೆಯ ಭಾಗದಲ್ಲಿ ವಿವಾಹ ನಿಶ್ಚಿತಾರ್ಥ, ವಿವಾಹ, ತಂದೆತಾಯಿ ಮಕ್ಕಳ ಪರಸ್ಪರ ಸಂಬಂಧ, ಔರಸತ್ವ, ಪಾಲಕರ ಕರ್ತವ್ಯಗಳು ಇವೇ ಮುಂತಾದ ವಿಷಯಗಳಿಗೆ ಅನ್ವಯಿಸುವ ನ್ಯಾಯಸೂತ್ರಗಳು ಇವೆ.

ಉತ್ತರಾಧಿಕಾರಕ್ಕೆ ಸಂಬಂಧವಿರುವ ಉಪಬಂಧಗಳು ಐದನೆಯ ಭಾಗದಲ್ಲಿವೆ. ಇಚ್ಛಾಪತ್ರಮೂಲವಾದ ಉತ್ತರಾಧಿಕಾರ, ಇಚ್ಛಾಪತ್ರಹೀನ ಉತ್ತರಾಧಿಕಾರ, ಬಲವಂತದ ಉತ್ತರಾಧಿಕಾರ–ಹೀಗೆ ಮೂರು ರೀತಿಯ ಉತ್ತರಾಧಿಕಾರ ನಿಯಮಗಳಿವೆ.

ವಾಣಿಜ್ಯಕ್ಕೆ ಸಂಬಂಧಿಸಿದ 1804ರ ಫ್ರೆಂಚ್ ಮಾದರಿಯ ವಾಣಿಜ್ಯ ಸಂಹಿತೆ 1821ರ ವರೆಗೆ ಆಚರಣೆಯಲ್ಲಿತ್ತು. 1878ರ ವರೆಗೆ ಹೆಚ್ಚು ಬದಲಾವಣೆಗಳು ಆಗಲಿಲ್ಲ. 1878ರಲ್ಲಿ ದಿವಾಳಿತನಕ್ಕೆ ಸಂಬಂಧಿಸಿದ ಕಾನೂನು ಬದಲಾಯಿತು. ಹಾಗೆಯೇ 1958ರಲ್ಲಿ ಹೊಸ ಸಾಮುದ್ರವಿಧಿಗಳು ಆಚರಣೆಯಲ್ಲಿ ಬಂದವು. ಇವಲ್ಲದೆ ಅನೇಕ ಆಧುನಿಕ ಕಾನೂನುಗಳು ಜಾರಿಗೆ ಬಂದಿವೆ. ವಿಮಾ ಉದ್ಯಮವನ್ನು ನಿಗಮಗಳು ಮಾತ್ರ ನಡೆಯಿಸಬಹುದು. ಈ ವ್ಯವಹಾರ ಸರ್ಕಾರದ ನಿಯಂತ್ರಣಕ್ಕೊಳಪಟ್ಟಿರುತ್ತದೆ.

1834ರ ದಿವಾಣಿ ಸಂಹಿತೆಗೆ ಅನೇಕ ಬಾರಿ ತಿದ್ದುಪಡಿ ಮಾಡಲಾಗಿದೆ. ಎಲ್ಲ ದಿವಾಣಿ ವಿವಾದಗಳಲ್ಲಿ ಮೌಖಿಕ ವಾದ ಮತ್ತು ಪ್ರತಿವಾದಗಳಿಗೆ ಅವಕಾಶ ಉಂಟು. ಮ್ಯಾಜಿಸ್ಟ್ರೇಟರ ನ್ಯಾಯಾಲಯದ, ಮೂಲಾಧಾರವಿರುವ ನ್ಯಾಯಾಧೀಶರ ನ್ಯಾಯಾಲಯದ, ಅಪೀಲು ನ್ಯಾಯಾಲಯಗಳ, ಆರಿಜಿಪೆಗಸ್ ಎಂಬ ಶ್ರೇಷ್ಠ ನ್ಯಾಯಾಲಯದ ವ್ಯವಸ್ಥೆಯಿದೆ. 1968ರಲ್ಲಿ ಹೊಸ ದಿವಾಣಿ ಸಂಹಿತೆ ಆಚರಣೆಗೆ ಬಂತು. ನ್ಯಾಯಾಲಯದ ಸುಧಾರಣೆ ಮತ್ತು ಪ್ರಕ್ರಿಯೆಯ ಸುಧಾರಣೆ ಈ ಹೊಸ ಸಂಹಿತೆಯ ಉದ್ದೇಶ.

ದಂಡಸಂಹಿತೆ ಮತ್ತು 1834ರ ದಂಡ ಪ್ರಕ್ರಿಯಾಸಂಹಿತೆಗಳಿಗೆ ಬದಲಾಗಿ 1951ರಲ್ಲಿ ಹೊಸ ಸಂಹಿತೆಗಳು ಜಾರಿಗೆ ಬಂದವು. ಹಿಂದಿನ ಅನುಭವ ಇದರಲ್ಲಿ ವ್ಯಕ್ತವಾಗಿದೆ. ಕಾನೂನುಬಾಹಿರವಾಗಿ ಯಾವ ದಂಡವನ್ನೂ ವಿಧಿಸಲಾಗುವುದಿಲ್ಲ ಎಂಬ ತತ್ತ್ವವನ್ನು ದಂಡಸಂಹಿತೆಯಲ್ಲಿ ಅಳವಡಿಸಲಾಗಿದೆ. ಅಪರಾಧಗಳ ವರ್ಗೀಕರಣ ಮುಂತಾದ ವಿಷಯಗಳನ್ನು ಪ್ರತಿಪಾದಿಸಲಾಗಿದೆ. ಅಪರಾಧಗಳನ್ನು ಮತ್ತು ದಿವಾಣಿ ವಿವಾದಗಳನ್ನು ಒಬ್ಬನೇ ನ್ಯಾಯಾಧೀಶ ಬಗೆಹರಿಸಬಹುದು. ಘೋರ ಅಪರಾಧಗಳನ್ನು ತಡೆಯಲು ಜಾಹೀರುಮಾಡುವ ವಿಧಾನವನ್ನು ದಂಡಪ್ರಕ್ರಿಯಾ ಸಂಹಿತೆಯಲ್ಲಿ ಅಳವಡಿಸಲಾಗಿದೆ. ಬಾಲಾಪರಾಧ, ಮನೋರೋಗಿಗಳ ಅಪರಾಧಗಳು ಮುಂತಾದ ವಿಷಯಗಳು ಇದರಲ್ಲಿವೆ.

1909ರ ಶಾಂತಿಯುತ ಕ್ರಾಂತಿ, ಸಾಮಾಜಿಕ ಕಾನೂನುಗಳ ದೃಷ್ಟಿಯಿಂದ ಒಂದು ಹೊಸ ಯುಗಕ್ಕೆ ನಾಂದಿಯಾಯಿತು. ಕಾರ್ಮಿಕರ ಹಿತರಕ್ಷಣೆಯ ದಿಶೆಯಲ್ಲಿ ಅನೇಕ ಕಾನೂನುಗಳು ಜಾರಿಗೆ ಬಂದಿವೆ. ಕೆಲಸದ ಸ್ಥಳ, ವಾರ್ಷಿಕ ಬಿಡುವು, ಕೂಲಿ ಇವುಗಳ ಸಂಬಂಧದಲ್ಲಿ ಸುಧಾರಣೆಗಳು ಆಗಿವೆ. 1920ರಿಂದ ಈಚೆಗೆ ಮತ್ತಷ್ಟು ಸುಧಾರಣೆಗಳು ಆಗಿವೆ. ಕೆಲಸದಿಂದ ತೆಗೆದುಹಾಕುವುದು, ಪರಿಹಾರ ನೀಡಿಕೆ, ಕಾರ್ಮಿಕ ಮಧ್ಯಸ್ಥ ನಿರ್ಣಯ ಹಾಗೂ ಸಾಮಾಜಿಕ ಭದ್ರತೆ, ಕಾರ್ಮಿಕರ ಪರಿಹಾರ–ಹೀಗೆ ಅನೇಕ ವಿಷಯಗಳ ಬಗ್ಗೆ ಕಾನೂನುಗಳು ಇವೆ.

ದಿವಾಣಿಸಂಹಿತೆಯಲ್ಲಿ ಅಂತಾರಾಷ್ಟ್ರೀಯ ವೈಯಕ್ತಿಕ ನ್ಯಾಯಕ್ಕೆ ಸಂಬಂಧಿಸಿದ ಉಪಬಂಧಗಳಿವೆ. ಯಾವೊಂದೂ ವಿವಾದಕ್ಕೆ ಗ್ರೀಕ್ ಕಾನೂನುಗಳು ಅನ್ವಯವಾಗಬೇಕೆ, ಇಲ್ಲವೆ ಇತರ ದೇಶಗಳ ಕಾನೂನುಗಳು ಅನ್ವಯವಾಗಬೇಕೆ ಎಂಬುದಕ್ಕೆ ಆಯಾ ದೇಶಗಳೊಂದಿಗೆ ಗ್ರೀಕ್ ದೇಶ ಮಾಡಿಕೊಂಡಿರುವ ಒಪ್ಪಂದ ಆಧಾರವಾಗಿರುತ್ತದೆ. ಹೆಚ್ಚಾಗಿ ಒಂದೇ ದೇಶದ ಕಾನೂನುಗಳು ಅನ್ವಯವಾಗುವುದಕ್ಕೆ ಅವಕಾಶವಿದೆ. ಗ್ರೀಕ್ ದೇಶವಾಸಿ ಮತ್ತು ಪ್ರಜೆ ಎಂಬ ಆಧಾರದ ಮೇಲೆ ಅಂತಾರಾಷ್ಟ್ರೀಯ ವೈಯಕ್ತಿಕ ನ್ಯಾಯವನ್ನು ಅನ್ವಯಿಸಲಾಗುತ್ತದೆ. ರಾಜ್ಯರಹಿತರಾಗಿದ್ದವರಿಗೆ ವಾಸದ ನಿಮಿತ್ತ ಕೆಲವು ಹಕ್ಕುಬಾಧ್ಯತೆಗಳು ದೊರಕುತ್ತವೆ. 1955ರಲ್ಲಿ ಹೊಸ ಗ್ರೀಕ್ ಪ್ರಜೆತನದ ಸಂಹಿತೆ ಆಚರಣೆಯಲ್ಲಿ ಬಂತು. ಅದರಲ್ಲಿ ಪ್ರಜೆತನವನ್ನು ಹೇಗೆ ಪಡೆಯಬಹುದು ಮತ್ತು ಕಳೆದುಕೊಳ್ಳಬಹುದು ಎಂಬುದನ್ನು ಹೇಳಲಾಗಿದೆ. ಕೆಲವೊಂದು ಸಂದರ್ಭಗಳಲ್ಲಿ ಗ್ರೀಕ್ ಸ್ತ್ರೀಪ್ರಜೆ ಬೇರೆ ರಾಷ್ಟ್ರದ ಪ್ರಜೆಯೊಂದಿಗೆ ವಿವಾಹವಾದರೂ ತನ್ನ ಗ್ರೀಕ್ ಪ್ರಜೆತನವನ್ನು ಉಳಿಸಿಕೊಳ್ಳಬಹುದು. ವಿದೇಶೀಯರಿಗೂ ಶಾಸನ ದೃಷ್ಟಿಯಲ್ಲಿ ಸಮಾನತೆಯ ಹಕ್ಕು ಕೊಡಲಾಗಿದೆ. ಕಾನೂನು ಮತ್ತು ವೈದ್ಯವೃತ್ತಿಗಳನ್ನು ಗ್ರೀಕ್ ಪ್ರಜೆಗಳಿಗೆ ಮಾತ್ರ ಕಾಯ್ದಿರಿಸಲಾಗುತ್ತದೆ.

ಅಂತಾರಾಷ್ಟ್ರೀಯ ಸಾರ್ವತ್ರಿಕ ನ್ಯಾಯದ ಸಾಮಾನ್ಯ ನಿಯಮಗಳನ್ನು ದೇಶದ ಇತರ ಕಾನೂನುಗಳಂತೆ ಪರಿಗಣಿಸಲಾಗುತ್ತದೆ. ವಿದೇಶಗಳೊಂದಿಗೆ ಮಾಡಿಕೊಂಡ ಮತ್ತು ಅಂತಾರಾಷ್ಟ್ರೀಯ ಒಡಂಬಡಿಕೆಗಳು ಕಾನೂನು ರೂಪದಲ್ಲಿ ಆಚರಣೆಗೆ ಬರಬೇಕಾದರೆ ಸಂಸತ್ತಿನಿಂದ ಆ ಬಗ್ಗೆ ಶಾಸನವಾಗಬೇಕಾಗಿದೆ.

ಗ್ರೀಸ್ ಅನೇಕ ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ಸದಸ್ಯತ್ವ ಪಡೆದಿದೆ. ವಿದೇಶಗಳೊಂದಿಗೆ ಸಾರಿಗೆ ಸಂಪರ್ಕಗಳನ್ನು ಹೊಂದಿರುವುದರ ಜೊತೆಗೆ ಅನೇಕ ದೇಶಗಳೊಂದಿಗೆ ಪರಸ್ಪರವಾಗಿ ವಾಣಿಜ್ಯ ಮುಂತಾದ ಒಪ್ಪಂದಗಳನ್ನು ಮಾಡಿಕೊಂಡಿದೆ. ಪರರಾಷ್ಟ್ರಗಳೊಂದಿಗೆ ರಾಜಕೀಯ ಸಂಬಂಧಗಳನ್ನು ಇಟ್ಟುಕೊಂಡಿದೆ. ಹೀಗೆ ಆಧುನಿಕ ಅಂತಾರಾಷ್ಟ್ರೀಯ ನ್ಯಾಯ ಗ್ರೀಕ್ ನ್ಯಾಯದ ಮೇಲೆ ಪ್ರಭಾವ ಬೀರುತ್ತಿದೆ. ಇದೇ ರೀತಿ ಗ್ರೀಕ್ ನ್ಯಾಯದ ಇತಿಹಾಸ ಅಂತಾರಾಷ್ಟ್ರೀಯ ನ್ಯಾಯದ ಇತಿಹಾಸದ ಮೇಲೆ ಪ್ರಭಾವ ಬೀರಿದೆ. ಪ್ರಜಾತಂತ್ರ ಸ್ವರೂಪದ ಸರ್ಕಾರ, ಮಧ್ಯಸ್ತಿಕೆಯ ಮೂಲಕ ವಿವಾದಗಳನ್ನು ಇತ್ಯರ್ಥಗೊಳಿಸುವ ವಿಧಾನ ಮುಂತಾದ ಕೊಡುಗೆಗಳ ಮೂಲಕ ತನ್ನ ವಿಶಿಷ್ಟತೆಯನ್ನು ಎತ್ತಿ ತೋರಿಸುತ್ತದೆ. (ಎಲ್.ಎಸ್.ಜೆ.)

**ಗ್ರೀಕ್ ಭಾಷೆ :** ಇಂಡೊ–ಯುರೋಪಿಯನ್ ಪರಿವಾರದಲ್ಲಿ ಗಣನೆ ಮಾಡಲ್ಪಟ್ಟಿರುವ ಭಾಷೆಗಳಲ್ಲಿ ಬಹು ಮುಖ್ಯವಾದುದೊಂದು ಭಾಷೆ. ಈ ಪದ ಪ್ರಾಚೀನ ಕಾಲದ ಮತ್ತು ಇಂದಿನ ಗ್ರೀಸ್ ದೇಶದ ಉಪಭಾಷೆಗಳಿಗೆಲ್ಲ ಸಮಾನ ರೀತಿಯಲ್ಲಿ ಅನ್ವಯವಾಗುತ್ತದೆ. ಏಷ್ಯ ಮೈನರಿನ ಪಶ್ಚಿಮ ದಂಡೆಯಲ್ಲಿದ್ದು ಬಾಲ್ಕನ್ ದ್ವೀಪ, ದಕ್ಷಿಣ ಇಟಲಿ ಮತ್ತು ಸಿಸಿಲಿಗಳಲ್ಲಿ, ಅಯೋನಿಯನ್ ಮತ್ತು ಈಜಿಯನ್ ಸಮುದ್ರಗಳ ದ್ವೀಪದಲ್ಲಿ ಗ್ರೀಕ್ ಭಾಷೆಯ ಒಂದಿಲ್ಲೊಂದು ರೂಪ ವ್ಯವಹಾರದಲ್ಲಿತ್ತು. ಗ್ರೀಕಿನ ಮುಖ್ಯ ಭಾಷೆಗಳೆಂದರೆ ಅಯೋನಿಕ್, ಇಯಾಲಿಕ್, ಆರ್ಕೇಡಿಯನ್, ಸಿಪ್ರಿಯನ್ ಮತ್ತು ಡೋರಿಕ್. ಆಟಿಕ್ ಎಂಬ ಗ್ರೀಕ್ ರೂಪ ಅಯೋನಿಕ್‌ನಲ್ಲಿ ಸೇರಿದೆ.

ಪ್ರ.ಶ.ಪೂ 6 ಮತ್ತು 5 ನೆಯ ಶತಮಾನಗಳಲ್ಲಿ ಈ ಉಪಭಾಷೆಗಳು ವ್ಯವಹಾರದಲ್ಲಿದ್ದ ಪ್ರದೇಶಗಳು ಹೀಗಿವೆ. ಏಷ್ಯ ಮೈನರಿನ ಮಧ್ಯಭಾಗ, ಈಜಿಯನ್ ಸಮುದ್ರ ದ್ವೀಪಗಳು ಯುಬೋಆ ಮತ್ತು ಛಾಲ್ಸಿಡಿಯನ್ ದ್ವೀಪಗಳು–ಇಲ್ಲೆಲ್ಲ ಅಯೋನಿಕ್ ಉಪಭಾಷೆಯೂ ಆಟಿಕ ದ್ವೀಪದಲ್ಲಿ ಆಟಿಕ್ ರೂಪವೂ ಉತ್ತರದಲ್ಲಿ, ಮುಖ್ಯವಾಗಿ ಲೆಸ್‌ಬಾಸ್, ತೆಸ್ಸಲಿ ಮತ್ತು ಬೊಯೇಷಿಯಗಳಲ್ಲಿ ಇಯಾಲಿಕ್ ಉಪಭಾಷೆಯೂ, ಆರ್ಕೇಡಿಯದಲ್ಲಿ ಆರ್ಕೇಡಿಯನ್ ಭಾಷೆಯೂ, ಸಿಪ್ರಿಯದಲ್ಲಿ ಸಿಪ್ರಿಯನ್ ಭಾಷೆಯೂ, ಪೆಲೊಪಾನೀಸಿನಲ್ಲಿ, ಗ್ರೀಸಿನ ಈಶಾನ್ಯ ಭಾಗದಲ್ಲಿ ಮತ್ತು ದಕ್ಷಿಣ ಈಜಿಯನ್ ದ್ವೀಪಗಳಲ್ಲಿ ಡೋರಿಕ್ ಉಪಭಾಷೆಯೂ ಪ್ರಚಾರದಲ್ಲಿದ್ದವು. ಪ್ರ.ಶ.ಪೂ. ನಾಲ್ಕನೆಯ ಶತಮಾನದ ವೇಳೆಗೆ ಸಾಹಿತ್ಯದ ಹಿರಿಮೆಯಿಂದಾಗಿ ಮತ್ತು ರಾಜಕೀಯವಾಗಿ ಅಥೆನ್ಸಿನ ಪ್ರಾಧಾನ್ಯದಿಂದಾಗಿ ಆಟಿಕ್ ಉಪಭಾಷೆ ರಾಷ್ಟ್ರ ಭಾಷೆಯ ಸ್ಥಾನವನ್ನು ಗಳಿಸಿಕೊಂಡಿತು.

ಗ್ರೀಕ್ ಭಾಷೆಯ ಅತಿ ಪ್ರಾಚೀನ ಲಿಖಿತ ರೂಪವನ್ನು ಪ್ರ.ಶ.ಪೂ. ಎಂಟನೆಯ ಶತಮಾನದ ಶಾಸನಗಳಲ್ಲಿ ಕಾಣಬಹುದು. ಪ್ರ.ಶ. ನಾಲ್ಕನೆಯ ಶತಮಾನಕ್ಕೆ ಸೇರಿದ, ಚರ್ಮದ ಮೇಲೆ (ವೆಲಮ್) ಬರೆಯಲ್ಪಟ್ಟಿರುವ ಬೈಬಲ್ ಗ್ರಂಥವೇ ಗ್ರೀಕ್ ಭಾಷೆಯ ಪ್ರಾಚೀನ ಹಸ್ತಲಿಖಿತ ಪುಸ್ತಕ.

ಗ್ರೀಕಿನ ಕೆಲವು ಮುಖ್ಯ ಲಕ್ಷಣಗಳಿವು. ಇಂಡೊ–ಯುರೋಪಿಯನ್ ಮೂಲಭಾಷೆಯ ಸ್ವರವರ್ಣಗಳು ಸಂಸ್ಕೃತದಲ್ಲಿನಂತೆ ಬದಲಾವಣೆ ಹೊಂದದೆ ಇರುವುದು ಕಂಡುಬರುತ್ತದೆ. ಸಂಸ್ಕೃತದಲ್ಲಿ ಉಳಿದಿರುವ ಮೂಲಭಾಷೆಯ ವರ್ಣವೊಂದಾದ ಋ ಗ್ರೀಕ್ ಭಾಷೆಯಲ್ಲಿ ಆರ್ ಮತ್ತು ರ ರೂಪದಲ್ಲಿ ಕಾಣಬರುತ್ತದೆ (ಸಂಸ್ಕೃತದ ಪಿತೃಷು ಗ್ರೀಕ್ ಭಾಷೆಯ ಪತ್ರಸಿ). ರ ಕಾರದಿಂದ ಮೊದಲಾಗುವ ಪದಗಳಲ್ಲಿ ಪ್ರಾರಂಭದಲ್ಲಿದ್ದ ಮೂಲಭಾಷೆಯ ಧ್ವನಿಯೊಂದು ಸಂಸ್ಕೃತದಲ್ಲಿ ನಷ್ಟವಾಗಿದೆಯಾದರೆ ಗ್ರೀಕಿನಲ್ಲಿ ಅದು ಉಳಿದುಬಂದಿದೆ. ಸಂಸ್ಕೃತದ ರುಧಿರ ಗ್ರೀಕಿನಲ್ಲಿ ಎರುಥ್ರೋಸ್. ಸ್ವರಗಳೆರಡರ ನಡುವಣ ಸ ಮತ್ತು ಯ ಗ್ರೀಕಿನಲ್ಲಿ ಲೋಪ ಹೊಂದಿದೆ (ಸಂಸ್ಕೃತದ ತ್ರಸತಿ–ನಡುಗುತ್ತಾನೆ=ಗ್ರೀಕಿನ ತ್ರೆ ಓ; ಸಂಸ್ಕೃತದ ತ್ರಯಸ್–ಮೂರು= ಗ್ರೀಕಿನ ತ್ರೆ ಅಸ್). ಪದಾಂತ್ಯದಲ್ಲಿಯ ಮ ಗ್ರೀಕಿನಲ್ಲಿ ನ ಆಗಿದೆ (ಯುಗಂ–ನೊಗ= ಝುಗೊನ್). ದ್ವಿತ್ವ ದಂತ್ಯ ವರ್ಣಗಳಲ್ಲಿ ಮೊದಲ ವರ್ಣ ಸ ಆಗಿ ಮಾರ್ಪಟ್ಟಿದೆ (ವೇತ್ಥ–ತಿಳಿ=ಒಯ್‌ಸ್ಥ). ಪದಾದಿಯ ಯ ಮತ್ತು ಸ ಗಳು ಹ ರೂಪವನ್ನು ತಾಳಿವೆ (ಸಾ–ಅವಳು=ಹೇ;ಯಸ್–ಯಾರು=ಹೊಸ್). ಮೇಲಿನ ಉದಾಹರಣೆಯಲ್ಲಿ ಕಂಡುಬಂದಂತೆ ಕೆಲವೊಮ್ಮೆ ಯ ಜ಼ ಆಗಿ ಮಾರ್ಪಡುತ್ತದೆ. ಸ್ವರಗಳೆರಡರ ಮಧ್ಯದ ವ ಕಾರ ಗ್ರೀಕಿನಲ್ಲಿ ನಷ್ಟವಾಗಿದೆ. ಈ ಮಾರ್ಪಾಟಿನಿಂದ ಆ ಎರಡು ಸ್ವರಗಳು ಸಂಧಿಯ ಪರಿಣಾಮದಿಂದಾಗಿ ಒಂದು ಸ್ವರವಾಗುತ್ತವೆ. ಸ ಪೂರ್ವದ ಅನುನಾಸಿಕ ಲೋಪಗೊಂಡು ಅದರ ಪೂರ್ವಸ್ವರ ದೀರ್ಘವಾಗಿದೆ (ತಾನ್=ತಾಸ್=ತಾನ್‌ಸ್).

ಮಹಾಪ್ರಾಣ ಘೋಷ ವ್ಯಂಜನಗಳು ಗ್ರೀಕಿನಲ್ಲಿ ಅಘೋಷ ವ್ಯಂಜನಗಳ ರೂಪದಲ್ಲಿ ಉಪಲಬ್ಧವಾಗಿವೆ (ಧೂಮ–ಹೊಗೆ=ಥೂಮೊಸ್). ಮೂಲಭಾಷೆಯ ಕಂಠ್ಯವರ್ಣ ಗ್ರೀಕಿನಲ್ಲಿ ಪರ ಸ್ವರವನ್ನನುಸರಿಸಿ ಬದಲಾವಣೆ ಹೊಂದಿದೆ. ಪರ ಸ್ವರ ಅ ಅಥವಾ ಒ ಆಗಿದ್ದರೆ ಓಷ್ಠ್ಯ ವ್ಯಂಜನವಾಗಿಯೂ ಎ ಮತ್ತು ಇ ಆಗಿದ್ದಾಗ ದಂತವರ್ಣವಾಗಿಯೂ ಇತರ ಕಡೆಗಳಲ್ಲಿ ಕಂಠ್ಯವಾಗಿಯೂ ಕಂಡುಬರುತ್ತದೆ.

ಸಂಸ್ಕೃತದಲ್ಲಿರುವಂತೆಯೇ ಗ್ರೀಕ್ ಭಾಷೆಯಲ್ಲೂ ನಾಮಪದಗಳಲ್ಲಿ ಮೂರು ಬಗೆಯ ಲಿಂಗಗಳೂ (ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕಲಿಂಗ), ಮೂರು ಬಗೆಯ ವಚನಗಳೂ (ಏಕ, ದ್ವಿ ಮತ್ತು ಬಹುವಚನಗಳು) ಇವೆ. ಹಾಗೆಯೇ ಐದು ವಿಭಕ್ತಿ ರೂಪಗಳಿವೆ. ಸಂಸ್ಕೃತದ ಪಂಚಮೀ ರೂಪಕ್ಕೆ ಇಲ್ಲಿ ಷಷ್ಠೀ ರೂಪವನ್ನೇ ಬಳಸಿದೆ. ಸಂಸ್ಕೃತದ ತೃತೀಯ, ಸಪ್ತಮೀ ಮತ್ತು ಚತುರ್ಥಿಯಲ್ಲಿಯ ರೂಪಗಳಿಗೆ ಸರಿಸಮಾನವಾದ ರೂಪ ಗ್ರೀಕಿನಲ್ಲಿ ಕೇವಲ ಚತುರ್ಥಿರೂಪ.

ಕ್ರಿಯಾಪದಗಳಲ್ಲಿ ಸಂಸ್ಕೃತದಲ್ಲಿ ಕಂಡುಬರುವಂತೆ ಪರಸ್ಮೈ ಮತ್ತು ಆತ್ಮನೇ ಭೇದಗಳಿವೆ. ಇತರ ವಿವರಗಳೂ ಹೆಚ್ಚುಮಟ್ಟಿಗೆ ಸಂಸ್ಕೃತದಲ್ಲಿರುವಂತೆಯೇ ಇದೆಯೆನ್ನಬಹುದು.

ಸಂಸ್ಕೃತದಲ್ಲಿರುವ ಉದಾತ್ತ, ಅನುದಾತ್ತ ಮತ್ತು ಸ್ವರಿತಗಳಿಗೆ ಸರಿಸಮಾನವಾಗಿ ಗ್ರೀಕಿನಲ್ಲೂ ಮೂರು ಸ್ವರಗಳಿವೆ (ಆಕ್ಸೆಂಟ್ಸ್). ಅವುಗಳ ಸ್ವರೂಪ ಮತ್ತು ವರ್ಣನೆ ಎಲ್ಲ ಸಂಸ್ಕೃತ ಗ್ರಂಥಗಳಲ್ಲಿ ಕಂಡುಬರುವಂತೆ ಈ ಭಾಷೆಯ ಶಿಕ್ಷಾಗ್ರಂಥದಲ್ಲೂ ಕಂಡುಬರುತ್ತದೆ.

ಪ್ರ.ಶ.ಪೂ. 150ಕ್ಕೆ ಮೊದಲಿನ ಗ್ರೀಕ್ ಭಾಷೆಯಲ್ಲಿ ಎಯ್ (ei) ಮತ್ತು ಇ (i) ಭಿನ್ನವಾಗಿದ್ದವು. ತದನಂತರದ ಅವೆರಡರ ಲಿಖಿತ ರೂಪಗಳೂ ಒಂದೇ ಧ್ವನಿಸೂಚಕಗಳಾದುವು. ಹಾಗೆಯೇ ಮೂರನೆಯ ಶತಮಾನದ ಗ್ರೀಸಿನಲ್ಲಿ ಸಂಧ್ಯಕ್ಷರಗಳಿದ್ದುವು. ಪ್ರಶ.ಪೂ. ಎರಡನೆಯ ಶತಮಾನದ ಅಂತ್ಯಭಾಗದ ವೇಳೆಗೆ ಅವುಗಳೆಲ್ಲ ಸಮಾನಾಕ್ಷರಗಳಾಗಿ ಬದಲಾದುವು. ಪ್ರಾಚೀನ ಗ್ರೀಕ್ ಇಂದಿನ ಗ್ರೀಕ್ ಆಗಿ ಬದಲಾವಣೆಯಾಗಲು ಕಾರಣವಾದ ವ್ಯತ್ಯಾಸಗಳೆಲ್ಲ ಹೆಚ್ಚುಮಟ್ಟಿಗೆ ಪ್ರ.ಶ. ಮೊದಲಿನ ಮೂರು ನಾಲ್ಕು ಶತಮಾನಗಳ ಮತ್ತು ಅನಂತರದ ಮೂರು ನಾಲ್ಕು ಶತಮಾನಗಳ ನಡುವಣ ಕಾಲದಲ್ಲಿ ನಡೆದುವೆನ್ನಬಹುದು.

ಪ್ರಾಚೀನ ರೂಪದ ಉದಾತ್ತ, ಅನುದಾತ್ತ, ಸ್ವರಿತ ಸ್ವರಗಳು ಇಂದಿನ ಗ್ರೀಕಿನಲ್ಲಿ ಉಳಿದುಬಂದಿಲ್ಲ. ನಾಮಪದಗಳಲ್ಲಿ ಮತ್ತು ಕ್ರಿಯಾಪದಗಳಲ್ಲಿ ಕಂಡುಬಂದ ದ್ವಿವಚನ ರೂಪ ನಷ್ಟವಾಗಿದೆ. ಹಾಗೆಯೇ ಚತುರ್ಥೀ ವಿಭಕ್ತಿ ನಷ್ಟವಾಗಿ ಅದರ ಉಪಯೋಗವಿದ್ದ ಕಡೆ ಈಗ ದ್ವಿತೀಯ ಅಥವಾ ಷಷ್ಠೀ ವಿಭಕ್ತಿ ರೂಪದ ವಾಡಿಕೆ ಕಂಡುಬರುತ್ತದೆ. ಎಲ್ಲಕ್ಕಿಂತ ಹೆಚ್ಚಿನದಾಗಿ ಇಂದಿನ ಗ್ರೀಕ್ ಭಾಷೆಯ ಶಬ್ದ ಭಂಡಾರದಲ್ಲಿ ಅನ್ಯಭಾಷೆಯ ಶಬ್ದಗಳನೇಕವನ್ನು ಕಾಣಬಹುದು. ಲ್ಯಾಟಿನ್, ಇಟಾಲಿಯನ್ ಮತ್ತಿತರ ಆ ಗುಂಪಿಗೆ ಸೇರಿದ ಉಪಭಾಷೆಗಳು, ಸ್ಲಾವಿಕ್, ಆಲ್ಬೇನಿಯನ್ ಮತ್ತು ಮುಖ್ಯವಾಗಿ ತುರ್ಕಿ ಭಾಷೆಯ ಪದಗಳು ಇಂದಿನ ಗ್ರೀಕ್ ಭಾಷೆಯಲ್ಲಿ ತುಂಬಿಕೊಂಡಿವೆ. (ಎಚ್.ಎಸ್.ಎ.)

**ಗ್ರೀಕ್ ವಿಮರ್ಶೆ :** ಪ್ರಾಚೀನ ಗ್ರೀಸಿನಲ್ಲಿ ಅಧಿಕೃತ ಕಾವ್ಯವಿಮರ್ಶೆ ಕಾಣಸಿಗುವುದು ಸೃಜನಾತ್ಮಕ ಕಾವ್ಯಕೃಷಿ ಆದ ಹಲವಾರು ಶತಮಾನಗಳ ಅನಂತರ. ಎಂದರೆ ಪ್ರ.ಶ.ಪೂ. ಸು. 5ನೆಯ ಶತಮಾನದ ಕೊನೆಯ ಭಾಗದಲ್ಲಿ. ಅರಿಸ್ಟಾಫನೀಸ್ ಮುಂತಾದ ಹಳೆಯ ಹರ್ಷನಾಟಕಕಾರರೂ ಪ್ಲೇಟೋ ಮತ್ತು ಸಾಕ್ರಟೀಸರೂ ತತ್ತ್ವ ದೃಷ್ಟಿಯಿಂದಲೂ ಉದ್ದೇಶಪೂರ್ವಕವಾಗಿಯೂ ತಮ್ಮ ಕಾಲದ ಮತ್ತು ಹಿಂದಣ ಕವಿಗಳನ್ನು ಪರಿಶೀಲಿಸತೊಡಗಿದುದೇ ವಿಮರ್ಶೆಯ ಪ್ರಾರಂಭ. ಅದಕ್ಕೆ ಹಿಂದೆ ಜ್ಞಾನಿಗಳಿಂದಲೋ ಸ್ವತಃ ಕಾವ್ಯಕರ್ತರಿಂದಲೋ ಕಾವ್ಯವನ್ನು ಕುರಿತ ನಾನಾ ಹೇಳಿಕೆಗಳು ಆಗಿಬಂದುವು. ಕಾವ್ಯದ ಧ್ಯೇಯ ಯಾವುದು, ಕಾವ್ಯ ಹೇಗಿರಬೇಕು, ಹೇಗಿರಕೂಡದು, ಇತ್ಯಾದಿ ನೀತಿಸೂತ್ರ ಅವರಿಂದ ಘೋಷಿತವಾಯಿತು. ಭವ್ಯಕಾವ್ಯ, ಪ್ರಗಾಥ, ರೂಪಕ ಕಾವ್ಯ, ಚರಿತ್ರೆ, ತಾತ್ತ್ವಿಕ ಪ್ರಬಂಧ, ಭಾಷಣಗಳಲ್ಲಿ ಅಂಥ ವಾಕ್ಯಾವಳಿ ಪ್ರ.ಶ.ಪೂ. 8ನೆಯ ಶತಮಾನದಿಂದಲೂ ಕಾಣಬರುತ್ತವೆ. ಜನಜೀವನಕ್ಕೆ ಕಾವ್ಯ ನಿಕಟವೂ ಅತ್ಯಗತ್ಯವೂ ಆಗಿದ್ದಿತಾಗಿ ಜೀವನದ ಪ್ರಸ್ತಾಪ ಚಿಂತನೆಗೆ ಬಂದಾಗಲೆಲ್ಲ ಕಾವ್ಯದ ಪ್ರಸ್ತಾಪ ತಾನಾಗಿಯೇ ಉಕ್ಕಿ ಬರುತ್ತಿದ್ದುದು ನ್ಯಾಯವೆ. ಆದರೂ ಹೋಮರ್, ಪಿಂಡಾರ್, ಸಿಮೊನಿಡೀಸ್, ಹೆರಾಕ್ಲಿಟಸ್, ತ್ಯೂಸಿಡಿಡೀಸ್ ಮೊದಲಾದವರು ಕವಿಗಳು, ವಿಚಾರ ಸಾಹಿತಿಗಳು, ಚಾರಿತ್ರಕರೇ ಹೊರತು ವಿಮರ್ಶಕರಲ್ಲ. ಅವರೂ ಇತರರೂ ವಿಮರ್ಶೆಗೆ ತಳಹದಿ ಹಾಕಿದರೆಂದು ಧಾರಾಳವಾಗಿ ಹೇಳಬಹುದು. ಗ್ರೀಕರಿಗೆ ಕಾವ್ಯವೆಂಬುದು ಕೇವಲ ಒಂದು ಆಹ್ಲಾದಕಾರಕ ವಾಗ್ವ್ಯವಸಾಯವಾಗಿರಲಿಲ್ಲ. ಅದರಿಂದ ನೀತಿಬೋಧೆ ಆಗಲೇ ಬೇಕೆಂದು ಅವರ ಆಕಾಂಕ್ಷೆ. ಅರಿಸ್ಟಾಟಲ್ ಪ್ರವೇಶಮಾಡಿ ಕಾವ್ಯಕ್ಕೆ ಪ್ರತ್ಯೇಕ ಅಸ್ತಿತ್ವವೂ ಅದರದೇ ಆದ ಪರಿಣಾಮವೂ ಉಂಟೆಂದು ಸ್ಥಾಪಿಸಲು ಪ್ರಯತ್ನಿಸಿದ. ಆದರೆ ಅವನಲ್ಲಿಯೂ ಕಾವ್ಯಕಲಾಪದಿಂದ ಜನ ಒಳ್ಳೆಯತನ ಕಲಿಯತಕ್ಕದ್ದು ಎಂಬ ನಿಯಮದ ಕಿಂಚಿದ್ವಾಸನೆ ಇದ್ದೇ ಇದೆ.

ಕಾವ್ಯಸ್ಫೂರ್ತಿಯ ವಿಚಾರವಾಗಿಯೂ ಭಾಷಣವಿದ್ಯೆಯ ಎರಡು ಬಗೆಗಳ ಮೇಲೂ ಹೋಮರ್ ಗಮನಾರ್ಹವಾದ ಮಾತುಗಳನ್ನು ಆಡಿದ್ದಾನೆ. ಕಾವ್ಯ ರಚನೆಯಲ್ಲಿ ಆವೇಶದ ಭಾಗ ಎಷ್ಟು, ತಂತ್ರ ನಿಯಂತ್ರಣದ ಭಾಗ ಎಷ್ಟು ಎಂಬ ಸಮಸ್ಯೆಯನ್ನು ಪಿಂಡಾರ್ ಪುನಃ ಯೋಚನಾಪರರ ಮುಂದಿಟ್ಟ. ಕೊರಿನ್ನಾ ಎಂಬ ಕವಯಿತ್ರಿ ಪುರಾಣ ಕಥಾವಳಿಯನ್ನು ಹೆಚ್ಚಾಗಿ ಉಪಯೋಗಿಸದಿದ್ದರೆ ಲೇಸು ಎಂದು ಪಿಂಡಾರನಿಗೆ ಉಪದೇಶಿಸಿದಳು. ಸಿಮೊನಿಡೀಸ್ ಚಿತ್ರಣವನ್ನು ಮಾತಾಡದ ಕಾವ್ಯವೆಂದೂ ಕಾವ್ಯವನ್ನು ಮಾತಾಡುವ ಚಿತ್ರಣವೆಂದೂ ಕರೆದ. ಹೆರಾಕ್ಲಿಟಸ್ ಕ್ಸಿನೋಫೇನಸ್ ಮೊದಲಾದವರು ಬಿಡಿ ಕವಿಗಳನ್ನು ಕುರಿತು ಟೀಕೆ ಮಾಡಿದರು. ತ್ಯೂಸಿಡಿಡೀಸ್ ಕಾವ್ಯದ ಪ್ರಯೋಜನ ಆಹ್ಲಾದವೋ ಶೀಲಪ್ರಚೋದನೆಯೋ ಎಂಬ ಪ್ರಶ್ನೆಯನ್ನು ಒತ್ತಿ ಒತ್ತಿ ಕೇಳಿದ. ಅರಿಸ್ಟಾಟಲನ ತರುವಾಯವೂ ಲೇಖಕರು ತಮ್ಮ ಕೃತಿ ಯಾವ ಪ್ರಕಾರದ್ದೇ ಆಗಲಿ ಅದರಲ್ಲಿ ಇಂಥ ವಿಚಾರವಾಣಿಗೆ ಉತ್ಸಾಹದಿಂದ ಅವಕಾಶವೀಯುತ್ತಿದ್ದರು.

ಹೋಮರ್ ಹೆಸಿಯಡ್ಡರು ಗ್ರೀಕ್ ಸಂಸ್ಕೃತಿಗೆ ಮೂಲಾಧಾರ, ಮುಖ್ಯಾಧಾರ. ದೇವತೆಗಳಿಗೆ ಅವರಿಬ್ಬರೂ ಮಾನವತ್ವ ಆರೋಪಿಸಿ ದೈವದ್ರೋಹಿಗಳಾದರೆಂದು ಕೆಲವು ದಾರ್ಶನಿಕರು ಹೇಳಿದ್ದನ್ನು ಸಹಿಸಲಾರದೆ ಅನಾಕ್ಸಿಮಾಂಡರ್, ಸ್ಟೆಸಿಂಬ್ರೋಟಸ್, ಗ್ಲೌಕಸ್ ಮೊದಲಾದ ಕವಿಪ್ರೇಮಿಗಳು ಅವರ ಕಾವ್ಯವನ್ನು ಅನ್ಯಾರ್ಥ ಕಾವ್ಯವಾಗಿ ತೆಗೆದುಕೊಳ್ಳಬೇಕೆಂದು ವಾದಿಸಿದರು. ಅಪೊಲೊ ವಧೆಕಾರ, ಅವನ ಶರಜಾಲ ಕೊಲ್ಲುವ ಸಾಧನ–ಎಂದು ಭ್ರಾಂತಿ ಪಡುವುದು ತಪ್ಪು. ಅಪೊಲೊ ಸೂರ್ಯದೇವ, ಅವನು ಕಳಿಸುವುದು ರಶ್ಮಿಸಮೂಹ ಎಂದು ಅರ್ಥ ಮಾಡಿಕೊಳ್ಳಬೇಕು–ಈ ರೀತಿ ಕೆಲವರಿಂದ ಕವಿಸಮರ್ಥನೆ ನಡೆಯಿತು. ಇನ್ನೂ ಕೆಲವರಿಗೆ ಅನ್ಯಾರ್ಥಕ್ಕೂ ಹಿಂದೆ ಆಧ್ಯಾತ್ಮಿಕಾರ್ಥ ಗೂಢವಾಗಿದೆಯೆಂದೇ ನಂಬಿಕೆ. ಒಪ್ಪಲಾಗದ ಅಭಿಪ್ರಾಯವಾದರೂ ಇವು ಪ್ರಕಟಿಸುವ ಕಾವ್ಯಾದರವನ್ನು ಮೆಚ್ಚಬೇಕು; ಕಾವ್ಯಾದರ ಸಾಕ್ಷಾತ್ ವಿಮರ್ಶೆಯಲ್ಲದಿದ್ದರೂ ವಿಮರ್ಶೆಗೊಂದು ಸೋಪಾನ.

ಹಳೆಯ ಹರ್ಷನಾಟಕ ಜೀವನದ ವಿಡಂಬನಾತ್ಮಕ ವಿಮರ್ಶೆಯಲ್ಲದೆ ಮತ್ತೇನೂ ಆಗಿರಲಿಲ್ಲ. ಆ ನಾಟಕಕಾರರು ಪ್ರಮುಖವಾಗಿ ರಾಜಕೀಯ ಮುಂದಾಳುಗಳನ್ನು ಅವಹೇಳನಗೈಯುವ ಇಚ್ಛೆಯುಳ್ಳವರಾದರೂ ಸಾಕ್ರಟೀಸ್ ಮೊದಲಾದ ತತ್ತ್ವಜ್ಞರೂ ಯೂರಿಪಿಡೀಸ್ ಈಸ್ಕಿಲಸ್ ಮೊದಲಾದ ಗಂಭೀರನಾಟಕಕಾರರೂ ಅವರ ಲಕ್ಷ್ಯದಿಂದ ಹೊರಗಾಗಲಿಲ್ಲ. ಅರಿಸ್ಟೋಫೆನೀಸ್ ನಡೆಸಿರುವ ಹೋಲಿಕೆಯೂ ಸಾರಿರುವ ತೀರ್ಮಾನವೂ ಅತ್ಯುತ್ಕೃಷ್ಟ ವಿಮರ್ಶೆ. ಅವನ ಒಲವು ಹೆಚ್ಚಾಗಿ ಈಸ್ಕಿಲಸನ ಪರವಾಗಿ ಇದ್ದರೂ ಆ ಕವಿಯ ದೋಷಗಳಿಗೆ ಅವನು ಕಣ್ಮುಚ್ಚಲಿಲ್ಲ; ವಿರೋಧಿ ಯೂರಿಪಿಡೀಸನ ಸುಶ್ರಾವ್ಯ ಕವಿತ್ವಕ್ಕೆ ಮಾನ್ಯತೆ ಇದ್ದೇ ಇತ್ತು. ಕಾವ್ಯಪಂಕ್ತಿಗಳ ತೂಕ ಅಳತೆ ಮುಂತಾದ ವಿಚಾರ ವಿಮರ್ಶೆಯ ವೈಪರೀತ್ಯವನ್ನೂ ಆತ ಪರಿಹಾಸ ಮಾಡಿದ. ಎಲ್ಲಕ್ಕೂ ಮೇಲಾಗಿ ಮಹೋನ್ನತ ಕವಿ ಇಲ್ಲದಿದ್ದರೆ ಮನುಷ್ಯ ಸಮಾಜ ಮೆರೆಯಲಾರದು ಎಂಬ ಅವನ ಅಭಿಮತ ಸ್ವಾಗತಾರ್ಹ, ಮನನೀಯ, ಪ್ರಭಾವಯುಕ್ತ.

ಪ್ಲೇಟೊವಿನ ದೃಷ್ಟಿಗೆ ಕವಿಯ ನಿರೂಪಣೆ ಆದರ್ಶ ಸತ್ಯದಿಂದ ಎರಡು ಮಜಲು ಈಚೆ, ಆದ್ದರಿಂದ ಅದು ಸುಳ್ಳು. ಅಲ್ಲದೆ ಶ್ರೋತೃಗಳೂ ನೋಟಕರೂ ಭಾವಾತಿರೇಕದ ಆವೇಶದಲ್ಲಿ ತೊಳಲುವಂತೆ ಮಾಡಿ ಅವರನ್ನು ದುರ್ಬಲಗೊಳಿಸುತ್ತಾನೆ, ಕವಿ–ಎಂದು ಭಾಸವಾಯಿತು. ಮಾದರಿ ರಾಷ್ಟ್ರದಲ್ಲಿ ಕವಿವರ್ಗಕ್ಕೆ ಸ್ಥಾನವಿಲ್ಲ ಎಂದೇ ಅವನ ತೀರ್ಪು. ಇದೊಂದು ಮುಖ. ಇನ್ನೊಂದು ಮುಖವೂ ಉಂಟು. ತನಗೆ ರೆಕ್ಕೆಯಿದೆಯೊ ಎಂಬಂತೆ ಕವಿ ಮೇಲುಮೇಲಕ್ಕೆ ಏರಬಲ್ಲ. ತನ್ನ ಗಾನಸದೃಶವೂ ಚಿತ್ತಾಕರ್ಷಕವೂ ಆದ ಶಾಬ್ದಿಕ ಪ್ರೇರಣೆಯಿಂದ ನಮ್ಮನ್ನು ಮರುಳುಗೊಳಿಸಬಲ್ಲ; ಅವನೊಂದು ಪೂಜ್ಯ ವಸ್ತು–ಇದೂ ಪ್ಲೇಟೊವಿನ ವರ್ಣನೆಯೆ. ಅವನ ತಪ್ಪು ಅರ್ಥಗಳನ್ನು ಚರ್ಚಿಸುವುದೇ ವಿಮರ್ಶೆಗೆ ಉಪಯುಕ್ತವಾದ ಕೆಲಸವೆಂದು ಲೋಕದ ಅಭಿಪ್ರಾಯ. ಹಾಗೂ ಅರಿಸ್ಟಾಟಲನನ್ನು ಕೆರಳಿಸಿ ಕಾವ್ಯಮೀಮಾಂಸೆ ಅವನಿಂದ ಆಗುವಂತೆ ಎಸಗಿದುದೂ ಪ್ಲೇಟೊವಿನ ಪರಮೋಪಕಾರ.

ಅರಿಸ್ಟಾಟಲನ ಕಾವ್ಯಕಲೆ ಮತ್ತು ಭಾಷಣವಿದ್ಯೆ ಚಿಕ್ಕ ಪುಸ್ತಕಗಳಾದರೂ ವಿಮರ್ಶೆಯ ಒಂದು ಗ್ರಂಥಾಲಯಕ್ಕೆ ಸಮ. ಕಾವ್ಯಕ್ಕೂ ಚರಿತ್ರೆಗೂ ಇರುವ ಭೇದ, ಕಾವ್ಯಕ್ಕೂ ತತ್ತ್ವಶಾಸ್ತ್ರಕ್ಕೂ ಇರುವ ಭೇದ, ಅವೆರಡಕ್ಕಿಂತ ಕಾವ್ಯದ ಹಿರಿಮೆಯೇನು, ಕಾವ್ಯದ ಪ್ರಕಾರಗಳಾದ ಭವ್ಯಕಾವ್ಯ ಗಂಭೀರನಾಟಕ ಹರ್ಷನಾಟಕ ಪ್ರಗಾಥಗಳ ವೈಲಕ್ಷಣ್ಯ ಎಲ್ಲಿದೆ, ಗಂಭೀರನಾಟಕದ ಆರು ಅಂಗಗಳು, ಅವುಗಳಲ್ಲಿ ವಸ್ತುಸಂವಿಧಾನಕ್ಕೆ ಏತಕ್ಕೆ ಪ್ರಾಧಾನ್ಯ, ಉಳಿದ ಅಂಗಗಳ ಸ್ವರೂಪ, ನಾಯಕನ ಗುಣಧರ್ಮ ಎಂತಿರಬೇಕು, ಅವನ ಸ್ಥಿತಿವ್ಯತ್ಯಾಸಕ್ಕೆ ಯಾವುದು ಕಾರಣ, ಗಂಭೀರ ನಾಟಕದಿಂದ ಆಗುವ ಚಿತ್ತಶುದ್ಧಿ, ಕಾವ್ಯ ಭಾಷೆ, ನೃತ್ಯಮೇಳ ರಂಗಸಜ್ಜುಗಳ ವಿಚಾರ–ಇವು ಕಾವ್ಯಕಲೆ ವಿವರಿಸುವ ವಿಷಯ. ಭಾಷಣ ವಿದ್ಯೆಯನ್ನು ಸ್ವಲ್ಪಮಟ್ಟಿನ ಗದ್ಯಮೀಮಾಂಸೆಯೆಂದೂ ನಿರ್ದೇಶಿಸಬಹುದು. ಪ್ರ.ಶ.ಪೂ.4ನೆಯ ಶತಮಾನದಲ್ಲಿ ವಾಗ್ಮಿತ್ವಕ್ಕೆ ಅತಿಶಯ ಉಪಯೋಗವೂ ಅದರ ಆವಶ್ಯಕತೆಯೂ ಇದ್ದುವು. ಗದ್ಯ ಹೇಗಿದ್ದರೆ ಮನವೊಪ್ಪಿಸುತ್ತದೆ, ಭಾಷಣದ ಅಂಗಗಳಾವುವು. ಅವುಗಳ ಯುಕ್ತ ಸಂಯೋಜನೆ, ಅಲಂಕಾರಗಳ ಬಳಕೆ, ಪದಕೋಶ, ಲಯಬದ್ಧ ವಾಕ್ಯಗಳ ರಚನೆ ಮುಂತಾದ ವಿವರಗಳಿಂದ ತುಂಬಿಕೊಂಡಿದೆ– ಅರಿಸ್ಟಾಟಲನ ಗ್ರಂಥ. ಅವನಿಂದ ವಿಮರ್ಶೆ ಸ್ಥಾಪಿತವಾಯಿತು. ಮುಂದೆಯೂ ಅನೇಕ ಶತಮಾನಗಳ ಕಾಲ ಪಾಶ್ಚಾತ್ಯ ಜಗತ್ತಿಗೆಲ್ಲ ಅವನೇ ದಾರಿತೋರುಗನಾದ. ಅವನ ಲೋಪಗಳು ಈಚೆಗೆ ಚೆನ್ನಾಗಿ ಗೊತ್ತಾಗಿರುವುದರಿಂದ ಈಗಲೂ ಅವನ ಗುಣಗಳಿಂದ ಸಮರ್ಪಕ ಲಾಭ ಸಿಕ್ಕುವುದು ನಿಸ್ಸಂದೇಹ.

ಗೀತಾತ್ಮಕ ಕಾವ್ಯದ ವಿಷಯವಾಗಿ ಅರಿಸ್ಟಾಟಲ್ ಹೆಚ್ಚೇನೂ ಹೇಳಿಲ್ಲ. ಅದಕ್ಕೆ ಕಾರಣ ವಾಗ್ಮಿಕಲೆಯ ಕೋನದಿಂದ ಕಾವ್ಯಪ್ರಭೇದಗಳನ್ನೂ ಚರಿತ್ರೆಯನ್ನೂ ಅವನು ವೀಕ್ಷಿಸಿದ್ದು. ಗೀತವಾಗಲೀ ಪ್ರಗಾಥವಾಗಲೀ ಆ ವೀಕ್ಷಣಕ್ಕೆ ಒಳಪಡಬಾರದು. ಪ್ರ.ಶ.ಪೂ. 4ನೆಯ ಶತಮಾನದ ಮತ್ತು ಮುಂದಣ ಶತಮಾನಗಳ ಗ್ರೀಕ್ ವಿಮರ್ಶೆ ಭಾಷಣಕಲೆಯ

ಹೊರೆಯನ್ನು ಪೂರ್ತಿ ಕೊಡವಿಕೊಳ್ಳಲಿಲ್ಲ. ಪ್ರಶ. ಸು. 2ನೆಯ ಶತಮಾನದ ವಿಮರ್ಶಕಶ್ರೇಷ್ಠ ಲಾಂಜೈನಸ್ ಕೂಡ ಅದನ್ನೆಸಗಿ ಸ್ವತಂತ್ರನಾಗಲು ಅಶಕ್ತನಾದ. ಪ್ರ.ಶ.ಪೂ. 4ನೆಯ ಶತಮಾನದಲ್ಲಿ ವಿಮರ್ಶೆ ನೆರವೇರಿಸಿದ ಕಾರ್ಯದ ವಿವರ ಹೀಗಿದೆ; 1 ಪದ್ಯಶೈಲಿ ಗದ್ಯಶೈಲಿಗಳ ವರ್ಗೀಕರಣ, 2 ಕವಿಗಳು ಪ್ರಯೋಗಕ್ಕೆ ತಂದ ಸಾಹಿತ್ಯಪ್ರಭೇದಗಳ ಆಂಗಿಕ ರಚನೆಯ ತಾತ್ತ್ವಿಕ ವ್ಯಾಖ್ಯಾನ, 3 ಕವಿಗೆ ನಿಸರ್ಗದತ್ತವಾದ ಶಕ್ತಿ ಮತ್ತು ಕವಿಯ ಅಧ್ಯವಸಾಯಗಳ ಪರಸ್ಪರ ಸಂಬಂಧ, 4 ಸಾಹಿತ್ಯದ ಉದ್ದೇಶದ ಲಕ್ಷಣ ನಿರೂಪಣೆ, 5 ಚರಿತ್ರೆಯ ಆವಶ್ಯಕತೆ.

ಗ್ರೀಕ್ ರಾಷ್ಟ್ರಗಳು ಅಲೆಗ್ಸಾಂಡರನ ಸಾರ್ವಭೌಮತ್ವಕ್ಕೆ ಒಳಗಾದ ಮೇಲೆ ಸಾಹಿತ್ಯ ವಾಸ್ತವ ಬಾಳಿನ ಸೊಗಡನ್ನು ಬಿಟ್ಟುಕೊಟ್ಟು ಗ್ರಾಂಥಿಕವೂ ಕೃತಕವೂ ಆಯಿತು. ಸ್ವಾತಂತ್ರ್ಯ ನಾಶಗೊಂಡಾಗ ಸ್ವಂತಿಕೆಗೆ ಪ್ರಚೋದನೆ ಮತ್ತಾವುದರಿಂದಲೂ ಬಾರದು. ಹಳೆಯ ಗಂಭೀರನಾಟಕಗಳ ಪುನರುತ್ಥಾನ ಇಲ್ಲವೆ ಅನುಕರಣ; ಯೂರಿಪಿಡೀಸನ ನಾಟಕಗಳಿಂದ ಸ್ಫೂರ್ತಿ ಪಡೆದು ವಿರಚಿಸಿದ ಹೊಸ ವಿನೋದನಾಟಕ; ವಿದ್ಯಾಶಾಲೆಗಳಲ್ಲಿ ಅಭ್ಯಾಸಕ್ಕಾಗಿ ಬರೆದ ಭಾಷಣಗಳು– ಇವೇ ಆ ಕಾಲದ ಸಾಹಿತ್ಯ. ಬುದ್ಧಿಚಾತುರ್ಯಕ್ಕೆ ಆಸ್ಪದ ಕೊಡುವ ನಾಟುನುಡಿ ಮಾತ್ರ ಸಮೃದ್ಧವಾಗಿ ಬೆಳೆಯಿತು. ಪಂಡಿತಸಂದೋಹ ಬಹುವಾಗಿಯೇ ಇತ್ತು. ಅವರ ಕಾಲವಿನಿಯೋಗಕ್ಕೆ ತಕ್ಕ ಉದ್ಯೋಗವೂ ಸಿದ್ಧವಾಗಿತ್ತು. ಅಲೆಗ್ಸಾಂಡ್ರಿಯದ ಬೃಹತ್ ಗ್ರಂಥಾಲಯದ ವಿದ್ವಾಂಸರೂ ಇತರರೂ ದಿಟವಾಗಿ ಲೋಕೋಪಯುಕ್ತವಾದ ಜವಾಬ್ದಾರಿ ಕೆಲಸವನ್ನೇ ಮಾಡಿ ಕೃತಕೃತ್ಯರಾದರು. ಹಿಂದಣ ಗ್ರಂಥಗಳ ಪಾಠನಿರ್ಣಯ, ಟೀಕು ಟಿಪ್ಪಣಿ ವ್ಯಾಖ್ಯಾನಗಳ ರಚನೆ, ವ್ಯಾಕರಣ ಅಲಂಕಾರ ಶಾಸ್ತ್ರಗಳ ಸುವ್ಯವಸ್ಥೆ, ನಾನಾ ವಿಧದ ವರ್ಗೀಕರಣ–ಎಲ್ಲವನ್ನೂ ಅತ್ಯಂತ ಶ್ರದ್ಧೆಯಿಂದ ಅವರು ಮಾಡಿದರು. ಜೊತೆಗೆ ಸಾಹಿತ್ಯ ಕ್ಷೇತ್ರಕ್ಕೆ ಬಿಡದೆ ಅಂಟಿಕೊಂಡಿರುವ ವಿವಾದಗ್ರಸ್ತ ಪ್ರಶ್ನೆಗಳ ಕೂಲಂಕಷ ಚರ್ಚೆಯೂ ಅವರಿಂದ ಆಯಿತು. ಕಾವ್ಯದಲ್ಲಿ ಮುಖ್ಯಸ್ಥಾನ ವಿಷಯಕ್ಕೋ ವಿಷಯ ನಿರೂಪಣ ರೀತಿಗೋ? ಶಿಷ್ಟ ಶೈಲಿಗೂ ಆಡಂಬರ ಶೈಲಿಗೂ ಇರುವ ವ್ಯತ್ಯಾಸವೇನು? ಎರಡಕ್ಕೂ ನಡುವಣ ಮಧ್ಯಶೈಲಿ ಎಂಬುದಿಲ್ಲವೇ? ಕಾವ್ಯ ಬೋಧಪ್ರದವಾಗಿರಬೇಕೊ ಆಹ್ಲಾದಕರವಾಗಿರಬೇಕೊ? ಯಾವುದು ಪ್ರಮಾಣಸಾಹಿತ್ಯ? ಅದರ ಅಧಿಕಾರವಿಧಿಗಳಿಗೆ ಮಣಿಯುವುದು ಒಳ್ಳೆಯದೊ ಮಣಿಯದೆ ಕವಿ ತನ್ನತನವನ್ನು ಪ್ರಕಟಿಸುವುದು ಒಳ್ಳೆಯದೊ? ಕಾವ್ಯ ಹೆಚ್ಚೋ ತತ್ತ್ವಶಾಸ್ತ್ರ ಹೆಚ್ಚೋ? ಪದ್ಯದ ಛಂದಸ್ಸಿಗೂ ಗದ್ಯದ ಲಯಕ್ಕೂ ಸಾಮ್ಯವುಂಟೆ? ಇಂಥ ಸಮಸ್ಯೆಗಳನ್ನು ವಿದ್ವಜ್ಜನರು ಬರೀ ವಿನೋದಕ್ಕಾಗಿ ಅಲ್ಲ, ಶಾಸ್ತ್ರೀಯ ಪರಾಮರ್ಶೆಗಾಗಿ ಎತ್ತಿಕೊಂಡರು. ವಿಮರ್ಶಾ ಪ್ರಬಂಧಗಳು ಪುಷ್ಕಳವಾಗಿ ಹುಟ್ಟಿದುವು. ಆದರೆ ಎಲ್ಲೋ ಕೆಲವು ಚೂರುಪಾರನ್ನು ಬಿಟ್ಟರೆ ಮಿಕ್ಕುದೇನೂ ಉಪಲಬ್ಧವಾಗಿಲ್ಲದಿರುವುದು ವಿಷಾದಕರ. ವಾಗ್ಮಿಕಲೆ ಅವರ ಪ್ರಯತ್ನದ ಫಲವಾಗಿ ಒಂದು ಪರಿಷ್ಕಾರವಾದ ಶಾಸ್ತ್ರವಾಯಿತು. ಪಾರಿಭಾಷಿಕ ಪದಗಳ ಸಂಖ್ಯೆ ಹುಲುಸಾಗಿ ಬೆಳೆಯಿತು. ಪ್ರಾಸದ ನಾನಾ ಬಗೆಗೂ ಪುನರುಕ್ತಿ ಅಲಂಕಾರದ ನಾನಾವಿಧಕ್ಕೂ ಬೇರೆಬೇರೆ ಹೆಸರು ಬಂತು. ಹಾಗೆಯೇ ಸಾಹಿತ್ಯಕ್ಕೂ ಅದರ ವಿಮರ್ಶೆಗೂ ಸಂಬಂಧಪಡದೆ ಬರೀ ಕುತೂಹಲ ಕೆರಳಿಸುವ ವಿಚಿತ್ರ ವಿಚಾರಗಳ ಚರ್ಚೆ ಸತತವಾಗಿ ನಡೆಯಿತು. ಪೆನಿಲಪಿ ಸಹಾಯ ಕೋರಿ ತನ್ನ ತಂದೆಗೆ ಏತಕ್ಕೆ ಹೇಳಿಕಳಿಸಲಿಲ್ಲ, ಮೆನಿಸನ ಬಳಿಗೆ ಏತಕ್ಕೆ ಮಗನನ್ನು ಕಳಿಸಿದಳು? ಮನುಷ್ಯರು ಊಟಕ್ಕೆ ಮುನ್ನ ಕೈತೊಳೆದುಕೊಳ್ಳುತ್ತಾರೆ, ದೇವತೆಗಳು ಏತಕ್ಕೆ ಹಾಗೆ ಮಾಡುವುದಿಲ್ಲ? ಇಂಥ ಕೆಲವು ಅಸಂಗತ ಟೀಕೆಗಳನ್ನೆತ್ತಿಕೊಂಡು ಹೋಮರ್ ಕವಿಯನ್ನು ವಿಮರ್ಶಿಸಿದೆವೆಂದು ಕೊಂಡರು.

ಅಲೆಗ್ಸಾಂಡರನ ಅವಧಿ ಮುಗಿದ ತರುವಾಯ ಗ್ರೀಕ್ ರಾಷ್ಟ್ರಗಳು ರೋಮನ್ ಚಕ್ರಾಧಿಪತ್ಯಕ್ಕೆ ಅಧೀನವಾದುವು. ರೋಮನರಿಗಾದರೊ ಗ್ರೀಕ್ ಭಾಷೆ ಸಾಹಿತ್ಯ ಸಂಸ್ಕೃತಿಗಳನ್ನು ಕಂಡು ಆಶ್ಚರ್ಯಗೂಡಿದ ಪ್ರೀತಿ. ಆದ್ದರಿಂದ ಅವೆಲ್ಲವನ್ನೂ ಉಲ್ಲಾಸದಿಂದ ಅವರು ತಮ್ಮದನ್ನಾಗಿಸಿಕೊಂಡರು. ಕೊನೆಗೆ ಗ್ರೀಕರ ದೇವವರ್ಗವೇ ಹೆಸರು ಬದಲಾಯಿಸಿಕೊಂಡು ರೋಮನರದಾಯಿತು. ಹಲವು ಗ್ರೀಕ್ ವಿದ್ವಾಂಸರು ರೋಮನರಿಂದ ಮನ್ನಣೆಯನ್ನೂ ಸಂಭಾವನೆಯನ್ನೂ ಪಡೆದುಕೊಂಡರು. ಸೃಜನಕಾವ್ಯ ಕ್ಷೇತ್ರದಲ್ಲಿ ಒಂದು ಬಗೆಯ ಗದ್ಯಕಥೆ, ಕಲ್ಪನೆ ವಾಸ್ತವತೆ ಎರಡೂ ಸೇರಿಕೊಂಡ ಜೀವನಚರಿತ್ರೆ–ಎರಡೇ ನೂತನವಾಗಿ ಎದ್ದು ಬಂದ ಸಾಹಿತ್ಯಪ್ರಕಾರಗಳು. ಆ ಕಾಲದ ಗ್ರೀಕರಿಗೆ ಪ್ರ.ಶ.ಪೂ. 8ರಿಂದ 5ನೆಯ ಶತಮಾನದ ವರೆಗಿನ ಗ್ರೀಕ್ ಕಾವ್ಯ ಪ್ರಾಚೀನವಾಗಿಯೇ ತೋರಿಬಂದು, ಅದರ ವಿಚಾರದಲ್ಲಿ ಅವರ ಭಕ್ತಿ ಶ್ರದ್ಧೆಯನ್ನು ಕುದುರಿಸಿತು. ಅದನ್ನು ಪಠಿಸಿ ಅದರಿಂದ ಸ್ಫೂರ್ತಿ ಪಡೆದು ಅದರ ಮಾದರಿಯನ್ನು ಅನುಕರಿಸುವುದೇ ಅರ್ವಾಚೀನ ಕವಿಗೆ ಶ್ರೇಯಸ್ಸಿನ ಮಾರ್ಗವೆಂದು ಅವರು ಮನಗಂಡರು. ಅಲ್ಲಿ ಇಲ್ಲಿ ದೂರ ದೂರ ಅವರು ಇದ್ದುದರಿಂದ ಯಾವೊಂದು ಸಾಹಿತ್ಯಕೂಟ ಏರ್ಪಡಿಸಿಕೊಳ್ಳುವುದಕ್ಕೂ ಅವರಿಗೆ ಸಾಧ್ಯವಾಗಲಿಲ್ಲ. ಆದರೂ ಉಚ್ಚಮಟ್ಟದ ವಿಮರ್ಶೆಯೂ ಸಾಹಿತ್ಯ ವ್ಯಾಖ್ಯಾನವೂ ಅವರಿಂದ ಆಯಿತು: 1 ಪ್ರಾಚೀನ ಸಾಹಿತ್ಯದ ಸಕ್ರಮ ವಿಂಗಡಣೆ, ಅದರ ಅಧ್ಯಯನಕ್ಕೆ ಬೇಕಾದ ನಿರ್ದುಷ್ಟ ರೀತಿನೀತಿಯ ರೂಪುರೇಖೆ; 2 ಭಾವಗೀತೆ ಮತ್ತು ಪ್ರಗಾಥಗಳಿಗೆ ಯೋಗ್ಯ ಮರ್ಯಾದೆ (ಆರ್ಕಿಲೋಕಸ್, ಸ್ಯಾಫೊ, ಆಲ್ಕಿಯಸ್ ಮೊದಲಾದ ದೊಡ್ಡ ಕವಿಗಳನ್ನು ಪ್ಲೇಟೊ, ಅರಿಸ್ಟಾಟಲ್ ಕೂಡ ನಿರ್ಲಕ್ಷಿಸಿದ್ದರು); 3 ಪದ್ಯವಾಗಲಿ ಗದ್ಯವಾಗಲಿ ಭಾವಾತ್ಮಕವಾಗಿದ್ದರೇ ಅದು ಕಾವ್ಯ–ಎಂಬ ನಿಜಾಂಶದ ಗ್ರಹಿಕೆ; 4 ಆಟಿಕ್–ಏಷ್ಯನ್ ವಿವಾದದ ಸಮಜಾಯಿಷಿ; ಒಂದರ ಸಣಕಲು ತನಕ್ಕೂ ಇನ್ನೊಂದರ ಬೊಜ್ಜಿಗೂ ಮಧ್ಯವಾದ ಸೂಕ್ತ ಮಾಂಸಲಶೈಲಿ ಉಂಟೆಂದು ಘೋಷಣೆ; 5 ಕಾವ್ಯಕ್ಕೆ ಸತ್ತ್ವವನ್ನೂ ಸೌಂದರ್ಯವನ್ನೂ ಎರೆಯುವ ಯಾವುದೊ ಕವಿಶಕ್ತಿ ಆಯ್ದ ಕವಿಗಳಿಗೆ ದತ್ತವಾಗಿದೆ, ಅದರ ಮೂಲವನ್ನೂ ಕಾರ್ಯವಿಧಾನವನ್ನೂ ಬುದ್ಧಿಬಲದಿಂದ ಕಂಡುಹಿಡಿಯಲಾಗುವುದಿಲ್ಲ (ಇದೊಂದು ಅಮೂಲ್ಯ ಅಭಿಪ್ರಾಯ).


ಆ ಕಾಲದ ಕೆಲವು ವಿಮರ್ಶಕರ ಒಪ್ಪತಕ್ಕ ಸೂಕ್ತಿಗಳನ್ನು ಇಲ್ಲಿ ಉದಾಹರಿಸಿದೆ: ಹೆಲಿಕಾರ್‍ನಸಸ್ಸಿನ ಡಯೊನೀಸಸ್; 'ಶುದ್ಧವೂ ಸ್ವಾಭಾವಿಕವೂ ಆದ ಶಬ್ದಗಳನ್ನು ಆರಿಸಿಕೊಂಡು ಅವನ್ನು ಘನತೆ, ಇಂಪು ಎರಡೂ ಕೂಡಿಬರುವಂತೆ ಪೋಣಿಸತಕ್ಕದ್ದು. ಒಟ್ಟಿನಲ್ಲಿ ರಮ್ಯತೆ ಹುಟ್ಟುವುದು ಎಲ್ಲ ಬಿಡಿ ಅಂಶಗಳ ಬಿಡಿ ರಮ್ಯತೆಯಿಂದ. ಲಯಬದ್ಧ ವಾಕ್ಯಕ್ಕೆ ವಿವಿಧ ತೆರನುಂಟು; ಎಲ್ಲವನ್ನೂ ಬಳಸಿಕೊಂಡು ಸಮಷ್ಟಿಲಾವಣ್ಯವನ್ನು ಉತ್ಪತ್ತಿ ಮಾಡಬೇಕು. ವೈವಿಧ್ಯವನ್ನೇ ಕಾಣದ ಬರೆವಣಿಗೆ ನೀರಸ. ಫಿಲೊಸ್ಟ್ರಾಟಸ್; 'ಅನುಕರಣೆಗಿಂತ ವಿಭಾವನೆ ಹೆಚ್ಚು ಜಾಣೆ; ಕಂಡದ್ದನ್ನು ಮಾತ್ರ ಅವಳು ಬಣ್ಣಿಸಬಲ್ಲಳು. ಇವಳಾದರೊ ಕಣ್ಣಿಗೆ ಕಾಣದ್ದನ್ನು ಕಂಡದ್ದರ ಹೋಲಿಕೆಯ ಮೇಲೆ, ಬಣ್ಣಿಸಬಲ್ಲಳು'. ಲ್ಯೂಸಿಯನ್; 'ನೀನು ಸಾಹಿತಿ ಎನ್ನಿಸಿಕೊಳ್ಳಬೇಕೆ? ಆಧುನಿಕ ಕುತಾರ್ಕಿಕರ ಕೆಟ್ಟ ಯುಕ್ತಿಗಳನ್ನು ಬಳಸದಿರು; ಅವರ ಕೃತಕ ನಾಜೂಕಿಗೆ ಒಲಿಯಬೇಡ. ಅಂದಚಂದವನ್ನೂ ಸುಸ್ಪಷ್ಟತೆಯನ್ನೂ ಆರಾಧಿಸು. ಅರ್ಥವನ್ನು ಮೊದಲು ನೆನೆದು ಆಮೇಲೆ ಉಚಿತ ಪದಗಳನ್ನು ಕಂಡುಹಿಡಿ; ವಿಜಾತೀಯ ಪದದಿಂದ ಮೋಹಿತನಾಗಿ ಅದಕ್ಕೆ ತಕ್ಕ ಅರ್ಥವನ್ನು ಹೊಂದಿಸಹೋಗಬೇಡ'.

ಪ್ರಶ. 3ನೆಯ ಶತಮಾನದ ಲಾಂಜೈನಸ್ ನಿಜವಾಗಿ ಮೇಲ್ಮಟ್ಟದ ವಿಮರ್ಶಕ. ಅರಿಸ್ಟಾಟಲ್ ಒಬ್ಬನೇ ಅವನನ್ನು ಮೀರಿಸಿದಾತ. ಅವನ ಕೃತಿ ಚಿಕ್ಕದು; ಅದನ್ನು 'ಮಹೋನ್ನತಿಯನ್ನು ಕುರಿತು' ಎಂದು ಕರೆಯುವುದು ರೂಢಿ. ಸರಿಸುಮಾರಾಗಿ ಅದರ ಪ್ರತಿಯೊಂದು ವಾಕ್ಯವೂ ಎಲ್ಲ ಕಾಲದ ಶ್ರೇಷ್ಠ ಸಾಹಿತ್ಯಕ್ಕೂ ಸರಿಯಾಗಿ ಅನ್ವಯಿಸಬಲ್ಲ ಅರ್ಥಪುಷ್ಟವಾದ ಹೇಳಿಕೆ. ಸಾರಸ್ವತ ವಿಷಯಗಳ ಆಳಕ್ಕೆ ಇಳಿದು ಶಾಶ್ವತ ತತ್ತ್ವಗಳನ್ನು ಕಂಡುಕೊಳ್ಳುವುದರಲ್ಲಿ ಅವನು ನಿಸ್ಸೀಮ. ಇವು ಅವನ ಕೆಲವು ಅಣಿಮುತ್ತುಗಳು: ಪದಗುಚ್ಛಗಳ ಸರ್ವೋತ್ಕೃಷ್ಟತೆ ಮತ್ತು ಪರಿಪೂರ್ಣ ಹೊಂದಾಣಿಕೆಯೇ ಮಹೋನ್ನತಿ. ಆ ಗುಟ್ಟನ್ನು ಉದ್ಧ ಕವಿಗಳು ಅರಿತಿದ್ದಾರೆ. ಯಾವುದು ಅಸಾಮಾನ್ಯವೊ ಅದು ಶ್ರೋತೃಗಳನ್ನು ಬರಿ ಮನವೊಪ್ಪಿಸಿ ಸುಮ್ಮನಾಗದು. ಆನಂದ ಪರವಶತೆಗೆ ಅವರನ್ನು ಒಯ್ಯುತ್ತದೆ. ಕಾವ್ಯರಚನೆಯಲ್ಲಿ ಪ್ರಕೃತಿಯ ಭಾಗವೆಷ್ಟು, ನಿಯಮಾವಳಿಯ ಭಾಗವೆಷ್ಟು ಎಂಬ ಪ್ರಶ್ನೆಗಳಿಗೆ ಅವನ ಉತ್ತರ–ಪ್ರಕೃತಿಯಿಂದ ದ್ರವ್ಯಗಳ ಸರಬರಾಜು, ನಿಯಮಾವಳಿಯಿಂದ ಅವುಗಳ ಒಪ್ಪಓರಣ. ಭಾವೋದ್ರೇಕದ ವಾಗ್ಮಿತೆಯನ್ನು ಮತ್ತಾವುದೂ ಸರಿಗಟ್ಟದು. ಉಚಿತ ಜಾಗದಲ್ಲಿ ಅದು ಬಂದರೆ ಅದರ ಉನ್ಮಾದಾವೇಶ ಉಕ್ತಿಯಲ್ಲಿ ತುಂಬಿಕೊಂಡು ದೈವಪ್ರೇರಣೆಯ ಕಣಿವಚನದಂತಾಗುತ್ತದೆ. ಒಡಿಸ್ಸಿ ಕಾವ್ಯದಲ್ಲಿ ಹೋಮರ್ ಸಂಜೆಯ ಸೂರ್ಯನಾಗಿದ್ದಾನೆ; ಮಹತ್ತ್ವವುಂಟು, ಆದರೆ ಕಾವು ಕುಂದಿ ಹೋಗಿದೆ. ಮುಪ್ಪಿನ ವಿಚಾರ ನಾನು ಪ್ರಸ್ತಾವಿಸುತ್ತಿರುವುದು. ಆದರೆ ಅದು ಹೋಮರನ ಮುಪ್ಪು. ಅಲಂಕಾರವೆಂದು ತೋರದಿರುವುದೇ ಉತ್ತಮ ಕಾವ್ಯಾಲಂಕಾರ. ಸುಂದರ ಶಬ್ದಗಳು ಮನಸ್ಸಿನ ನೈಜ ವಿಶಿಷ್ಟ ಪ್ರಭೆ. ಯಾರ ಮನೋಧರ್ಮ ಅತಿ ಶ್ರೇಷ್ಠವೊ ಅವರಲ್ಲಿ ದೋಷರಾಹಿತ್ಯ ಕಡಿಮೆ. ಮಹೋನ್ನತಿ ಅದರ ಲೇಖಕರನ್ನು ಭಗವಂತನ ಸರ್ವಶಕ್ತಚಿತ್ತದ ಹತ್ತಿರಕ್ಕೆ ಕೊಂಡೊಯ್ಯುತ್ತದೆ. ಸಾಹಿತ್ಯದ ಮೇಲೆ ಸರಿಯಾದ ತೀರ್ಪನ್ನೀಯುವುದು ಬಲು ಪ್ರಯತ್ನದ ಕೊನೆಯಲ್ಲಿ ಎದ್ದು ಬರುವ ಬೆಳೆ.

ಬೇಕಾದಷ್ಟು ತಕ್ಕ ನಿದರ್ಶನವನ್ನು ಕೊಡದೆ ಲಾಂಜೈನಸ್ ಒಂದು ಕಡೆಯೂ ಮಾತಾಡಿಲ್ಲ; ಅದೂ ಅವನ ಒಂದು ಹಿರಿಮೆ. (ಎಸ್.ವಿ.ಆರ್.)


**ಗ್ರೀಕ್ ಸಾಹಿತ್ಯ :** ಗ್ರೀಕ್ ಸಾಹಿತ್ಯ ಇಲಿಯಡ್ ಮತ್ತು ಒಡಿಸ್ಸಿ ಮಹಾಕಾವ್ಯಗಳಿಂದಲೇ ಪ್ರಾರಂಭವಾಯಿತೆನ್ನಬಹುದಾದರೂ ಮಹಾಕಾವ್ಯಗಳಿಗಿಂತ ಪೂರ್ವದಲ್ಲಿ ಕಾವ್ಯದ ಒಂದು ಜೀವಂತ ಮೌಖಿಕ (ಓರಲ್) ಪರಂಪರೆ ಪುರಾತನ ಗ್ರೀಸಿನಲ್ಲಿತ್ತೆಂಬುದು ಖಚಿತ. ಆ ಪರಂಪರೆ ಎಷ್ಟು ಪುರಾತನವೆಂದು ನಿಷ್ಕೃಷ್ಟವಾಗಿ ಹೇಳಲಾಗುವುದಿಲ್ಲ. ಆದರೆ ಪ್ರ.ಶ.ಪೂ. 16ನೆಯ ಶತಮಾನದ ಜನಜೀವನಕ್ಕೆ ಸಂಬಂಧಿಸಿದ ವಿವರಗಳೂ ಮಹಾಕಾವ್ಯಗಳಲ್ಲಿ ಬಂದಿರುವುದರಿಂದ ಮೌಖಿಕಕಾವ್ಯದ ಪರಂಪರೆ ಆ ಕಾಲಕ್ಕೂ ಹಿಂದಿನದೆನ್ನ ಬಹುದು. ರಾಜಾಧಿರಾಜರು ನಡೆಸಿದ ಯುದ್ಧಗಳ ವರ್ಣನೆಗಳು, ಮದುವೆಯ ಹಾಡುಗಳು, ಸುಗ್ಗಿಯ ಪದಗಳು, ಪ್ರಾರ್ಥನಾಗೀತಗಳು ಪುರಾತನ ಗ್ರೀಕ್ ಕಾವ್ಯರಾಶಿಯಲ್ಲಿ ಸೇರಿವೆ. ಅವು ಮಹಾಕಾವ್ಯದ ಸೃಷ್ಟಿಗೆ ಸಾಮಗ್ರಿ ಒದಗಿಸಿರಬೇಕು. ಈಚಿನ ವಿದ್ವಾಂಸರ ಅಭಿಪ್ರಾಯದಂತೆ

ಇಲಿಯಡ್, ಒಡಿಸ್ಸಿ ಕಾವ್ಯಗಳ ಇಂದಿನ ರೂಪ, ಪ್ರ.ಶ.ಪೂ. 8ನೆಯ ಶತಮಾನದ ಮಧ್ಯದಿಂದೀಚಿನದು. ಹಬ್ಬಹರಿದಿನಗಳ ಸಂದರ್ಭದಲ್ಲಿ ಕವಿ ಗಾಯಕರು (ಬಾರ್ಡ್ಸ್) ಸಾಮುದಾಯಿಕ ಆಚರಣೆಯ ಭಾಗವಾಗಿ ಈ ಮಹಾಕಾವ್ಯಗಳನ್ನು ಜನಸಂದಣಿಯ ಎದುರಿಗೆ ಹಾಡುತ್ತಿದ್ದರು. ಈ ಸಭೆಗಳಿಗೆ ಏಷ್ಯ ಮೈನರ್ ಪ್ರದೇಶದ ಇತರ ನಗರ ರಾಜ್ಯಗಳಿಂದಲೂ ಜನ ಬಂದು ಸೇರುತ್ತಿದ್ದರು. ಕವಿ ಗಾಯಕರು ತಂಡ ತಂಡವಾಗಿ ಒಬ್ಬರಾದ ಮೇಲೆ ಇನ್ನೊಬ್ಬರಂತೆ, ಒಬ್ಬ ನಿಲ್ಲಿಸಿದ ನಿರೂಪಣ ಸನ್ನಿವೇಶವನ್ನು ಮುಂದಿನವ ಎತ್ತಿಕೊಂಡು ಮುಂದುವರಿಸಿ ಹಾಡುತ್ತಿದ್ದರು. ಹೋಮರ್ ಪರಂಪರೆಯ ಈ ಕವಿಗಾಯಕರು ಸಮಗ್ರ ಗ್ರೀಕ್ ದೇಶದ ಉದ್ದಗಲದಲ್ಲಿ ಸಂಚರಿಸುತ್ತಿದ್ದು ಸಾರ್ವಜನಿಕ ಸಭೆಗಳಲ್ಲಿ ಪರಸ್ಪರ ಪೈಪೋಟಿಯಿಂದ ಹಾಡುತ್ತ ನಿಕಟ ಜನಸಂಪರ್ಕ ಪಡೆದಿದ್ದರೆಂದು ಪ್ರ.ಶ.ಪೂ. 8ನೆಯ ಶತಮಾನದ ಗ್ರೀಕ್ ಕವಿ ಹೆಸಿಯಡ್ ಹೇಳಿದ್ದಾನೆ. ಅಂಥ ಕಾವ್ಯವಾಚನ ಸಂಪ್ರದಾಯದಿಂದ ತಾನು ಪಡೆದ ಋಣವನ್ನು ಸ್ಮರಿಸಿದ್ದಾನೆ. ಹೋಮರನ ಕಾವ್ಯದಲ್ಲಿ ಬರುವ ಮೈಸೀನಿಯನ್ ಚಕ್ರಾಧಿಪತ್ಯದ ಗತವೈಭವದ ವರ್ಣನೆಯನ್ನು ಹೀಗೆ ಸಾಮುದಾಯಿಕವಾಗಿ ಹಾಡಿ, ಹಾಡಿಸಿ ನಲಿಯುತ್ತಿದ್ದರು. ಗ್ರೀಕ್ ರಾಜ್ಯಗಳ ಅಧಿಪತಿಗಳೆಲ್ಲ ದೊರೆ ಆಗಮೆಮ್ನಾನನ ನಾಯಕತ್ವದಲ್ಲಿ ಒಟ್ಟಾಗಿ ಕಲೆತು ಟ್ರಾಯ್‌ನಗರಕ್ಕೆ ಮುತ್ತಿಗೆ ಹಾಕಿ ವಿಜಯ ದುಂದುಭಿ ಮೊಳಗಿಸಿದ ವೀರಸಾಹಸ ಕಥೆಯನ್ನು ಜನಸಾಮಾನ್ಯರು ಕೇಳಿ ಮೈಮರೆಯುತ್ತಿದ್ದ ಕಾಲ ಅದು. ಅಥೆನ್ಸ್ ಪಟ್ಟಣದಲ್ಲಿ ಆಚರಿಸಲಾಗುತ್ತಿದ್ದ ಪ್ಯಾನ್ ಅಥಿನ ಹಬ್ಬದಲ್ಲಿ ಪ್ರ.ಶ.ಪೂ. 6ನೆಯ ಶತಮಾನದಿಂದಲೂ ಮಹಾಕಾವ್ಯಗಳನ್ನು ವಾಚಿಸುತ್ತಿದ್ದ ರೂಢಿ. ಈ ಕಾವ್ಯಗಳು ಜನಸ್ತೋಮದ ಮೇಲೆ ಅತ್ಯಂತ ವ್ಯಾಪಕ ಪರಿಣಾಮ ಬೀರುವುದರ ಜೊತೆಗೆ ಅನಂತರದ ಗ್ರೀಕ್ ಸಾಹಿತ್ಯದ ಉತ್ಕರ್ಷಕ್ಕೂ ಪ್ರೇರಣೆ ಒದಗಿಸಿದುವು.



ಹೋಮರ್


ಹೋಮರನ ರಚನೆಗಳು ಸುಮಾರು ನಾಲ್ಕು ಶತಮಾನಗಳ ಕಾಲ ಮೌಖಿಕ ಪರಂಪರೆಯಲ್ಲಿ ಉಳಿದುವು. ಹಾಡುಗವಿಗಳ ಮೌಖಿಕ ಪರಂಪರೆಯಿಂದ ಮೈದಾಳಿದ ಕೃತಿಗಳಲ್ಲಿ ಹೋಮರನ ಕಾವ್ಯಗಳಂತೆ ಇನ್ನೂ ಹಲವು ಬೇರೆ ರೀತಿಯ ಕೃತಿಗಳು ಸೇರಿದ್ದುವು. ಬೊಯೀಷಿಯನ್ ಪರಂಪರೆಯ ಎಪಿಕ್ ಸೈಕಲ್ ಎಂದು ಕರೆಯುವ ಪುರಾಣ ಕಾವ್ಯಚಕ್ರದಲ್ಲಿ ಅಪೂರ್ಣವೂ ಪರಸ್ಪರ ಅಸಂಬದ್ಧವೂ ಆದ ಹಲವು ಖಂಡಕಾವ್ಯಗಳು ಉಪಲಬ್ಧವಿವೆ. ಇವುಗಳಲ್ಲಿ ಪ್ರಮುಖವಾಗಿ ಹೋಮರಿಕ್ ಹಿಮ್ಸ್ ಮತ್ತು (ಹೆಸಿಯಡ್ ಬರೆದನೆನ್ನಲಾದ) ವರ್ಕ್ಸ್ ಅಂಡ್ ಡೇಸ್‌ಗಳನ್ನು ಹೆಸರಿಸ ಬಹುದು. ಹೋಮರನ ಕಾವ್ಯ ರಾಜರ ಶ್ರೀಮಂತರ ಜೀವನವನ್ನು ಚಿತ್ರಿಸಿರುವಂತೆ, ವರ್ಕ್ಸ್ ಅಂಡ್ ಡೇಸ್ ಹೋಮರಿಕ್ ಯುಗದ ಜನ ಸಾಮಾನ್ಯರ ವಾಸ್ತವಿಕ ಜೀವನದ ಮೇಲೆ ಬೆಳಕು ಚೆಲ್ಲುತ್ತದೆ. ಅಯೋನಿಯನ್ ಪಂಥದ ಹೋಮರ್ ಕಾವ್ಯದಲ್ಲಿ ಅದ್ಭುತ ರಮ್ಯಜೀವನ ಚಿತ್ರಿತವಾಗಿರುವಂತೆ ಹೆಸಿಯಡ್‌ನ ಕಾವ್ಯದಲ್ಲಿ ಆಗಿನ ಕಾಲದ ನಿತ್ಯಜೀವನದ ಕಷ್ಟಕಾರ್ಪಣ್ಯಗಳು ವರ್ಣಿತವಾಗಿವೆ. ಪ್ರ.ಶ.ಪೂ. 700ರ ಸುಮಾರಿನ ಥಿಯೋಜನಿ ಎಂಬ ಇನ್ನೊಂದು ಅವಶಿಷ್ಟ ಕೃತಿಯಲ್ಲಿ ಪ್ರಕೃತಿಶಕ್ತಿಯ ಪ್ರತೀಕವಾದ ಗ್ರೀಕ್ ದೇವತೆಗಳ ಹುಟ್ಟು ಬದುಕು, ವಂಶವೃಕ್ಷಗಳನ್ನು ಕ್ರೋಡೀಕರಿಸಲಾಗಿದೆ. ಈ ಕೃತಿಯ ದೆಸೆಯಿಂದ ಗ್ರೀಕ್ ದೇವತೆಗಳ ವಿಷಯವಾಗಿ ಹೆಚ್ಚು ವಿಚಾರಬದ್ಧವೂ ವಿಮರ್ಶಾತ್ಮಕವೂ ಆದ ರೀತಿಯಲ್ಲಿ ಚಿಂತಿಸುವುದು ಅನಂತರ ಬಂದ 6ನೆಯ ಶತಮಾನದ ಅಯೋನಿಯನರಿಗೆ ಸಾಧ್ಯವಾಯಿತು.



ಹೆಸಿಯಡ್


ಪ್ರ.ಶ.ಪೂ. 7 ಮತ್ತು 6ನೆಯ ಶತಮಾನದ ಅಳಿದುಳಿದ ಹಾಡುಗಳಲ್ಲಿ, ಸಮಾಧಿ ಲೇಖನಗಳಲ್ಲಿ (ಎಪಿಟ್ಯಾಫ್ಸ್) ಗ್ರೀಕ್ ನಗರರಾಜ್ಯಗಳ ಶ್ರೀಮಂತರ ಜೀವನದ ವರ್ಣನೆಗಳು ಹಾಸುಹೊಕ್ಕಾಗಿ ಬಂದಿವೆ. ಆ ಯುಗದ ಕಾವ್ಯಗಳನ್ನು ಅವುಗಳ ಛಂದಸ್ಸಿಗನುಸಾರವಾಗಿ ಹೀಗೆ ವಿಂಗಡಿಸಬಹುದು; 1 ಹೋಮರ್ ಕಾವ್ಯದಲ್ಲಿ ಬಹುತೇಕ ಬಳಸುವ, ಎಲಿಜಿಯಾಕ್ ಛಂದಸ್ಸಿನಲ್ಲಿ ರಚಿತವಾದ, ಕುಡಿತದ ಹಾಡುಗಳು, ಪ್ರೇಮಗೀತೆಗಳು, ಪ್ರಶಸ್ತಿ ಕವನಗಳು, ಚರಮವಾಕ್ಯಗಳು, ಇವುಗಳಲ್ಲಿ ರಾಜಕೀಯ ಪ್ರಚಾರವೂ ಬೆರೆತುಹೋಗಿದೆ. ಅಭಿಜಾತಯುಗದ ಉದ್ದಕ್ಕೂ ಈ ಛಂದಸ್ಸನ್ನು ಬಳಸಿ ಸಣ್ಣ ಸಣ್ಣ ಕವನಗಳನ್ನು ರಚಿಸಲಾಗುತ್ತಿತ್ತು. 2 ಅಯಾಂಬಿಕ್ ಮತ್ತು ಟ್ರೋಕೇಯಿಕ್ ಛಂದಸ್ಸಿನಲ್ಲಿ ಬರೆದ ಪ್ರಚಾರಾತ್ಮಕ ಹಾಡುಗಳು, ವೈಯಕ್ತಿಕ ವಿಡಂಬನೆಗಳು. ಬಹುಕಾಲದ ಅನಂತರ ರಚಿತವಾದ ಗ್ರೀಕ್ ಗಂಭೀರ ಹಾಗೂ ಹರ್ಷನಾಟಕಗಳಲ್ಲಿ ಸಂಭಾಷಣೆಗಳನ್ನು ಹೆಣೆಯಲು ಈ ಛಂದಸ್ಸಿನ ಕೆಲವು ರೂಪಗಳನ್ನು ಬಳಸಿದ್ದುಂಟು. 3 ಲಿರಿಕ್ ಅಥವಾ ಭಾವಪ್ರಧಾನವಾದ ಹಾಡುಗಬ್ಬದ ಛಂದಸ್ಸಿನಲ್ಲಿ ಬರೆದ ಕುಡಿತದ ಹಾಡುಗಳು, ಮೇಳಗೀತೆಗಳು, ಪ್ರಾರ್ಥನಾಗೀತೆಗಳು, ಯುದ್ಧದಲ್ಲಿ, ಆಟಪಾಟಗಳಲ್ಲಿ ಜಯಗಳಿಸಿದ ವೀರರನ್ನೂ ಕ್ರೀಡಾಪಟುಗಳನ್ನೂ ಹೊಗಳುವ ಪ್ರಶಸ್ತಿ ಕವನಗಳು, ಶೋಕಗೀತೆಗಳು. ಈ ಎಲ್ಲ ಛಂದಸ್ಸುಗಳನ್ನೂ ಆಮೇಲೆ ನಾಟಕಗಳ ಮೇಳಗೀತೆಗಳ ರಚನೆಗಾಗಿ ಬಳಸಲಾಯಿತು. ಸ್ಪಾರ್ಟ ಪಟ್ಟಣದ ಯುದ್ಧಕವಿ ಟೈರ್‌ಷಿಯಸ್, ವಿಡಂಬನಕಾರ ಆರ್ಕಿಲೋಕಸ್, ಲೆಸ್ಬಾಸಿನ ಅಲ್‌ಕೇಯಸ್, ಕವಿ ಪಿಂಡಾರ್ ಮತ್ತು ಕವಯಿತ್ರಿ ಸ್ಯಾಫೊ ಇವರು ಆ ಕಾಲದ ಕೆಲವು ಪ್ರಮುಖ ಕವಿಗಳು. ಪ್ರ.ಶ.ಪೂ.ಸು. 5ನೆಯ ಶತಮಾನದಲ್ಲಿದ್ದನೆನ್ನಲಾದ ಪಿಂಡಾರ್ ರಚಿಸಿದ ಪ್ರಶಸ್ತಿಪ್ರಗಾಥಗಳಲ್ಲಿ ಗ್ರೀಕ್ ಶ್ರೀಮಂತರ ನೀತಿಚಿಂತನೆ, ಧಾರ್ಮಿಕಜಿಜ್ಞಾಸೆಗಳು ಸೂಚಿತವಾಗಿವೆ. ಪಿಂಡಾರನದು ಬಹು ವ್ಯಾಪಕ ಧ್ವನಿಶಕ್ತಿಯುಳ್ಳ ಪದಸಂಪತ್ತು ಹಾಗೂ ಪ್ರತಿಮಾಪೂರ್ಣ ಕಾವ್ಯಶೈಲಿ.

**ಅಭಿಜಾತ ಯುಗದ ನಾಟಕ:** ಗಂಭೀರ ಹಾಗೂ ಹರ್ಷ ನಾಟಕಗಳು ಪುರಾತನ ಗ್ರೀಸಿನಲ್ಲಿ ಯಾವಾಗ ಉಗಮವಾದುವೋ ನಿಶ್ಚಿತವಾಗಿ ಹೇಳುವುದು ಕಷ್ಟ. ಹೋಮರನ ಕಾಲಕ್ಕೆ ಮತ್ತು ಅದಕ್ಕೂ ಹಿಂದೆ ಕೆಲವು ಮತಪ್ರಕ್ರಿಯೆಗಳಿಗೆ ಸಂಬಂಧಿಸಿದ ಕುಣಿತಗಳಲ್ಲಿ ಮುಖವಾಡ ಧರಿಸುವ ಪದ್ಧತಿ ಇತ್ತು. ಹರ್ಷ ನಾಟಕಕ್ಕೆ ಪ್ರಕೃತವಾದ ಒರಟು, ಅಶ್ಲೀಲ ವೇಷಗಳನ್ನೂ ಮೆತ್ತೆ ತುಂಬಿದ ಬಟ್ಟೆಗಳನ್ನೂ ಧರಿಸಿ, ಮುಖವಾಡ ಹಾಕಿಕೊಂಡು ನೃತ್ಯಮಾಡುವ ಪದ್ಧತಿ ಪ್ರ.ಶ.ಪೂ. 700ರ ಸುಮಾರಿನ ಕಾರಿಂತ್‌ನಲ್ಲಿ ಪ್ರಚಲಿತವಾಗಿತ್ತೆಂದು ಖಚಿತವಾಗಿದೆ. ಅದೇನೇ ಇರಲಿ, ಕಾರಿಂತ್‌ನ ನೃತ್ಯೋತ್ಸವಗಳಲ್ಲಿ ವೀರ, ಗಂಭೀರ ವಿಚಾರಗಳನ್ನು ಕುರಿತು ಹಾಡುತ್ತಿದ್ದ ವೃಂದಗೀತೆಯೇ ಗಂಭೀರ ನಾಟಕದ (ಟ್ರ್ಯಾಜಿಡಿ) ಮೂಲಬೀಜವೆನ್ನಬಹುದು. ಪುರಾತನ ಗ್ರೀಸಿನಲ್ಲಿ ಗಂಭೀರ ನಾಟಕದ ಪ್ರದರ್ಶನ ಕೇವಲ ಯಾವುದೊಂದು ವಿಶಿಷ್ಟ ಮತಧರ್ಮಗಳಿಗೆ ಸೇರಿದವರ ಮನೋರಂಜನೆಗೆ ಮಾತ್ರ ಉದ್ದೇಶಿತವಾಗಿರಲಿಲ್ಲ. ಇಡೀ ಸಮಾಜಸಮುದಾಯವೇ ನಾಟಕವನ್ನು ನೋಡುವ ಪರಿಪಾಠವನ್ನು ರೂಢಿಸಿಕೊಂಡಿತ್ತು. ಪ್ರ.ಶ.ಪೂ. 534ರ ಸುಮಾರಿನಲ್ಲಿ ಗಂಭೀರನಾಟಕ ಡಯೊನೈಸಸ್ ಉತ್ಸವದ ಅವಿಭಾಜ್ಯ ಅಂಗವಾಗಿದ್ದಿರಬೇಕು. ಕುದುರೆಯ ಬಾಲ ಮತ್ತು ಕಿವಿಗಳನ್ನುಳ್ಳ, ಮನುಷ್ಯ ಸ್ವರೂಪದ, ಸ್ಯಾಟಿರ್ಸ್ ಎಂಬ ಅರೆಪ್ರಾಣಿ ವೇಷ ಧರಿಸಿದವರೇ ಮೇಳದವರಾಗಿರುತ್ತಿದ್ದ ಕುಣಿತಗಳು ಪ್ರ.ಶ.ಪೂ. 501ರ ವೇಳೆಗೆ ರೂಢಿಗೆ ಬಂತು. ಹರ್ಷನಾಟಕ ಪ್ರ.ಶ.ಪೂ. 486ರಲ್ಲಿ ರೂಪ ತಾಳಿರಬೇಕು. ಅಲ್ಲಿಂದ ಮುಂದೆ ಸುಮಾರು ನೂರು ವರ್ಷಗಳ ಕಾಲ ಈಸ್ಕಿಲಸ್, ಸಾಫೊಕ್ಲೀಸ್ ಮತ್ತು ಯೂರಿಪಿಡೀಸ್–ಈ ನಾಟಕಕಾರರ ಗಂಭೀರ ನಾಟಕಗಳು, ಬೇರೆ ಐವರು ಹರ್ಷನಾಟಕಕಾರರ ಕೃತಿಗಳು, ಗ್ರೀಕ್ ಜನಮನವನ್ನು ಸೂರೆಗೊಂಡಂತೆ ಕಾಣುತ್ತದೆ. ಪ್ರತಿವರ್ಷವೂ ಡಯೊನೈಸಸ್ ಉತ್ಸವದ ನಾಟಕಸ್ಪರ್ಧೆಗಳಲ್ಲಿ ಮತ್ತೆ ಮತ್ತೆ ಈ ಮೂವರು ಗಂಭೀರನಾಟಕಕಾರರೇ ಸ್ಪರ್ಧಿ ಪ್ರತಿಸ್ಪರ್ಧಿಗಳಾಗಿರುತ್ತಿದ್ದರೆಂದು ತಿಳಿದುಬರುತ್ತದೆ. ಈ ಸ್ಪರ್ಧೆಗಾಗಿ ಮೂವರೂ ಒಂದೊಂದು ನಾಟಕಚಕ್ರವನ್ನೂ (3 ನಾಟಕಗಳು) ಒಂದೊಂದು ಸ್ಯಾಟಿರ್ ನಾಟಕವನ್ನೂ (ವಿನೋದ ಪ್ರಧಾನ ನಾಟಕ) ಬರೆಯುತ್ತಿದ್ದರಂತೆ. ಐವರು



ಅರಿಸ್ಟಾಫನೀಸ್

ವಿನೋದ ನಾಟಕಕಾರರು ಐದು ವೈನೋದಿಕಗಳನ್ನು ಬರೆಯುತ್ತಿದ್ದರಂತೆ. ಒಟ್ಟಿನಲ್ಲಿ ಗಂಭೀರ ನಾಟಕಕಾರರು ಗ್ರೀಕ್ ಸಾಹಿತ್ಯಕ್ಕೆ ಮಹೌನ್ನತ್ಯವನ್ನು ತಂದುಕೊಟ್ಟರು. ಕೇವಲ ಧಾರ್ಮಿಕ ಜಿಜ್ಞಾಸೆ, ಮತಪ್ರಕ್ರಿಯೆಗಳನ್ನು ವಸ್ತುವಾಗುಳ್ಳ ಅನಾದಿಯುಗದ ಗೀತನೃತ್ಯವನ್ನು ಗ್ರೀಕ್ ನಾಟಕಕಾರರು ಸಂಕೀರ್ಣಾನುಭವವನ್ನು ಒಳಗೊಂಡ ಸಮಸ್ಯಾತ್ಮಕವಾದ, ಮಾನವೀಯ ವಾದ ದುರಂತ ನಾಟಕವನ್ನಾಗಿ ಮಾರ್ಪಡಿಸಿದುದು ಅವರ ಸಾಧನೆ. ಈಸ್ಕಿಲಸ್ ತನ್ನ ನಾಟಕಚಕ್ರದಲ್ಲಿ ಪಾತ್ರಗಳು ಮತ್ತು ಕಥಾವಸ್ತುವಿನ ವಿಭಿನ್ನ ಮುಖಗಳು ಒಂದು ನಾಟಕದಿಂದ ಇನ್ನೊಂದಕ್ಕೆ ಹೇಗೆ ಬೆಳೆಯುತ್ತ ಹೋಗುತ್ತವೆಂದು ಚಿತ್ರಿಸುತ್ತಾನೆ. ಅವನು ಕಣ್ಣು ಕೋರೈಸುವಂಥ ದೃಶ್ಯಾವಳಿಗಳನ್ನೂ ಭವ್ಯವಾದ ಸಂಗೀತವನ್ನೂ ಉನ್ನತವಾದ ಕಾವ್ಯ ಶೈಲಿಯನ್ನೂ ಬೇಕಾದಂತೆ ಬಳಸಿಕೊಂಡ. ಉದಾತ್ತವೂ ಗಹನಗಂಭೀರವೂ ಆದ ಮನುಷ್ಯನ ಬದುಕು ಧರ್ಮತತ್ತ್ವಗಳ ನೀತಿನೇತಿಗಳ ನೆಲೆಗಟ್ಟಿನ ಮೇಲೆ ರಚಿತವಾಗಬೇಕೆನ್ನುವ ವಿಚಾರ ಪರಂಪರೆ ಅವನ ಒರೆಸ್ಟಿಯಾ ನಾಟಕಚಕ್ರದಲ್ಲಿ ರೂಪಿತವಾಗಿದೆ. ಈಸ್ಕಿಲಸನ ನಾಟಕದ ಮೇಳ ಪಾತ್ರಗಳು ಯಾರೇ ಆಗಲಿ, ಯಾವುದೇ ಸಾಮಾಜಿಕ ವರ್ಗವನ್ನು ಪ್ರತಿನಿಧಿಸಲಿ, ಅವನ ಚಿಂತನೆ ಒಂದೇ ಗುರಿಯತ್ತ ಸಾಗುವಂಥದು.




ಚರಿತ್ರಕಾರ ತುಸಿಡಿಡೀಸ್

ಪ್ರತಿಮಾಪೂರ್ಣ ಮೇಳಗೀತಗಳ ಪ್ರಗಾಥಗಳ ಮೂಲಕ ಇಡೀ ನಾಟಕದ ಜೀವಾಳವನ್ನು ಅರ್ಥವಿಸುತ್ತ ನಾಟಕಕಾರ ತನ್ನ ಜೀವನದರ್ಶನಕ್ಕೆ ಆಕಾರ ನೀಡುತ್ತಾನೆ. ಸಾಫೊಕ್ಲೀಸ್ ತನ್ನ ನಾಟಕಗಳಲ್ಲಿ ಮೇಳ ಪ್ರಗಾಥಗಳ ವ್ಯಾಪ್ತಿಯನ್ನು ಕಡಿಮೆ ಮಾಡಿ ಸಂಭಾಷಣೆಯನ್ನು ಹೆಚ್ಚು ಜೀವಂತಗೊಳಿಸುತ್ತಾನೆ. ಆದರೆ ನಡುವೆ ಅಲ್ಲಲ್ಲಿ ಸಣ್ಣ ಸಣ್ಣ ಪ್ರಗಾಥಗಳನ್ನು ಹೆಣೆದು ಅವುಗಳಲ್ಲಿ ಮನುಷ್ಯ ಹಾಗೂ ಅವನ ಜೀವನದ ನೀತಿ ನಿಯಮಗಳ ನಡುವಣ ಸಂಘರ್ಷ ಕುರಿತು ವ್ಯಾಖ್ಯಾನ ಮಾಡುತ್ತಾನೆ. ಈಸ್ಕಿಲಸ್, ಸಾಫೊಕ್ಲೀಸರ ತಾತ್ತ್ವಿಕ ವಿಚಾರಗಳಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ಆದರೆ ದುರಂತಮಯವಾದ ಮನುಷ್ಯನ ಬಾಳು ಅಧೋಗತಿಗೆ ಇಳಿಯಲು ದೈವೀಶಕ್ತಿಗಳು ಎಷ್ಟು ಕಾರಣವೋ ಅವನ ಕ್ಷುದ್ರ ಮನೋವೈಕಲ್ಯ, ದೌರ್ಬಲ್ಯಗಳು ಅಷ್ಟೇ ಕಾರಣ ಎನ್ನುವ ಮಾತಿನ ಮೇಲೆ ಸಾಫೊಕ್ಲೀಸ್ ಹೆಚ್ಚು ಒತ್ತು ಹಾಕುತ್ತಾನೆ. ಅವನು ಮಾನವೀಯವಾದ ಒಂದೋ ಎರಡೋ ಮುಖ್ಯ ಪಾತ್ರಗಳನ್ನು ಸೃಷ್ಟಿಸಿ ಅವುಗಳ ಮೂಲಕ ಕಥೆಯ ಹಲವಾರು ಮುಖಗಳು ಹೇಗೆ ವಿಕಾಸವಾಗುತ್ತವೆಂದು ತೋರಿಸುತ್ತಾನೆ. ಗಂಭೀರ ನಾಟಕಕಾರರಲ್ಲಿ ಮೂರನೆಯವನಾದ ಯೂರಿಪಿಡೀಸ್ ಅನನ್ಯ ಪ್ರತಿಭಾವಂತ. ಅವನದು ಅತ್ಯಂತ ಆಧುನಿಕ ಪ್ರಜ್ಞೆ ಎನ್ನುವುದುಂಟು. ಆತ ಅತ್ಯಂತ ಸಮಸ್ಯಾತ್ಮಕ ಪಾತ್ರಗಳನ್ನು ಸೃಷ್ಟಿಸಿದ್ದಾನೆ. ಅವನ ನಾಟಕದಲ್ಲಿ ಮೇಳ, ನಾಟಕದ ವಸ್ತುವಿನಿಂದ ಪ್ರತ್ಯೇಕವಾಗಿ ಉಳಿದು ತೀರ ಗೌಣವಾದ ಅಂಶವಾಗುತ್ತದೆ. ಪ್ರಕೃತಿಯ ಚೈತನ್ಯ ಶಕ್ತಿಗಳನ್ನು ಪ್ರತೀಕಿಸುತ್ತವೆ ಎನ್ನುವ ಅರ್ಥದಲ್ಲಿ ಮಾತ್ರ ಅವನ ದೇವತೆಗಳು ವಾಸ್ತವಿಕ ಪಾತ್ರಗಳು. ಕಟ್ಟಕಡೆಯ ಅವನ ನಾಟಕಗಳಲ್ಲಿ ರೋಮಾಂಚಕ ಘಟನೆಗಳೂ ವೀರಸಾಹಸಗಳೂ ತುಂಬಿವೆ. ಇವು ಅವನ ಕಾಲಾನಂತರದ ಗದ್ಯ ನಾಟಕಗಳು ಮತ್ತು ವಿನೋದ ನಾಟಕಗಳ ಮೇಲೆ ತುಂಬ ಪ್ರಭಾವ ಬೀರಿದವೆನ್ನಬಹುದು.

ಪ್ರ.ಶ.ಪೂ. 5ನೆಯ ಶತಮಾನದ ಹರ್ಷ ನಾಟಕದಲ್ಲಿ ಒರಟಾದ ಅಶ್ಲೀಲ ಹಾಸ್ಯ, ಅತ್ಯಂತ ವಿಭಾವನಾತ್ಮಕವಾದ ಕಾವ್ಯಶೈಲಿ, ರಾಜಕೀಯ ವಿಡಂಬನೆ, ಪೌರಾಣಿಕ ವ್ಯಕ್ತಿಗಳನ್ನು ಕುರಿತ ಲೇವಡಿ–ಎಲ್ಲವೂ ಬೆರೆತು ಹೋಗಿವೆ. ಅರಿಸ್ಟಾಫನೀಸನ ಕೆಲವು ಪೂರ್ಣ ಕೃತಿಗಳು ಮಾತ್ರ ಈಗ ಸಿಕ್ಕಿರುವುದರಿಂದ ಪುರಾತನ ಗ್ರೀಕ್ ವಿನೋದನಾಟಕದ ಕಲ್ಪನೆಯನ್ನು ನಾವು ಅವನ ಕೃತಿಗಳಿಂದ ಮಾತ್ರ ಗ್ರಹಿಸಬೇಕಾಗಿದೆ. ಪುರಾತನ ಸ್ಯಾಟಿರ್ ನಾಟಕದ ಅಂಶಗಳೂ ಈ ನಾಟಕಗಳಲ್ಲಿ ಸೇರಿಕೊಂಡು ಇವು ಒಂದೇ ರೀತಿಯ ಕಲ್ಪನೆ ಹಾಗೂ ರಚನಾ ವಿಧಾನಕ್ಕೆ ಅನುಗುಣವಾಗಿ ಸೃಷ್ಟಿಯಾಗಿವೆ. ಒಂದು ಹುಚ್ಚು ಆದರ್ಶವನ್ನು ಕಾರ್ಯೋನ್ಮುಖಗೊಳಿಸಲು ಹೊರಟಾಗ ಅದು ವಾಸ್ತವಿಕ ಬದುಕಿನ ಹಿನ್ನೆಲೆಯಲ್ಲಿ ಎಷ್ಟೊಂದು ಹಾಸ್ಯಾಸ್ಪದವಾಗುತ್ತದೆಂದು ತೋರಿಸುವುದು ಅರಿಸ್ಟಾಫನೀಸ್ ರೀತಿ. ಅವನ ಮೇಳಗೀತೆಗಳು ಅತ್ಯಂತ ಕಾವ್ಯಾತ್ಮಕತೆಯಿಂದ ತುಂಬಿ ನಾಟಕಕ್ಕೆ ಬೇಕಾದ ಪರಿಸರವನ್ನು ಸೃಜಿಸಲು ಪ್ರೇರಕವಾಗುತ್ತವೆ.


**ಗದ್ಯ:** ತಮ್ಮ ಕಾಲದ ಲೌಕಿಕ ಹಾಗೂ ಧಾರ್ಮಿಕ ಚಿಂತನೆಗಳನ್ನು ಅತ್ಯಂತ ಕಾವ್ಯಾತ್ಮಕವಾಗಿ ಅಭಿವ್ಯಕ್ತಿಗೊಳಿಸಿದ ಮಹಾ ನಾಟಕಕಾರ–ಕವಿಗಳ ಅನಂತರ ಗ್ರೀಕ್ ಸಾಹಿತ್ಯದ ಗದ್ಯಯುಗ ಪ್ರಾರಂಭವಾಯಿತು. ಪ್ರ.ಶ.ಪೂ. 5ನೆಯ ಶತಮಾನದವರೆಗೆ ಸೃಷ್ಟ್ಯಾತ್ಮಕ ಚಿಂತನೆಗಳ ಅಭಿವ್ಯಕ್ತಿಗಾಗಿ ಕಾವ್ಯ ಹಾಗೂ ಗದ್ಯ ಮಾಧ್ಯಮ ಗಳೆರಡನ್ನೂ ಪ್ರಯೋಗಿಸುತ್ತಿದ್ದರು. ಸೋಲನ್, ಕ್ಸೆನೋಫೇನಸ್, ಫಾರ್ಮೆನೈಡಿಸ್, ಎಂಪಿಡಾಕ್ಲಿಸ್–ಮುಂತಾದವರೆಲ್ಲರೂ ಕಾವ್ಯ ಮಾಧ್ಯಮವನ್ನು ಬಳಸಿದರು. ಅವರು ಪ್ರಥಮತಃ ಪ್ರಚಾರಕರಾಗಿದ್ದುದರಿಂದ ತಮ್ಮ ಭಾವನೆಗಳು, ವಿಚಾರಗಳು ಹೆಚ್ಚು ಸ್ಮರಣೀಯವಾಗುವಂತೆ ಕಾವ್ಯ ಶೈಲಿಯನ್ನು ಉಪಯೋಗಿಸಿದರು. ಆದರೆ ಕಾಲಕ್ರಮೇಣ ಗದ್ಯದ ಬಳಕೆ ಅನಿವಾರ್ಯವಾಯಿತು. ಅಕ್ಷರಸ್ಥರಾದ, ಹೆಚ್ಚು ತಿಳಿವಳಿಕೆ ಇರುವ ಜನರಿಗಾಗಿ ಬರೆಯಬೇಕಾಗಿ ಬಂದಾಗ ಅಭಿವ್ಯಕ್ತಿಯ ಮಾಧ್ಯಮ ಹೆಚ್ಚು ಪರಿಷ್ಕಾರಗೊಂಡಿತು–ಜಾನಪದ ಕಥೆಗಳು ಕಾವ್ಯಮಯ ವಾದ ಗಂಭೀರ, ಉನ್ನತ ಶೈಲಿಯನ್ನು ಬಿಟ್ಟು ಗದ್ಯದತ್ತ ಹೊರಳಿದುವು. ಕಾನೂನುಸೂತ್ರಗಳು, ಉದಂತಗಳು, ತಾತ್ತ್ವಿಕ ಚಿಂತನೆಗಳು–ಇವನ್ನು ಸಾಧ್ಯವಾದಷ್ಟು ಸಹಜವಾಗಿ, ಆಡುಮಾತಿನ ಗತಿಲಯಗಳಿಗೆ ಹತ್ತಿರವಾಗುವಂತೆ, ಹಿಡಿದಿಡಲು ಗದ್ಯವೇ ಹೆಚ್ಚು ಉಚಿತವೆನಿಸಿರಬೇಕು. ಕಾವ್ಯದ ಛಂದೋನಿಯಮಗಳಿಗೆ ಅಳವಡಿಸಲಾರದ, ಸಂಕೀರ್ಣ ಆಲೋಚನೆಗಳನ್ನು ಗದ್ಯವಾಕ್ಯಗಳಲ್ಲೇ ಹೇಳಬೇಕೆಂದು ಕಾರ್ಯದೃಷ್ಟಿಯುಳ್ಳ ಪುರಾತನ ಗ್ರೀಕರಿಗೆ ಹೊಳೆದಿರಬೇಕು. ಪ್ರವಾಸಿ ಹೆಕ್‌ಟಾಯಿಸ್, ವೈದ್ಯಶಾಸ್ತ್ರಜ್ಞ ಹಿಪಾಕ್ರಟೀಸ್ ಮತ್ತು ತಮ್ಮ ವಿಚಾರಗಳನ್ನು ಸರಳ ನೇರ ಶೈಲಿಯಲ್ಲಿ ಹೇಳಬೇಕೆಂದು ಉದ್ದೇಶಿಸಿದ ಇತರ ತಾತ್ತ್ವಿಕರು, ವಿಜ್ಞಾನಿಗಳು, ವಿಚಾರಶೀಲರು ಗದ್ಯವನ್ನೇ ಬಳಸಿದರು. ಕಾವ್ಯಾಭ್ಯಾಸಪಂಡಿತರಾಗಿದ್ದ ಓದುಗರ ಸಲುವಾಗಿ ಬರೆಯುವಾಗ, ಗದ್ಯಶೈಲಿಯನ್ನು ಹೆಚ್ಚು ಪರಿಷ್ಕಾರವಾಗಿ, ನಯಗಾರಿಕೆಯಿಂದ ಬಳಸಬೇಕಾಯಿತು. ಹೋಮರ್ ಕಾವ್ಯದ ಪರಿಚಯವುಳ್ಳ ಸುಸಂಸ್ಕೃತರಿಗಾಗಿ ಹೆರಾಕ್ಲಿಟಸ್ ದರ್ಶನಶಾಸ್ತ್ರವನ್ನು ಈಸ್ಕಿಲಸ್ ಕವಿಯ ಸುಭಗ ಮೇಳಗೀತಗಳೋಪಾದಿಯಲ್ಲಿ ಬರೆದ. ಇತಿಹಾಸಕಾರ ಹೀರಡಾಟಸ್ ಪರ್ಷಿಯನ್ ಯುದ್ಧದ ಚರಿತ್ರೆ ನಿರೂಪಿಸಲು ಹೋಮರನ ಭವ್ಯಕಾವ್ಯದ ಶೈಲಿಯನ್ನೂ ಕಥಾನಕ ರೀತಿಯನ್ನೂ ಅನುಕರಿಸಿದ. ಹೀರಡಾಟಸನ ಚಿತ್ರಯುಕ್ತವಾದ ಪದಪುಂಜಗಳು, ಸಮತೋಲವಿರುವ ವಾಕ್ಯಾಂಶಗಳು, ಅಂತ್ಯಪ್ರಾಸಬದ್ಧ ವಾದ ವಾಕ್ಯಗಳು ಗದ್ಯಕ್ಕೆ ಕಾವ್ಯದ ಚೆಲುವನ್ನು ತಂದುಕೊಟ್ಟವು. ಪ್ರಕಾಂಡ ಪಂಡಿತರೆನಿಸಿಕೊಂಡಿದ್ದ ಆ ಕಾಲದ ಸಾಫಿಸ್ಟ್ ಪಂಥದ ಲೇಖಕರು, ಎಲ್ಲ ವೈಚಾರಿಕ ಸಾಹಿತ್ಯವನ್ನೂ ಚೆನ್ನಾಗಿ ಅಧ್ಯಯನ ಮಾಡಿ, ತಮ್ಮ ಗದ್ಯಶೈಲಿ ಯನ್ನು ಅಚ್ಚುಕಟ್ಟಾಗಿ ರೂಢಿಸಿ ಕೊಂಡರು. ಸಾಮ್ರಾಜ್ಯಶಾಹಿ ಅಥೆನ್ಸ್ ನಗರದಲ್ಲಿನ ನ್ಯಾಯಾಲಯಗಳು ಮುಂತಾದ ಪ್ರಜಾಸತ್ತಾತ್ಮಕ ಸಂಸ್ಥೆಗಳು ಮತ್ತು ಚರ್ಚೆ, ವಾದ, ವಾಗ್ಮಿತೆಗಳಲ್ಲಿ ಆಸ್ಥೆ ಅಭಿರುಚಿ ತಳೆದ ಆ ನಗರದ ಸುಶಿಕ್ಷಿತ ಜನಸಮುದಾಯ–ಇವು ಉತ್ತಮ ಗದ್ಯಶೈಲಿಯ ವಿಕಾಸಕ್ಕೆ ಅಗತ್ಯವಾದ ಪರಿಸರ ಒದಗಿಸಿದುವು. ಪರ್ಷಿಯ ದೇಶ ಏಷ್ಯ ಮೈನರ್ ಪ್ರದೇಶದ ನಗರ ರಾಜ್ಯಗಳ ಮೇಲೆ ಆಕ್ರಮಣ ನಡೆಸಿದಾಗ ಹಲವು ವಿಚಾರವಂತರು, ಪಂಡಿತ ಪರಿಣತರು ದೇಶ ಬಿಟ್ಟು ಓಡಿಬಂದು ಅಥೆನ್ಸ್, ಸಿಸಿಲಿ, ದಕ್ಷಿಣ ಇಟಲಿ ಮುಂತಾದ ಕಡೆ ನೆಲೆಸಿದರು. ದಕ್ಷಿಣ ಇಟಲಿ ಪೈಥಾಗೊರಸ್ ಪಂಥಕ್ಕೆ ಸೇರಿದ ಗಣಿತಶಾಸ್ತ್ರಜ್ಞರ ನೆಲೆವೀಡಾಯಿತು. ವಾಗ್ಮಿ ಕಲೆ, ಭಾಷಾ ವಿಜ್ಞಾನಗಳಲ್ಲಿ ಪರಿಣತ ರಾದವರು ಸಿಸಿಲಿಯಲ್ಲಿ ನೆಲೆಸಿದರು. ಇತಿಹಾಸ ರಚನೆಯಂತೂ ಸಾಫಿಸ್ಟ್ ಚಳವಳಿಯ ಅಂಗವಾಗಿಯೇ ಹುಟ್ಟಿತೆನ್ನಬಹುದು. ಕಟಾಯಿಸ್ ಎಂಬವನ ಪ್ರವಾಸಿ ಕಥನಗಳನ್ನು ಓದಿ ಪ್ರಭಾವಿತನಾಗಿದ್ದ ಹೀರಡಾಟಸ್ ಪ್ರವಾಸಕಥನವನ್ನೇ ಪರ್ಷಿಯನ್ ಯುದ್ಧದ ಚರಿತ್ರೆಯನ್ನಾಗಿ ಬರೆದ. ಅವನ ಗ್ರಂಥದಲ್ಲಿ ಸಾಫಿಸ್ಟ್ ಪಂಥದವರ ವಿಚಾರಗಳು, ಹೋಮರನ ಹಾಗೂ ಗ್ರೀಕ್ ಗಂಭೀರನಾಟಕಕಾರರನ್ನು ಕುರಿತ ನೆನಪುಗಳು, ಸವಿವರವಾಗಿ ಬಂದಿವೆ. ಆ ಕಾಲದ ಇನ್ನೊಬ್ಬ ಖ್ಯಾತ ಇತಿಹಾಸಕಾರ ತ್ಯೂಸಿಡಿಡೀಸ್–ಪೆಲೊಪೊನೀಷಿಯನ್ ಯುದ್ಧ ಚರಿತ್ರೆಯನ್ನು ಸಂಗ್ರಹಿಸಿದ. ಆ ಮಹಾಯುದ್ಧ ಒಂದು ಭಯಂಕರ ವ್ಯಾಧಿಯಂತೆ ಹಬ್ಬಿ ಗ್ರೀಕ್ ನಗರರಾಜ್ಯಗಳನ್ನು ಪೀಡಿಸಿತೆಂದು ವರ್ಣಿಸಿ ಅಧಿಕಾರಲಾಲಸೆ–ಅಧಿಕಾರ



ಸಾಕ್ರಟೀಸ್

ಭಯ ಈ ವ್ಯಾಧಿಯ ಉಗ್ರ ರೋಗಲಕ್ಷಣಗಳು ಎಂದು ತನ್ನ ಇತಿಹಾಸಗ್ರಂಥದಲ್ಲಿ ವಿಶ್ಲೇಷಿಸಿದ್ದಾನೆ. ಆ ಶತಮಾನದ ಗ್ರೀಕ್ ಇತಿಹಾಸದಲ್ಲಿ ಯುದ್ಧದ ಪಿಡುಗು ಬಂದಾಗಲೆಲ್ಲ ಈ ರೋಗಚಿಹ್ನೆಗಳು ಕಾಣಿಸಿಕೊಂಡುವು. ಈ ಚಿಹ್ನೆಗಳನ್ನು ಆ ದೇಶದವರು ಸರಿಯಾಗಿ ಗ್ರಹಿಸಬೇಕಾಗಿತ್ತು. ಹಾಗೆ ಗ್ರಹಿಸಿದ್ದರೆ ಅವರು ತಮ್ಮನ್ನು ಕಾಡಿದ ಆ ಪಿಡುಗನ್ನು ನಿವಾರಿಸಿಕೊಳ್ಳಬಹುದಾಗಿತ್ತು ಎನ್ನುವುದು ತ್ಯೂಸಿಡಿಡೀಸನ ಅಭಿಮತ. ಆತನದು ಹೋಮರನ ಕಾವ್ಯಶೈಲಿ. ಮನೋರಂಜಕವಾಗಿ ಕಥೆ ಹೇಳುವುದರಲ್ಲಿ, ಘಟನೆಗಳನ್ನು ಜೀವಂತಗೊಳಿಸುವುದರಲ್ಲಿ ಅವನದು ನಾಟಕಕಾರನಿಗೆ ಸಹಜವಾದ ಕಲ್ಪನಾಶೀಲತೆ. ಆತನ ಇತಿಹಾಸಗ್ರಂಥದ ಪುಟಗಳು ಮತ್ತೆ ಮತ್ತೆ ಗಂಭೀರ ನಾಟಕಕಾರರ ನಾಟ್ಯಪ್ರಜ್ಞೆಯನ್ನೂ ಸಾಫಿಸ್ಟರ ಶಬ್ದ ವೈಖರಿಯನ್ನೂ ನೆನಪಿಗೆ ತರುತ್ತವೆ.

ಸಾಕ್ರಟೀಸ್ ಸಾಫಿಸ್ಟ್ ಚಳವಳಿಯ ಒಂದು ಉನ್ನತ ಶಿಖರವನ್ನು ಪ್ರತಿನಿಧಿಸುವಂತಿದ್ದರೂ ಅವನ ವ್ಯಕ್ತಿತ್ವ ಸಾಫಿಸ್ಟ್ ಪಂಥದವರಿಗಿಂತ ತೀರ ಭಿನ್ನ. ನಾಗರಿಕ ಸಮಾಜದಲ್ಲಿ ವ್ಯಕ್ತಿ ಹೇಗೆ ಬದುಕಿ ಬಾಳಬೇಕೆನ್ನುವುದೇ ಸಾಫಿಸ್ಟ್ ತತ್ತ್ವಗಳ ಮೂಲ ಪ್ರಶ್ನೆ. ಈ ಪ್ರಶ್ನೆ ಸಾಕ್ರಟೀಸನ ವಿಚಾರಶಕ್ತಿಯನ್ನು ಹೆಚ್ಚು ಉಗ್ರವಾಗಿ, ಆದರೆ ತೀರ ಭಿನ್ನವಾದ ರೀತಿಯಲ್ಲಿ ಪ್ರಚೋದಿಸಿತು. ಜಯಾಪಜಯಗಳೇನೇ ಬರಲಿ ಋಜುಮಾರ್ಗದಲ್ಲಿ ಬದುಕಬೇಕೆನ್ನುವುದು ಸಾಕ್ರಟೀಸನ ತತ್ತ್ವ. ಆದರೆ ಹೇಗೋ ಯಶಸ್ವಿಯಾಗಿ ಬದುಕಿದರೆ ಸಾಕೆನ್ನುವುದು ಸಾಫಿಸ್ಟರ ರೀತಿ. ಅರಿಸ್ಟೋಫನೀಸ್ ಸಾಕ್ರಟೀಸನನ್ನು ಸಾಫಿಸ್ಟ್ ಎಂದು ಕರೆದು ಲೇವಡಿ ಮಾಡಿದ್ದರೂ ನಮಗೆ ಸಾಕ್ರಟೀಸನ ನಿಜವಾದವ್ಯಕ್ತಿಚಿತ್ರಣ ದೊರೆಯುವುದು ಇತಿಹಾಸಜ್ಞ ಕ್ಸಿನೋಫಾನನ ಗ್ರಂಥಗಳಲ್ಲಿ. ತ್ಯೂಸಿಡಿಡೀಸ್ ಸಂಪೂರ್ಣಗೊಳಿಸದೆ ಬಿಟ್ಟ ಪೆಲೊಪೊನೀಷಿಯನ್ ಯುದ್ಧದ ಚರಿತ್ರೆಯನ್ನು ಕ್ಸಿನೋಫಾನ್ ತನ್ನ ಹೆಲೆನಿಕಾ ಎಂಬ ಗ್ರಂಥದಲ್ಲಿ ಮುಂದುವರಿಸಿದ್ದಾನೆ. ಇವರಲ್ಲಿ ಹೀರಡಾಟಸನ ದೃಷ್ಟಿವೈಶಾಲ್ಯವಾಗಲೀ ವಿಭಾವನೆಯ ಭವ್ಯತೆಯಾಗಲೀ ಇಲ್ಲ. ಕ್ಸಿನೋಫಾನನ ಚರಿತ್ರೆಯ ವ್ಯಾಪ್ತಿ ಕಿರಿದಾದ್ದು. ಇತಿಹಾಸಕಾರನ ಶೈಲಿಯ ಔನ್ನತ್ಯಕ್ಕಿಂತ ಹೆಚ್ಚಾಗಿ ನಿರೂಪಣೆಯ ಸರಳತೆ, ನೇರಕಥನಶೈಲಿ, ವಸ್ತುನಿಷ್ಠವಾದ ದೃಷ್ಟಿ ನಮ್ಮನ್ನು ಸೆಳೆಯುತ್ತವೆ. ನಿಜವಾಗಿ ನೋಡಿದರೆ ಕ್ಸಿನೋಫಾನ್ ಪ್ರಸಿದ್ಧನಾಗಿರುವುದು ಜೀವನಚರಿತ್ರಕಾರನೆಂದು. ಅವನು ಬರೆದ ಜೀವನಚರಿತ್ರೆಗಳಿಂದಾಗಿ ಪ್ಲೂಟಾರ್ಕ್ ಮುಂತಾದವರಿಗೆ ಪೂರ್ವಸೂಚಿ ಒದಗಿತು.


ಅರಿಸ್ಟಾಟಲ್

ಗದ್ಯಪ್ರಕಾರಕ್ಕೆ ನಾಲ್ಕನೆಯ ಶತಮಾನದ ಗ್ರೀಕ್ ಸಾಹಿತ್ಯದ ಮುಖ್ಯ ಕೊಡುಗೆ–ಗದ್ಯ ಸಂವಾದ. ಇದರ ಮೂಲವನ್ನು ತ್ಯೂಸಿಡಿಡೀಸ್ ಮತ್ತು ಯೂರಿಪಿಡೀಸರ ಕೃತಿಗಳಲ್ಲಿ ಬರುವ ಭಾಷಣಗಳಲ್ಲಿ, ಸಂಭಾಷಣೆಗಳಲ್ಲಿ, ಸೊಫ್ರಾನ್ ಬರೆದ ಮೂಕನಾಟಕಗಳಲ್ಲಿ (ಮೈಮ್) ಕಾಣಬಹುದು. ನಾಲ್ಕೈದು ಭಾಷಣಕಾರರು ಒಟ್ಟಿಗೆ ಕುಳಿತು ಒಂದು ವಿಷಯ ಕುರಿತು ಮಾತನಾಡುವಾಗ, ಮಾತು ಮಥಿಸಿ ವಿಚಾರಗಳು ವಿಕಾಸವಾಗುವುದನ್ನು ತೋರಿಸುವುದು ಗದ್ಯ ಸಂವಾದದ ಉದ್ದೇಶ. ಪ್ಲೇಟೋವಿನ ರಿಪಬ್ಲಿಕ್, ಅರಿಸ್ಟಾಟಲನ ಪೊಯೆಟಿಕ್ಸ್ (ಕಾವ್ಯಮೀಮಾಂಸೆ), ಗದ್ಯಸಂವಾದವೆನ್ನುವ ಪ್ರಕಾರದ ಮೇರುಕೃತಿಗಳು. ಪ್ರಪಂಚದ ಸೃಷ್ಟಿಗೆ ಒಂದು ಉದ್ದೇಶವಿದೆ. ಮನುಷ್ಯ ಒಳ್ಳೆಯದನ್ನು ಸಾಧಿಸಿ ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕು. ಇದು ಪ್ಲೇಟೋವಿನ ಆದರ್ಶ. ಪ್ಲೇಟೋವಿನ ಗ್ರಂಥ ಆದರ್ಶರಾಜ್ಯವನ್ನೂ ಆದರ್ಶಪ್ರಜೆಯನ್ನೂ ಚಿತ್ರಿಸುವುದರ ಜೊತೆಗೆ ಅವರ ಏಳುಬೀಳುಗಳನ್ನೂ ಎತ್ತಿ ತೋರಿಸುತ್ತದೆ. ಇದರಲ್ಲಿ ಪ್ಲೇಟೊಗಿಂತ ಹಿಂದಿನ ಯುಗಗಳ ತತ್ತ್ವಚಿಂತನೆಯ ಸಾರ ಸಮ್ಮಿಳನವೂ ಸಿಕ್ಕುತ್ತದೆ. ಉಳಿದ ಸಂವಾದಗಳಲ್ಲಿ ಪ್ಲೇಟೊ ವಸ್ತುವಿಗಿಂತ ಹೆಚ್ಚಾಗಿ ನಿರೂಪಣಾತಂತ್ರಕ್ಕೆ ಹೆಚ್ಚು ಗಮನವಿತ್ತಿದ್ದಾನೆ. ವಿಚಾರ ಪ್ರತಿಪಾದನೆಯ ಬದಲು ರೀತಿನೀತಿಗಳ ಗೋಜಿಲ್ಲದ ಪೌರಾಣಿಕ ಕಥೆಗಳನ್ನು ಎತ್ತಿಕೊಂಡು ಕಥೆ ಹೆಣೆಯುವುದರಲ್ಲಿ ತೊಡಗಿದ್ದಾನೆ. ಕವಿಗಳನ್ನು ಆದರ್ಶ ರಾಜ್ಯ ದಿಂದಾಚೆಗೆ ಅಟ್ಟಿಬಿಡಬೇಕೆಂದು ವಾದಿಸಿದ ಪ್ಲೇಟೊ ಮಹಾಶಯ ಫೀಡ್ರಸ್, ಸಿಂಪೋಸಿಯಮ್ ಮುಂತಾದ ಗ್ರಂಥಗಳಲ್ಲಿ ತಾನೇ ಒಬ್ಬ ಉತ್ಕೃಷ್ಟ ಕವಿಯಾಗಿ ವಿಜೃಂಭಿಸಿದ್ದಾನೆ. ಪ್ಲೇಟೋವಿನ ಅನಂತರ, ಸಂವಾದಗಳನ್ನೂ ಭಾಷಣಗಳನ್ನೂ ಬರೆದ ವಾಗ್ಮಿಗಳು ಕೇವಲ ವಿಚಾರಗಳ ಪ್ರಚಾರಕ್ಕಾಗಿಯೇ ಬರೆದಂತೆ ತೋರುತ್ತದೆ. ಹೀಗೆ ಯಾವುದೊಂದು ಶ್ರೋತೃವರ್ಗಕ್ಕಾಗಿ ಉದ್ದೇಶಿಸದೆ, ಕೇವಲ ಪ್ರಚಾರಕ್ಕಾಗಿಯೇ ಬರೆದವರಲ್ಲಿ ಐಸೋಕ್ರಟೀಸ್ ಬಹುಮುಖ್ಯನಾದವ. ಪ್ಲೇಟೊ ತನ್ನ ಅಕಾಡೆಮಿಯ ಸಲುವಾಗಿ ಸಂವಾದಗಳನ್ನು ರಚಿಸಿದಂತೆ ಐಸೋಕ್ರಟೀಸ್ ರಾಜನೀತಿಶಾಸ್ತ್ರವನ್ನು ಬೋಧಿಸುವ ತನ್ನ ಸಂಸ್ಥೆಯಲ್ಲಿ ರಾಜನೀತಿಜ್ಞರನ್ನು ತರಬೇತಿಗೊಳಿಸಲೆಂದೇ ತನ್ನ ಭಾಷಣಗಳನ್ನು ಬರೆದ. ತನ್ನ ವಿದ್ಯಾರ್ಥಿಗಳಿಗೆ ಗಂಭೀರ ನಾಟಕಗಳನ್ನೂ ಚರಿತ್ರೆ, ವಾಗ್ಮಿತೆ ಮುಂತಾದವನ್ನೂ ಬೋಧಿಸಿದ. ಸಾರ್ವಜನಿಕ ಸಭೆಗಳಲ್ಲಿ ಪ್ರಸ್ತುತಪಡಿಸಲೆಂದೇ ಭಾಷಣ ರಚಿಸಿದವರಲ್ಲಿ ಡೆಮಾಸ್ತನೀಸನ ಹೆಸರು ಲೋಕಮಾನ್ಯವಾಗಿದೆ. ಅವನು ಗ್ರೀಕರ ವಿರುದ್ಧ ಬೆಳೆಯುತ್ತಿದ್ದ ಮ್ಯಾಸಿಡೋನಿಯದ ಸಾಮ್ರಾಜ್ಯಶಾಹಿಯನ್ನು ಪ್ರತಿಭಟಿಸಿ, ಅಥೆನ್ಸ್ ಪ್ರಜಾಪ್ರಭುತ್ವದ ಧೋರಣೆಗಳನ್ನು ಎತ್ತಿಹಿಡಿದ.

ಪ್ಲೇಟೋವಿನ ಅಕಾಡೆಮಿಯಲ್ಲಿ ಅಧ್ಯಯನ ನಡೆಸುತ್ತಿದ್ದ ಅವನ ಶಿಷ್ಯರಲ್ಲಿ ಅರಿಸ್ಟಾಟಲ್ ಅತ್ಯಂತ ಪ್ರತಿಭಾವಂತ. ಗುರುವಿನ ಸಂವಾದಗಳ ಮಾದರಿಯಲ್ಲೇ ಈತ ರಚಿಸಿದನೆನ್ನಲಾದ ಕೃತಿಗಳು ಯಾವುವೂ ಸಿಕ್ಕಿಲ್ಲ. ಆದರೆ ಸಿಕ್ಕಿರುವ ಚೂರುಪಾರು ಲೇಖನಗಳಲ್ಲಿ ಯಾವ ಹೆಚ್ಚುಗಾರಿಕೆ ಇಲ್ಲವೆಂದರೂ ಅರಿಸ್ಟಾಟಲನ ಉಪನ್ಯಾಸಗಳಲ್ಲಿ ಅವನ ನಿಜವಾದ ಸ್ವೋಪಜ್ಞತೆಯನ್ನು ಕಾಣಬಹುದು. ಸಂವಾದಗಳ ಪ್ರಶ್ನೋತ್ತರ ಶೈಲಿಯನ್ನು ಬಿಟ್ಟು ಅರಿಸ್ಟಾಟಲ್ ಪ್ರವಚನದ ಶೈಲಿಯನ್ನು ಪ್ರಯೋಗಿಸಿದ. ಆದರೆ ಇವನ ಉಪನ್ಯಾಸಗಳು ಸಹ ಈಗ ಉಪಲಬ್ಧವಾಗಿಲ್ಲ. ನಮಗೆ ಉಳಿದಿರುವುದು ಈತ ಭಾಷಣ ಮಾಡಲು ಗುರುತು ಹಾಕಿಟ್ಟುಕೊಂಡಿದ್ದ ಟಿಪ್ಪಣಿಗಳು. ಅವುಗಳಿಂದಲೇ ನಾವು ಇವನ ಸಾಧನೆಯನ್ನು ಅಳೆಯಬೇಕಾಗಿದೆ. ಇವನ ಮುಖ್ಯಕೃತಿಗಳಲ್ಲೊಂದಾದ ಪಾಲಿಟಿಕ್ಸ್ (ರಾಜ್ಯಶಾಸ್ತ್ರ) ಅನ್ನು ರಚಿಸಿದ್ದು ಅಥೆನ್ಸಿನ ರಾಜ್ಯಾಂಗದ ಆಧಾರದ ಮೇಲೆ. ಅವನು ತನ್ನ ಸ್ವಂತ ಅಧ್ಯಯನದಿಂದ ಸಂಗ್ರಹಿಸಿದ್ದ ಪ್ರಕೃತಿ ವಿಜ್ಞಾನದ ತತ್ತ್ವಗಳನ್ನು ಪೊಯೆಟಿಕ್ಸ್ (ಕಾವ್ಯಮೀಮಾಂಸೆ) ಗ್ರಂಥದಲ್ಲಿ ಸಾಹಿತ್ಯಚರಿತ್ರೆಯ ಸೂತ್ರಗಳಿಗೆ ಅನ್ವಯಿಸಿದ್ದಾನೆ. ತನಗಿಂತ ನೂರು ವರ್ಷ ಮುಂಚೆ ಕಣ್ಮರೆಯಾಗಿದ್ದ ಗಂಭೀರ ನಾಟಕಕಾರರ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಕಾವ್ಯನಾಟಕ ಸೂತ್ರಗಳನ್ನು ಪ್ರತಿಪಾದಿಸಿದ್ದಾನೆ. ಅರಿಸ್ಟಾಟಲನ ವಿಚಾರಧಾರೆಯಿಂದ ಆ ಮೇಲಿನ ಪರಂಪರೆಯ ಗಂಭೀರ ನಾಟಕ ಹಾಗೂ ಹರ್ಷ ನಾಟಕಗಳು ಬೇರೆಬೇರೆ ರೀತಿಯಲ್ಲಿ ಪ್ರಭಾವ ಪಡೆದವು. ಅರಿಸ್ಟಾಟಲ್ ಗ್ರೀಕ್ ಗಂಭೀರನಾಟಕದ ರತ್ನತ್ರಯರಿಗೆ ಅನನ್ಯ ಪ್ರಶಂಸೆ ಸಲ್ಲಿಸಿ ಅವರ ಕೃತಿಗಳು ಆ ಪ್ರಕಾರದಲ್ಲಿ ಎಣೆಯಿಲ್ಲದ ಪರಿಪೂರ್ಣ ಕೃತಿಗಳು ಎಂದು ಹೇಳಿದ. ಲೈಕರ್ಗಸ್ ಎಂಬ ರಾಜಕಾರಣಿ ಗಂಭೀರ ನಾಟಕಕಾರತ್ರಯರ ಪ್ರತಿಮೆಗಳನ್ನು ರಂಗಮಂದಿರದಲ್ಲಿ ಸ್ಥಾಪಿಸಿದ ಮತ್ತು ನಾಟಕಗಳ ಗ್ರಂಥಪಾಠವನ್ನು ಖಚಿತಗೊಳಿಸುವ ಪ್ರಯತ್ನ ಮಾಡಿದ. ಗಂಭೀರ ನಾಟಕ ಇಷ್ಟೊಂದು ಉಚ್ಚ್ರಾಯಸ್ಥಿತಿಗೆ ತಲುಪಿದ ಅನಂತರ ಗ್ರೀಕ್ ಗಂಭೀರ ನಾಟಕ ಪರಂಪರೆಯೇ ಕುಂಠಿತವಾಗುವಂತಾಯಿತು. ಈಸ್ಕಿಲಸ್, ಸಾಫೊಕ್ಲೀಸರಂಥ ಗಂಭೀರ ನಾಟಕಕಾರರ ಕೀರ್ತಿಯ ಪ್ರಖರ ಬೆಳಕಿನಲ್ಲಿ ಹೊಸ ನಾಟಕಕಾರರ ಕಣ್ಣು ಕೋರೈಸಿದಂತಾಗಿ ಗ್ರೀಕ್ ರುದ್ರನಾಟಕ ಅಲೆಗ್ಸಾಂಡ್ರಿಯದಲ್ಲಿ ಅತ್ಯಲ್ಪಕಾಲ ಮಾತ್ರ ಮಿಂಚಿ ಅವನತಿಗೊಂಡಿತು. ಆದರೆ ಇದರ ಫಲವಾಗಿ ಆ ಮೇಲಿನ ಹರ್ಷನಾಟಕಕ್ಕೆ ಉತ್ತಮ ಪ್ರೇರಣೆ ದೊರೆಯುತ್ತ ಬಂತು.

**ಹೊಸ ವೈನೋದಿಕಗಳು:** 4ನೆಯ ಶತಮಾನದ ಪ್ರಾರಂಭದಲ್ಲಿ ರಚಿಸಲಾದ ಗಂಭೀರ ಹಾಗೂ ಹರ್ಷನಾಟಕಗಳಲ್ಲಿ ಯೂರಿಪಿಡೀಸನ ಮೆಲೋಡ್ರಾಮಗಳ (ಗಂಭೀರ ಸಂಗೀತ ರೂಪಕ) ಪ್ರಭಾವ ಸ್ಪಷ್ಟವಾಗಿ ತೋರುತ್ತದೆ. ಆ ಕಾಲದ ಹರ್ಷನಾಟಕಗಳಲ್ಲಿ ಅಂಕಗಳ ನಡುವೆ ಮೇಳಗೀತಗಳು ಬರುವುದಿಲ್ಲ. ಸಂಗೀತವನ್ನು ಬಿಟ್ಟು ಪಾತ್ರವಿನ್ಯಾಸಕ್ಕೆ ಅವರು ಹೆಚ್ಚು ಗಮನವಿತ್ತಂತೆ ಕಾಣುತ್ತದೆ. ಹರ್ಷನಾಟಕಗಳಲ್ಲಿ ಸಮಕಾಲೀನ ಯುಗದ ರಾಜಕೀಯ ವ್ಯಕ್ತಿಗಳ, ತತ್ತ್ವಗಳ ವಿಡಂಬನೆಯೂ ಬೇಕಾದಷ್ಟಿದೆ. ಆದರೆ ಮುಖ್ಯವಾಗಿ ಬೊಗಳೆ ಸಿಪಾಯಿ, ಸೂಳೆಯರು, ವಿಟರು, ತಲೆಹಿಡುಕರು, ಅಡುಗೆಯವರು ಮುಂತಾದ ಮಾಮೂಲು ಪ್ರರೂಪಗಳೇ ಹೆಚ್ಚು. ಕಾಮೆಡಿ ಆಫ್ ಮ್ಯಾನರ್ಸ್ ಪ್ರಕಾರದ ಉಗಮವನ್ನು ಪ್ರಪ್ರಥಮವಾಗಿ ಇಲ್ಲಿ ನೋಡಬಹುದು.

ಹರ್ಷನಾಟಕ ಅರಿಸ್ಟಾಟಲನ ಕಾವ್ಯಮೀಮಾಂಸೆಯಿಂದ, ನೀತಿಶಾಸ್ತ್ರದ ಸೂತ್ರಗಳ ಪ್ರಭಾವದಿಂದ, ತನ್ನ ಹಳೆಯ ಕಾಲದ ಒರಟುತನವನ್ನೂ ಅಶ್ಲೀಲ ಹಾಸ್ಯವನ್ನೂ ಕಳಚಿ ಒಗೆದು ಮುಪ್ಪುರಿಗೊಂಡಿತು. ಅದು ರಾಜಕೀಯ ವಿಡಂಬನೆ ಹಾಗೂ ಒರಟು ಪ್ರಹಸನದ ಅಂಶಗಳನ್ನು ಬಿಟ್ಟು, ವಾಸ್ತವಿಕ ಸಾಮಾಜಿಕ ಚಿತ್ರಣ ನೀಡುವುದನ್ನೇ ಗುರಿಯಾಗಿಟ್ಟುಕೊಂಡಿತು. ಹೀಗೆ ಅಸ್ತಿತ್ವಕ್ಕೆ ಬಂದ ಯುರೋಪಿನ ಹರ್ಷನಾಟಕದ ಸಂಪ್ರದಾಯ ರೋಮನ್ ನಾಟಕಕಾರರಾದ ಪ್ಲಾಟಸ್ ಮತ್ತು ಟೆರೆನ್ಸರಿಂದ ಹಿಡಿದು ಇಂಗ್ಲೆಂಡಿನ ಷೇಕ್ಸ್‌ಪಿಯರ್, ಷೆರಿಡನ್ನರ ವರೆಗೆ ಪೂರ್ಣ ರಸವಾಹಿನಿಯಾಗಿ ಪ್ರವಹಿಸಿತು. ಗ್ರೀಸಿನ ಹೊಸ ಹರ್ಷನಾಟಕ ಉಚ್ಚ್ರಾಯಸ್ಥಿತಿ ಕಂಡದ್ದು ಪ್ರಶ.ಪೂ. 4ನೆಯ ಶತಮಾನದಲ್ಲಿ. ಹೊಸ ವೈನೋದಿಕಗಳನ್ನು ಬರೆದವರಲ್ಲಿ ಮಿನಾಂಡರ್, ಡಿಫೈಲಸ್, ಫಿಲೆಮಾನ್ ಮುಂತಾದವರ ಹೆಸರುಗಳಿದ್ದರೂ ಮಿನಾಂಡರನ ಕೆಲವು ನಾಟಕಗಳ ತುಣುಕುಗಳನ್ನು ಬಿಟ್ಟರೆ ಯಾವೊಂದು ಪೂರ್ಣ ಕೃತಿಯೂ ದೊರೆತಿಲ್ಲ. ಆತನ ನಾಟಕಗಳಲ್ಲಿನ ಅತ್ಯಂತ ಕಲಾತ್ಮಕವೂ ಸೂಕ್ಷ್ಮವೂ ಆದ ಪಾತ್ರ ವಿನ್ಯಾಸ, ನವುರಾದ ಹಾಸ್ಯ–ಇವು ಸುಸಂಸ್ಕೃತ ಅಥೆನ್ಸ್ ನಗರದ ಶಿಷ್ಟವರ್ಗದ ಅಭಿರುಚಿಯನ್ನು ಸೂಚಿಸುತ್ತವೆ.

**ಹೊಸ ಗದ್ಯಪದ್ಯ ಪ್ರಭೇದಗಳು:** ಅರಿಸ್ಟಾಟಲನ ತಾತ್ತ್ವಿಕ ಪರಂಪರೆಯನ್ನು ಮುಂದುವರಿಸಿದವರಲ್ಲಿ ಕ್ಯಾರೆಕ್ಟರ್ಸ್ ಎಂಬ ವಿಶಿಷ್ಟ ತೆರನಾದ (ನಾಗರಿಕ) ವ್ಯಕ್ತಿಚಿತ್ರಣಗಳನ್ನೂ ಸಸ್ಯವಿಜ್ಞಾನ ಗ್ರಂಥವನ್ನೂ ಬರೆದು ಪ್ರಸಿದ್ಧನಾದ ಥಿಯೋಫ್ರಾಸ್ಟಸ್ ಮುಖ್ಯನಾದವ. ಪ್ರ.ಶ.ಪೂ. ನಾಲ್ಕನೆಯ ಶತಮಾನದಲ್ಲಿ ಗ್ರೀಸಿನ ಹಳೆಯ ತಾತ್ತ್ವಿಕ ಸಂಪ್ರದಾಯದ ಜೊತೆಯಲ್ಲೇ ಸ್ಟೋಯಿಕ್ಸ್ ಮತ್ತು ಎಪಿಕ್ಯೂರಿಯನ್ಸ್ ಎಂಬ ಎರಡು ಹೊಸ ವೈಚಾರಿಕ ಪಂಥಗಳು ಹುಟ್ಟಿ ಜನಪ್ರಿಯವಾದುವು. ಥಿಯೋಫ್ರಾಸ್ಟಸನ ಶಿಷ್ಯ ಫಾಲೆರೆಮ್ಮಿನ ಡೆಮಿಟ್ರಿಯಸ್ ಪ್ರ.ಶ.ಪೂ. 307ರಲ್ಲಿ ದೇಶಭ್ರಷ್ಟನಾಗಿ ಅಲೆಗ್ಸಾಂಡ್ರಿಯದ ಟಾಲಮಿಯ ಆಶ್ರಯ ಪಡೆದ. ಅಲೆಗ್ಸಾಂಡ್ರಿಯದಲ್ಲಿ ಜಗದ್ವಿಖ್ಯಾತ ಪುಸ್ತಕ ಭಂಡಾರವನ್ನು ಸ್ಥಾಪಿಸಿದವ ಅವನೇ. ಅವನ ಪ್ರಯತ್ನದಿಂದಾಗಿ ಅರಿಸ್ಟಾಟಲನ ವೈಜ್ಞಾನಿಕ ವಿಚಾರಗಳೂ ಶಾಸ್ತ್ರಪದ್ಧತಿಗಳೂ ಅಲೆಗ್ಸಾಂಡ್ರಿಯದಲ್ಲಿ ಬೇರೂರಿದುವು. ಅಲೆಗ್ಸಾಂಡ್ರಿಯದಿಂದ ಹಲವು ಮಂದಿ ವಿದ್ವಾಂಸರು ರೋಮ್ ನಗರಕ್ಕೆ ವಲಸೆ ಬಂದಾಗ ಅವರು ತಮ್ಮ ಜೊತೆಯಲ್ಲಿ ಗ್ರೀಕ್ ಅಭಿಜಾತ ಪರಂಪರೆಯ ಸಾರಸರ್ವಸ್ವವನ್ನೂ ಹೊತ್ತು ತಂದರು. ಅಲೆಗ್ಸಾಂಡ್ರಿಯದಲ್ಲಿ ಸ್ಥಾಪಿತವಾದ ಗ್ರೀಕ್ ಸಾಹಿತ್ಯ ಸಂಪ್ರದಾಯದಲ್ಲೂ ಹಲವು ಕವಿಗಳು ಹುಟ್ಟಿಕೊಂಡರು. ಅಲೆಗ್ಸಾಂಡ್ರಿಯದ ಕವಿಗಳಿಂದ ರಚಿತವಾದ ಕಾವ್ಯ ಪಾಂಡಿತ್ಯಪೂರ್ಣವಾಗಿದ್ದು, ಮನೋವಿಶ್ಲೇಷಣಾತ್ಮಕ ಅಂಶಗಳಿಂದ ಕೂಡಿದೆ. ಹಿಂದಿನ ಪರಂಪರೆಯನ್ನು ಬಿಡಬಾರದೆಂಬ ಹಂಬಲದಿಂದ ಇವರು ಹಳೆಯ ಛಂದೋನಿಯಮಗಳನ್ನು, ಭಾಷೆಯನ್ನು ಅನುಕರಿಸಲೆತ್ನಿಸಿದರು. ನಾಗರಿಕ ಓದುಗರಿಗಾಗಿ ಇವರು ಹಳ್ಳಿಗಾಡಿನ ಪ್ರಶಾಂತ ಬದುಕಿನ ಚೆಲುವನ್ನು ನವಿರಾಗಿ ಬಣ್ಣಿಸಿದರು. ಈ ಶಿಷ್ಟಕವಿಗಳು ತಾವು ಕಂಡುಂಡ ವೈಜ್ಞಾನಿಕ ವಿಚಾರಗಳನ್ನು ಹಳೆಯ ಸಂಪ್ರದಾಯದ ರೀತಿಯಲ್ಲೇ ಹೇಳಲು ಪ್ರಯತ್ನಿಸುವುದರಿಂದ ಇವರ ಕಾವ್ಯ ಹಳತು ಹೊಸತುಗಳ ಮಿಶ್ರಣವಾಗಿದೆ. ಅಲೆಗ್ಸಾಂಡ್ರಿಯದ ಕವಿಗಳಲ್ಲಿ ಮೊದಲಿಗರೆಂದರೆ; ಗ್ರಾಮಜೀವನವನ್ನು ಚಿತ್ರಿಸುವ ಪ್ಯಾಸ್ಟೋರಲ್ ಕವಿ ಥಿಯೋಕ್ರಟಿಸ್, ಪುರಾಣಕಾವ್ಯಶೈಲಿಯಲ್ಲಿ ಬರೆದ ರೋಡ್ಸ್ ಪ್ರಾಂತದ ಅಪೊಲೋನಿಯಸ್, ಪುರಾಣಗಳ ಮತಪ್ರಕ್ರಿಯೆಗಳ ಉಗಮವನ್ನು ವಿವರಿಸುವ ಐಷಿಯಾ ಎಂಬ ಗ್ರಂಥ ಬರೆದ ಕ್ಯಾಲಿಮಾಕಸ್ ಮುಂತಾದವರು. ಶೋಕಾತ್ಮಕವಾದ ಎಪಿಗ್ರಾಮ್‌ಗಳನ್ನು (ನಾಟುನುಡಿ) ಬರೆದ ಹೆರಾಕ್ಲಿಟಸ್ ಹೊಸದೊಂದು ಕಾವ್ಯಪ್ರಕಾರವನ್ನೇ ಪ್ರಾರಂಭಿಸಿದನೆನ್ನಬಹುದು.

ಗ್ರೀಕರನ್ನು ಗೆದ್ದ ರೋಮನರಿಗೆ ಗ್ರೀಕರ ಹೊಸ ಗ್ರೀಕ್ ವೈನೋದಿಕಗಳ, ಅಲೆಗ್ಸಾಂಡ್ರಿಯನ್ ಕಾವ್ಯ, ವಿಜ್ಞಾನ, ಭೂಗೋಳಶಾಸ್ತ್ರ, ಇತಿಹಾಸ, ವಿಮರ್ಶೆ, ಪಾಂಡಿತ್ಯ ಪದ್ಧತಿಗಳೆಲ್ಲದರ ಫಲಶ್ರುತಿ ದೊರೆಯುವಂತಾಗಿ ರೋಮನ್ ಸಾಹಿತ್ಯದ ನಿರ್ಮಾಣಕ್ಕೆ ಬೇಕಾದ ಸ್ಫೂರ್ತಿ, ಮಾದರಿಗಳು ಒದಗಿದುವು. ಅಭಿಜಾತ ಯುಗದ ಕಟ್ಟಕಡೆಯ ಘಟ್ಟದಲ್ಲಿ ಇತಿಹಾಸಗ್ರಂಥಗಳನ್ನು ಬರೆದವರಲ್ಲಿ ಪಾಲಿಬಿಯಸ್‌ನ ಹೆಸರು ಉಲ್ಲೇಖಾರ್ಹ. ಅವನ ವಿಶಿಷ್ಟ ತಾತ್ತ್ವಿಕಚಿಂತನೆ, ವಿಚಿತ್ರ ಶೈಲಿ ಅನಂತರದ ಸಾಹಿತಿಗಳ ಮೇಲೆ ಪ್ರಭಾವ ಬೀರಿ, ಹೊಸ ಮಾರ್ಗ ಸ್ಥಾಪಿಸಿದುವು.

ಪ್ರ.ಶ.ಪೂ. ಎರಡನೆಯ ಶತಮಾನದಲ್ಲಿ ರೂಪ ತಳೆದ (ಅದ್ಭುತಕಥೆಗಳು) ಗದ್ಯ ರೊಮಾನ್ಸುಗಳು ಸಮಗ್ರ ಯುರೋಪಿನ ಸಾಹಿತ್ಯದ ಬಹುಮುಖ ಬೆಳೆವಣಿಗೆಗೆ ಕಾರಣವಾದವು. ರೊಮಾನ್ಸ್‌ಗಳು ಗ್ರೀಸಿನ ಅವಿಚ್ಛಿನ್ನ ಕಥಾನಕ ಪರಂಪರೆಯಿಂದ ಉದ್ಭವಿಸಿದರೂ ಅವುಗಳ ಮೇಲೆ ಗ್ರೀಕ್ ನಾಟಕಗಳೂ ತಮ್ಮ ಪ್ರಭಾವವನ್ನು ಅಚ್ಚೊತ್ತಿದವೆಂಬುದನ್ನು ಗಮನಿಸಬೇಕು. ಪ್ರ.ಶ.ಪೂ. ಎರಡನೆಯ ಶತಮಾನದ ಅನಂತರ ಗ್ರೀಕ್ ಸಾಹಿತ್ಯದ ಇಳಿಗತಿ ಪ್ರಾರಂಭವಾಯಿತು. ಆಮೇಲೆ ಬಂದ ಸಾಹಿತಿಗಳು ಆರ್ಷೇಯವಾದ ಸಾಹಿತ್ಯಸಂಪ್ರದಾಯಗಳನ್ನು ಉಳಿಸಿಕೊಳ್ಳುವುದರಲ್ಲೇ ಹೆಚ್ಚಾಗಿ ಆಸಕ್ತಿ ವಹಿಸಿದರು. ಪ್ಲೂಟಾರ್ಕನ ನೀತಿಪ್ರಧಾನವಾದ ಜೀವನಚರಿತ್ರೆಗಳಲ್ಲಿ (ಲೈವ್ಸ್) ಲೂಸಿಯನ್ನನ ಗದ್ಯ ಸಂವಾದಗಳಲ್ಲಿ ಸಾಕ್ರಟೀಸನ ತಾತ್ತ್ವಿಕ ವಿಚಾರಗಳು ಮತ್ತೆಮತ್ತೆ ಅಭಿವ್ಯಕ್ತಿ ಪಡೆದಿವೆ. ಲೂಸಿಯನ್ನನ ವಿಚಿತ್ರ ಲಘುಕಲ್ಪನೆ ಅರಿಸ್ಟಾಫನೀಸನ ನಾಟಕಗಳ ನೆನಪು ತರುತ್ತದೆ. ಪ್ಲೇಟೊ, ಅರಿಸ್ಟಾಟಲರ ವಿಚಾರಗಳು ಇಲ್ಲಿ ಚರ್ವಿತಚರ್ವಣವಾದಂತೆ ಭಾಸವಾಗುತ್ತದೆ. ಆಲ್ಸಿಫ್ರಾನ್ ಬರೆದ ಪತ್ರಗಳಲ್ಲಿ ಮಿನಾಂಡರನ ನಾಟಕಗಳ ವಾತಾವರಣ, ವಸ್ತು, ಶೈಲಿ ಮತ್ತೆ ಕಾಣಿಸಿಕೊಳ್ಳುತ್ತವೆ. ಹೀಗೆ ಪುನಃಪುನಃ ಹಳೆಯ ಪರಂಪರೆಯತ್ತ ವಾಲುವ ಈ ಸಾಹಿತಿಗಳು ಅಭಿಜಾತಯುಗದ ಇಳಿಗತಿಯನ್ನು ಸೂಚಿಸುತ್ತಾರೆ. ಇವರಲ್ಲಿ ಯಾರು ಸಂಪ್ರದಾಯವನ್ನು ಅರಗಿಸಿಕೊಂಡು ತಮ್ಮ ಶೈಲಿವಸ್ತುಗಳ ಮೇಲೆ ಸಂಪೂರ್ಣ ಹಿಡಿತ ಸಾಧಿಸಿಕೊಂಡರೋ ಅವರು ಬಾಳಬಲ್ಲ ಕೃತಿಗಳನ್ನು ರಚಿಸುವುದು ಸಾಧ್ಯವಾಯಿತು.

**ಪೂರ್ವ ಕ್ರಿಶ್ಚನ್ ಯುಗ** : ಅಭಿಜಾತ ಗ್ರೀಕ್ ಸಂಪ್ರದಾಯ ಮಧ್ಯಯುಗದ ಗ್ರೀಕ್ ಸಾಹಿತ್ಯಕ್ಕೂ ಅನಂತರದ ರೋಮನ್ ಸಾಹಿತ್ಯಕ್ಕೂ ಮುಖ್ಯ ಪ್ರೇರಕಶಕ್ತಿಯಾಗಿ ಮುಂದುವರಿಯಿತು. ಕ್ರೈಸ್ತಧರ್ಮ ಸ್ಥಾಪಿತವಾದ ಮೇಲೆ ಅದರ ಚೈತನ್ಯದಾಯಕ ಪ್ರಬಲಶಕ್ತಿಗಳಿಂದಾಗಿ ಹೊಸಹೊಸ ಪ್ರಕಾರಗಳು, ವೈವಿಧ್ಯಮಯ ವಿಚಾರಗಳು ರೂಪುಗೊಂಡವು. ಹೊಸ ಒಡಂಬಡಿಕೆಯ ಸೃಷ್ಟಿಕರ್ತರಲ್ಲೊಬ್ಬನಾದ ಸೇಂಟ್ ಪಾಲ್ ಪ್ಯಾಲಸ್ತೀನ್ ಸುವಾರ್ತೆಯನ್ನು ಗ್ರೀಕ್ ಲೋಕಕ್ಕೆ ಅರ್ಥವತ್ತಾಗಿ ಪರಿಚಯ ಮಾಡಿಕೊಟ್ಟು ಹೊಸ ಅಭಿವ್ಯಕ್ತಿಯ ಮಾರ್ಗಗಳನ್ನು ಸೂಚಿಸಿದ. ಆದರೆ ಪಾಲ್‌ಗೆ ಪ್ರೇರಣೆಯಾದ ಸೃಜನಶೀಲ ಶಕ್ತಿಗಳು ಅನಂತರದ ಕ್ರಿಶ್ಚನ್ ಅಪಾಸಲರ ತಲೆಮಾರಿನಲ್ಲಿ ಹೆಚ್ಚು ಕಾರ್ಯಪ್ರವೃತ್ತವಾದಂತೆ ಕಾಣಿಸುವುದಿಲ್ಲ. ಇದಕ್ಕೆ ನಿದರ್ಶನವಾಗಿ (ಹೊಸ ಒಡಂಬಡಿಕೆಯಲ್ಲಿ ಸೇರದೆ ಉಳಿದಿರುವ) ಪೂರ್ವ ಕ್ರಿಶ್ಚನ್ ಚರ್ಚಿನ ಧರ್ಮಪ್ರವರ್ತಕರ ಗ್ರೀಕ್ ಲೇಖನಗಳನ್ನು ನೋಡಬಹುದು. ಫಸ್ಟ್ ಎಪಿಸಲ್ ಆಫ್ ಕ್ಲೆಮಂಟ್ ಎನ್ನುವ ಪತ್ರದಲ್ಲಿ ಕಾರಿಂತಿಯನ್ ಚರ್ಚನ್ನು ಕುರಿತ ಖಂಡನೆ ಇದೆ. ಚರ್ಚಿನ ನಿಯಮಕ್ಕನುಸಾರವಾಗಿ ನೇಮಿತವಾಗಿದ್ದ ಪ್ರವಚನಾಧಿಕಾರಿಗಳನ್ನು ತೆಗೆದುಹಾಕಿದರೆಂಬುದೇ ಈ ಖಂಡನಾಪತ್ರಕ್ಕೆ ಮುಖ್ಯ ಪ್ರೇರಣೆ. ಈ ಚಿತ್ರ ಮೊದಲ ಕ್ರಿಶ್ಚನ್ ಶತಮಾನದ ಚರ್ಚುಗಳ ಇತಿಹಾಸದ ಮೇಲೆ ಬೆಳಕು ಹರಿಸುತ್ತದೆ. ಪಾಪದೋಷ, ತಪ್ಪೊಪ್ಪಿಗೆ, ಕ್ಷಮೆ ಮುಂತಾದ ಕ್ರೈಸ್ತಧರ್ಮ ಸಮಸ್ಯೆಗಳನ್ನು ಕುರಿತ ಲೇಖನಗಳು ಆ ಕಾಲದ ಕೆಲವು ಗ್ರಂಥಗಳಲ್ಲಿ ಕಾಣಸಿಗುತ್ತವೆ. ಪ್ರ.ಶ.ಪೂ. 130ರಲ್ಲಿ ಬರೆದ ಸೆಕಂಡ್ ಎಪಿಸಲ್ ಆಫ್ ಕ್ಲೆಮಂಟ್ ಎಂಬ ಪ್ರವಚನದ ದಿ ಷಪರ್ಡ್ ಆಫ್ ಹೆರ್ಮಾಸ್ ಎಂಬ ಭಾಗದಲ್ಲಿ ಕ್ರಿಸ್ತಪೂರ್ವಯುಗದ ಪೇಗನ್ ಕಾದಂಬರಿಗಳಿಂದಲೂ ಹಲವು ಬೇರೆಬೇರೆ ಲೌಕಿಕ ಗ್ರಂಥಗಳಿಂದಲೂ ಆರಿಸಿ ಸೇರಿಸಿದ ಕಲಬೆರಕೆಯ ಅಂಶಗಳಿವೆ. ಈ ರೀತಿಯ (ಎಪಿಸಲ್ಸ್) ಧಾರ್ಮಿಕ ಪತ್ರಗಳು, ಪ್ರವಚನಗಳು (ಸರ್ಮನ್ಸ್) ಮತ್ತು ಬೈಬಲಿನ ವ್ಯಾಖ್ಯಾನಗಳು, ಪೂರ್ವ ಕ್ರಿಶ್ಚನ್ ಚರ್ಚಿನ ಇತಿಹಾಸ ತಿಳಿಯಬೇಕೆನ್ನುವವರಿಗೆ ಸಾಕ್ಷ್ಯಾಧಾರವಾಗಿವೆ. ಆ ಕಾಲದಲ್ಲಿ ರಚಿತವಾದ ಅಪಾಲಜಿ ಎಂಬ ಧಾರ್ಮಿಕ ಲೇಖನಗಳಲ್ಲಿ ಕ್ರೈಸ್ತಧರ್ಮವನ್ನು ಸಕಾರಣವಾಗಿ ಸಮರ್ಥಿಸಲಾಗಿದೆ. ಅಂಥ ಲೇಖನಗಳನ್ನು ಬರೆದವರಲ್ಲಿ ಆರಿಸ್ಟಿಡೀಸ್ (ಪ್ರ.ಶ. 140), ಹುತಾತ್ಮ ಜಸ್ಟಿಸ್ (150), ಅವನ ಶಿಷ್ಯ ಟೇಷಿಯನ್ (160), ಅಥೀನಾಗೊರಸ್ (177), ಓರೆಗಾನ್ ಮತ್ತು ಆಂಟಿಯೋಕಿನ ಥಿಯಾಫೈಲಸ್ ಮುಂತಾದವರ ಹೆಸರು ಹೇಳಬಹುದು. ಕ್ರೈಸ್ತಧರ್ಮವನ್ನು ಸಮರ್ಥಿಸಲು ಧರ್ಮಪ್ರವರ್ತಕರು ಹಲವೊಮ್ಮೆ ಯಹೂದ್ಯರ ಧರ್ಮಗ್ರಂಥಗಳಿಂದಲೇ ವಸ್ತುವನ್ನು ಆರಿಸಿಕೊಂಡರು. ಮೋಸೆ ರಚಿಸಿದನೆಂದು ಹೇಳಲಾದ ಹಳೆಯ ಒಡಂಬಡಿಕೆಯ ಮೊದಲ ಭಾಗದಿಂದ ಅವರು ತಮಗೆ ಬೇಕಾದ ಭಾಗಗಳನ್ನು ಬೇಕಾದಂತೆ ಬಳಸಿಕೊಂಡರು. ಸಿಸಿರೋ, ಲೂಸಿಯಾನ್ ಮುಂತಾದವರ ವಿಡಂಬನಾತ್ಮಕ ಲೌಕಿಕ ಬರೆಹಗಳನ್ನು ತಮ್ಮ ಧರ್ಮಜಿಜ್ಞಾಸೆಗಳಿಗೆ ಉಪಯೋಗಿಸಿಕೊಂಡರು. ಪ್ರ.ಶ.ಪೂ. 2ನೆಯ ಶತಮಾನದ ವೇಳೆಗೆ ಅಪಾಲಜಿ ಎನ್ನುವ ಈ ಪ್ರಕಾರದ ಬರೆವಣಿಗೆ ಸ್ಪಷ್ಟವಾದ ಸಾಹಿತ್ಯಕ ಅಂಶಗಳನ್ನು ಮೈಗೂಡಿಸಿಕೊಂಡಿತೆನ್ನಬಹುದು. ಐರಿನೇಯಸ್, ಹಿಪ್ಪಾಲಿಟಸ್, ಅಲೆಗ್ಸಾಂಡ್ರಿಯದ ಕ್ಲೆಮಂಟ್ ಮುಂತಾದವರ ಬರೆಹಗಳಲ್ಲಿ ಬೌದ್ಧಿಕತೆ, ನೇರ ನಿಶಿತ ಶೈಲಿ ಮುಂತಾದ ಉತ್ತಮ ಸಾಹಿತ್ಯಕ ಅಂಶಗಳಿವೆ. 339ರಲ್ಲಿ ಯೂಸಿಬಿಯಸ್ ಆಫ್ ಸಿಸಾರಿಯೋ ರಚಿಸಿದ ಎಕ್ಲೀಸಿಯಾಸ್ಟಿಕಲ್ ಹಿಸ್ಟರಿ ಕ್ರಿಶ್ಚನ್ ಧಾರ್ಮಿಕ ಸಾಹಿತ್ಯದ ಹಾಗೂ ಚರ್ಚಿನ ಚರಿತ್ರೆಯ ಒಂದು ಮುಖ್ಯ ಆಕರ ಗ್ರಂಥ. ಕ್ರಿಶ್ಚನ್ ಚರ್ಚಿನ ಅಧಿಕಾರವನ್ನು ಸಮರ್ಥಿಸುವ ಈ ಗ್ರಂಥಕ್ಕೆ ಪುರಾತನ ಗ್ರೀಕರ ಸಾಮ್ರಾಜ್ಯಶಾಹಿ ತತ್ತ್ವಗಳು ಸ್ಫೂರ್ತಿ ನೀಡಿದುವೆಂಬ ಮಾತು ಗಮನಾರ್ಹ.

**ಮಧ್ಯ ಕ್ರಿಶ್ಚನ್ ಯುಗ** : ಮಧ್ಯಯುಗದ ಕ್ರೈಸ್ತಸಾಹಿತಿಗಳು, ಪೂರ್ವ ಕ್ರಿಶ್ಚನ್ ಯುಗದ ಓರೆಗಾನ್ ಮತ್ತು ಕ್ಲೆಮಂಟರಂತೆ ಗ್ರೀಕ್ ಮತ್ತು ರೋಮನ್ ಅಭಿಜಾತ ಸಾಹಿತ್ಯ ಹಾಗೂ ಶಿಕ್ಷಣಪರಂಪರೆಯಿಂದ ಗ್ರಹಿಸಿದ ತತ್ತ್ವಗಳನ್ನು ಧರ್ಮಗ್ರಂಥಗಳ ರಚನೆಗಾಗಿ ಅಳವಡಿಸಿಕೊಂಡರು. ಪ್ರ.ಶ. 4ನೆಯ ಶತಮಾನದಲ್ಲಿ ಬರೆದ ದಿ ಬ್ಯಾಂಕ್ವೆಟ್ ಆಫ್ ಸೇಂಟ್ ಮೆಥೋಡಿಯಸ್ ಎಂಬ ಗ್ರಂಥ ಪ್ಲೇಟೊವಿನ ಸಂವಾದಗಳನ್ನೂ 3ನೆಯ ಶತಮಾನದ ಗ್ರೀಕ್ ರೊಮಾನ್ಸ್‌ಗಳನ್ನೂ ಹೋಲುತ್ತದೆ. ಅಥೆನೇಷಿಯನ್ ಎಂಬಾತ ಗ್ರೀಕ್ ಅಭಿಜಾತ ಸಾಹಿತ್ಯದಿಂದ ಆರಿಸಿದ ಉಲ್ಲೇಖಗಳ ಮೂಲಕ ದೈವೀಕರಣದ ತತ್ತ್ವವನ್ನು ಪಂಡಿತ ಪಾಮರರಿಗೆ ಅರ್ಥವಾಗುವಂತೆ ವಿವರಿಸಿದ್ದಾನೆ. ಒಟ್ಟಿನಲ್ಲಿ ಹೇಳುವುದಾದರೆ, ಮಧ್ಯಯುಗದ ಧಾರ್ಮಿಕ ಅನುಯಾಯಿಗಳು ಗ್ರೀಕ್ ಅಭಿಜಾತಯುಗದ ವಾಗ್ಮಿಕಲೆ, ದರ್ಶನ, ಶಾಸ್ತ್ರಗಳಲ್ಲಿ ವಿಶೇಷ ಪಾಂಡಿತ್ಯ ಪಡೆದಿದ್ದರು. ಪ್ರ.ಶ. 5ನೆಯ ಶತಮಾನದಿಂದ 11ನೆಯ ಶತಮಾನದವರೆಗೆ ತಾತ್ತ್ವಿಕ ಜಿಜ್ಞಾಸೆ ಹಾಗೂ ಧಾರ್ಮಿಕ ಪ್ರವಚನಗಳನ್ನುಳ್ಳ ವ್ಯಾಖ್ಯಾನಗಳೂ ಉಪನ್ಯಾಸಗಳೂ ರಚಿತವಾಗುತ್ತಲೆ ಇದ್ದವು. ಬೈಜ಼ಾಂಟಿಯನ್ ತಾತ್ತ್ವಿಕರಲ್ಲಿ 11ನೆಯ ಶತಮಾನದ ಸಿಮಿಯನ್ ಎಂಬಾತ ತನ್ನ ಪ್ರವಚನಗಳಲ್ಲಿ 15 ಮಾತ್ರಾಗಣದ ಕಾವ್ಯ ಛಂದಸ್ಸನ್ನು ಅತ್ಯಂತ ಪರಿಣಾಮಯುತವಾಗಿ ಪ್ರಯೋಗಿಸಿದ್ದಾನೆ. ಕ್ರೈಸ್ತ ಪ್ರಾರ್ಥನಾ ವಿಧಿಗೆ ಸಂಬಂಧಿಸಿದ ಉತ್ತಮ ಗೀತೆಗಳ ಪ್ರವಚನಗಳ ರಚನೆಯನ್ನು ಅಭಿಜಾತ ಯುಗದ ಗ್ರೀಕರ ಧರ್ಮಶ್ರದ್ಧೆ ಹಾಗೂ ಕಲಾವಂತಿಕೆಗಳೇ ನೇರವಾಗಿ ನಿರ್ದೇಶಿಸಿದುವು. ಬೈಜ಼ಾಂಟಿಯನ್ ಪ್ರಾರ್ಥನಾ ಗೀತೆಗಳಲ್ಲಂತೂ ಉತ್ತಮ ಶಬ್ದಸಂಯೋಜನೆಯಿಂದ ಹೇಗೆ ಸಂಗೀತಮಯ ಕಾವ್ಯ ನಿರ್ಮಾಣವಾಯಿತೆಂದು ನೋಡಬಹುದು. ಬೈಜ಼ಾಂಟಿಯನ್ ಚರ್ಚಿನ ಲೇಖಕರು ಸಾಮಾನ್ಯ ಜನರಿಗೆ ಧರ್ಮಬೋಧೆ ಮಾಡಲು ನೀತಿಕಥೆ ಮುಂತಾದ

ಮನೋರಂಜನೆಯ ಸಾಧನೆಗಳನ್ನು ಬಳಸಿಕೊಂಡರು. ಆ ದೃಷ್ಟಿಯಿಂದಲೇ ಹಲವಾರು ಸಂತರ ಜೀವನಚರಿತ್ರೆಗಳನ್ನು ಬರೆದರು. ಇವುಗಳಲ್ಲಿ 4ನೆಯ ಶತಮಾನದಲ್ಲಿ ಜೀವಿಸಿದ್ದ ಈಜಿಪ್ಟಿನ ಸೇಂಟ್ ಆಂಟೊನಿಯನ್ನು ಕುರಿತ ಜೀವನ ಚರಿತ್ರೆ ತುಂಬ ಪ್ರಖ್ಯಾತವಾದುದು.

ಎಲ್ಲಕ್ಕಿಂತ ಹೆಚ್ಚಾಗಿ ಮಧ್ಯಯುಗದ ಜನರ ಆಸಕ್ತಿಯನ್ನು ಸೆಳೆದ ಸಾಹಿತ್ಯ ಪ್ರಕಾರವೆಂದರೆ ಚರಿತ್ರೆ. ಲಿಯೋ, ಮೈಕಲ್ ಸೆಲ್ಲಸ್, ಅನಾಕಾಮ್ ನೀನಾ ಮುಂತಾದ ಬೈಜ಼ಾಂಟಿಯನ್ ಇತಿಹಾಸಕಾರರು ಪುರಾತನ ಗ್ರೀಸಿನ ತ್ಯೂಸಿಡಿಡೀಸ್ ಮುಂತಾದವರಿಂದಲೇ ಸ್ಫೂರ್ತಿ ಪಡೆದು ಕ್ರಾನಿಕಲ್ಸ್ ಎಂಬ ಒಂದು ವಿಶಿಷ್ಟ ರೀತಿಯ ಐತಿಹಾಸಿಕ ವೃತ್ತಾಂತಗಳನ್ನು ಬರೆದರು. ಸುಶಿಕ್ಷಿತ ಸಮುದಾಯದ ಸಲುವಾಗಿ ಬರೆದ ಈ ಶಾಸ್ತ್ರೀಯ ಆಕರಗ್ರಂಥಗಳು ಹೆಚ್ಚು ಮಾನ್ಯತೆ ಪಡೆದುವು. ಮಧ್ಯಯುಗದ ಬೈಜ಼ಾಂಟಿಯನ್ ಸಾಹಿತ್ಯದಲ್ಲಿ ಡೈಜೀನಸ್ ಆಕ್ರಿಟಾಸ್ ಎಂಬ ಕಥನಕವನ ತುಂಬ ಜನಪ್ರಿಯವಾಯಿತು. ಎಪಿಗ್ರಾಮ್ ಎಂಬ ವಿಶಿಷ್ಟರೀತಿಯ ಕಾವ್ಯರಚನೆ ಆ ಯುಗದ ಲೌಕಿಕ ಸಾಹಿತ್ಯದ ಕೊಡುಗೆ. ಇವು ಗ್ರೀಕ್ ಅಭಿಜಾತ ಛಂದಸ್ಸಿನಲ್ಲಿ ರಚಿತವಾದ ಭಾವಗೀತಾತ್ಮಕ ಪ್ರೇಮಕವನಗಳು. 10ನೆಯ ಶತಮಾನದ ಜಾನ್ ಜಿಯೋಮಿಟ್ರಸ್‌ನ ರಚನೆಗಳು ಇದಕ್ಕೆ ಉತ್ತಮ ನಿದರ್ಶನವಾಗಿವೆ. ಬೈಜ಼ಾಂಟಿಯನ್ ಯುಗದ ರಾಜ್ಯಾಡಳಿತಕ್ಕೆ ಸಂಬಂಧಿಸಿದ ದಸ್ತಾವೇಜುಗಳು ಆ ಕಾಲದಲ್ಲಿ ಗದ್ಯಶೈಲಿ ಹೇಗೆ ವಿಕಾಸವಾಯಿತೆಂಬುದಕ್ಕೆ ಮುಖ್ಯ ನಿದರ್ಶನವಾಗಿವೆ.

**ಆಧುನಿಕ ಗ್ರೀಕ್ ಸಾಹಿತ್ಯ** : ಜನ ಆಡುವ ಜೀವಂತ ಭಾಷೆಯಲ್ಲಿಯ ಕೃತಿಗಳನ್ನೂ ಅಭಿಜಾತ ಯುಗದ ಜಾನಪದ ಶೈಲಿಯ ಕೃತಿಗಳನ್ನೂ ಸೇರಿಸಿಕೊಂಡು ಆಧುನಿಕ ಗ್ರೀಕ್ ಸಾಹಿತ್ಯ ಎಂದು ಕರೆಯುವ ವಾಡಿಕೆ. ಜಾನಪದ ಸಾಹಿತ್ಯ ಮುಖ್ಯವಾಗಿ ಕಾವ್ಯಾತ್ಮಕವಾಗಿದ್ದು, 19ನೆಯ ಶತಮಾನದ ವರೆಗಿನ ಬೈಜ಼ಾಂಟಿಯನ್ ಸಾಹಿತ್ಯ ಅಭಿಜಾತ ಶೈಲಿಯ ಅನುಕರಣೆಯಾಗಿದ್ದುದರಿಂದ ಬಹುಕಾಲ ಗದ್ಯಶೈಲಿಯೆಂಬುದೇ ಬಳಕೆಗೆ ಬರಲಿಲ್ಲ.

ಆಧುನಿಕ ಗ್ರೀಕ್ ಸಾಹಿತ್ಯವನ್ನು ಮೂರು ಭಾಗಗಳಾಗಿ ವಿಭಜಿಸುವ ಸಂಪ್ರದಾಯವಿದೆ: 1. ಪುರಾತನ ಅಭಿಜಾತ ಯುಗದಿಂದಲೂ ಬೆಳೆದು ಬಂದ ಜಾನಪದ ಕಾವ್ಯ. ಇದು ಇಂದಿಗೂ ವಿಶೇಷ ಪ್ರಭಾವಯುತವಾಗಿ ಉಳಿದುಕೊಂಡಿದೆ. 2. ಪ್ರ.ಶ. 13ನೆಯ ಶತಮಾನದಿಂದ 18ನೆಯ ಶತಮಾನದ ವರೆಗಿನ ಅವಧಿಯಲ್ಲಿ ಗ್ರೀಕ್ ಸಂಸ್ಕೃತಿ ಫ್ರೆಂಚ್ ಹಾಗೂ ಇಟಾಲಿಯನ್ ಸಂಸ್ಕೃತಿಗಳೊಂದಿಗೆ ಸಂಯೋಗವಾದಾಗ ರಚಿತವಾದ ಶಿಷ್ಟಕಾವ್ಯ. 3. 18ನೆಯ ಶತಮಾನದಿಂದ 20ನೆಯ ಶತಮಾನದವರೆಗಿನ ಆಧುನಿಕ ಗ್ರೀಸಿನ ಶಿಷ್ಟ ಸಾಹಿತ್ಯ.

1) ಜನಪದ ಕಾವ್ಯ : ಗ್ರೀಕ್ ಭಾಷೆ, ಜಾನಪದ ಕಾವ್ಯಶೈಲಿ ಎರಡೂ ಗ್ರೀಕ್ ಸಂಸ್ಕೃತಿಯ ಪ್ರಮುಖ ಅಂಶಗಳಾಗಿವೆ. ಗ್ರೀಸಿನ ಜಾನಪದ ಕಾವ್ಯ ವಸ್ತುತಃ ಕ್ರೈಸ್ತಪೂರ್ವಯುಗದ ಪೇಗನ್ ಜೀವನವನ್ನೇ ಚಿತ್ರಿಸುತ್ತದೆ. ಯೌವನಸಹಜವಾದ ಜೀವನಾಸಕ್ತಿ, ಮಾನವ ಪ್ರೇಮ, ಪ್ರಕೃತಿಯತ್ತ ಒಲುಮೆ, ಜೀವನದ ಕಷ್ಟಕಾರ್ಪಣ್ಯಗಳನ್ನು ಕುರಿತ ವ್ಯಥೆ, ಸತ್ತ ಮೇಲೆ ಆತ್ಮ ಅಧೋಲೋಕದ ಕತ್ತಲೆಯಲ್ಲಿ ಕರಗಿ ವಿಲೀನವಾಗುವುದೆಂಬ ನಂಬಿಕೆ–ಇವು ಗ್ರೀಕ್ ಜಾನಪದ ಕಾವ್ಯದ ಪ್ರಮುಖ ಅಂಶಗಳು. ಇವು ಅಭಿಜಾತ ಯುಗಧರ್ಮವನ್ನೇ ಪಡಿಮೂಡಿಸುವಂತೆ ಕಾಣುವ ಗುಣಲಕ್ಷಣಗಳು. ಈ ಕವನಗಳ ಕಾಲನಿರ್ಣಯ ತೀರ ಕಷ್ಟ. ಇವು ಬಹುತೇಕ 15 ಮಾತ್ರಾಗಣದ ರಾಜಕೀಯ ಛಂದಸ್ಸಿನಲ್ಲಿವೆ–ಆರನೆಯ ಶತಮಾನದಿಂದಲೂ ಬೈಜ಼ಾಂಟಿಯನ್ ಕವಿಗಳು ರಾಜಕೀಯ ವಸ್ತುವನ್ನುಳ್ಳ ಪ್ರಶಸ್ತಿ, ಪ್ರತಿಭಟನೆ, ವಿಡಂಬನೆಗಳನ್ನು ಈ ಛಂದಸ್ಸಿನಲ್ಲೇ ಬರೆಯುತ್ತಿದ್ದುದರಿಂದ ಈ ಹೆಸರು ಬಂತು. ಪುರಾಣೇತಿಹಾಸದ ನಾಯಕರನ್ನು ಕುರಿತ, ಕಾನ್‌ಸ್ಟಾಂಟಿನೋಪಲ್ ಪತನ ಮುಂತಾದ ಕಥನಕವನಗಳು 9ನೆಯ ಶತಮಾನಕ್ಕಿಂತ ಈಚಿನವು. ಇವು ಆಯಾ ಕಾಲದ ಸಮಾಜಗಳನ್ನು ಯಥಾವತ್ತಾಗಿ ಚಿತ್ರಿಸುವುದರಿಂದ ಜನರ ಆಸಕ್ತಿಯನ್ನು ಅರಳಿಸಿ ಬಹುಬೇಗ ಜನಪ್ರಿಯವಾದುವು.

2) ಶಿಷ್ಟಕಾವ್ಯ : ಗ್ರೀಕ್ ಮಾತಾಡುವ ಜನರಿಗೆ ಫ್ರೆಂಚ್ ಸಂಸ್ಕೃತಿಯೊಂದಿಗೆ ಹೆಚ್ಚು ಸಂಪರ್ಕ ಬೆಳೆದದ್ದು ಯುರೋಪಿನ ಧರ್ಮಯುದ್ಧಗಳ (ಕ್ರೂಸೇಡ್ಸ್) ಕಾಲದಲ್ಲಿ. ಮಧ್ಯಯುಗದ ಬೈಜ಼ಾಂಟಿಯಮ್‌ನಲ್ಲಿ ರೊಮ್ಯಾಂಟಿಕ್ ಸಂಪ್ರದಾಯದ ಹಿನ್ನೆಲೆಯಲ್ಲಿ ಹಲವು ಕಥಾನಕಗಳು ಹುಟ್ಟಿದುವು. ಜನಸಾಮಾನ್ಯರನ್ನು ರಂಜಿಸಲೆಂದು ಶಿಷ್ಟಕವಿಗಳೇ ಇವನ್ನು ರಚಿಸುತ್ತಿದ್ದುದರಿಂದ ಅವರು ಪ್ರೇಮ, ಸಾಹಸ, ಅದ್ಭುತ ಘಟನೆಗಳು ಮುಂತಾದ ವಸ್ತುಗಳನ್ನೇ ಆರಿಸಿಕೊಂಡರು. ಆದರೆ ಇವು ಬಹುಮಟ್ಟಿಗೆ ಫ್ರೆಂಚ್ ರೊಮಾನ್ಸ್‌ಗಳನ್ನೇ ಅನುಕರಿಸುವುದರಿಂದ ನೀರಸವೆನಿಸಿದುವು. ಗ್ರೀಕ್ ಸಂಸ್ಕೃತಿಗೆ ಫ್ರಾನ್ಸ್ ಹಾಗೂ ಇಟಲಿಯ ನೈಜ ಸಂಪರ್ಕವುಂಟಾದದ್ದು (ನಾಲ್ಕು ಶತಮಾನಗಳ ಕಾಲ ವೆನಿಸ್ಸಿನ ಆಕ್ರಮಣಕ್ಕೆ ಒಳಗಾಗಿದ್ದ) ಕ್ರೀಟ್ ದ್ವೀಪದಲ್ಲಿ. ಯುರೋಪಿನ ಸಂಸ್ಕೃತಿಯನ್ನು ಸಮನ್ವಯಗೊಳಿಸಿಕೊಂಡ ಕ್ರೀಟ್ ಪ್ರದೇಶದ ಮಧ್ಯಮ ವರ್ಗದ ಸಮಾಜವೇ ಹೊಸ ಸಾಹಿತ್ಯದ ಆವಿಷ್ಕಾರಕ್ಕೆ ಕಾರಣವಾಯಿತು. ಕ್ರಮೇಣ ಅಲ್ಲಿಯ ಸಾಹಿತಿಗಳು ಇಟಲಿಯ ಸಾಹಿತ್ಯದಿಂದ ಸ್ಫೂರ್ತಿ ಪಡೆದು ಗಂಭೀರ ಹಾಗೂ ವಿನೋದ ನಾಟಕಗಳನ್ನು ಬರೆದರು. ಗ್ರಾಮೀಣ ಜೀವನ ಹಾಗೂ ಐತಿಹಾಸಿಕ ವಸ್ತುಗಳ ಆಧಾರದ ಮೇಲೆ ಕ್ರೀಟನ್ ಉಪಭಾಷೆಗಳಲ್ಲಿ ನಾಟಕಗಳನ್ನು ರಚಿಸಲಾಯಿತು. ಅವುಗಳಲ್ಲಿ ಮುಖ್ಯವಾಗಿ ಹಾರ್ಟ್ಯಾಟ್ಸಿಸ್ ಬರೆದ ಇರೋಫಿಲ್ ಎಂಬ ಗಂಭೀರ ನಾಟಕ ಮತ್ತು ಅಜ್ಞಾತ ಕವಿ ವಿರಚಿತ ಯಿಪಾರಿಸ್ ಎಂಬ ಗ್ರಾಮೀಣ ವಿನೋದ ನಾಟಕ ಜೀವಂತ ಕೃತಿಗಳಾಗಿವೆ. ಎಲ್ಲಕ್ಕಿಂತ ಹೆಚ್ಚಾಗಿ, 1665ರಲ್ಲಿ ಕಾರ್ನರೋಸ್ ಬರೆದ ಏಬ್ರಾಹಿಮ್ಸ್ ಸ್ಯಾಕ್ರಿಫೈಸ್ ತುಂಬ ಪ್ರಸಿದ್ಧ ಕೃತಿ. ಇದರಲ್ಲಿ ಮಧ್ಯಯುಗದ ಮಿಸ್ಟರಿ ನಾಟಕವನ್ನು ಪುನರುಜ್ಜೀವನ ಯುಗದ ಮಾನವತಾ ಧರ್ಮಕ್ಕನುಸಾರವಾಗಿ ಅಳವಡಿಸಿಕೊಳ್ಳಲಾಗಿದೆ. ಕಾರ್ನರೋಸ್‌ನ ರೋಟಾಕ್ರೀಟಾಸ್ ಎಂಬ ಕಥನಕವನವಂತೂ ಗ್ರೀಕ್ ಭಾಷೆಯಲ್ಲಿ ಅತ್ಯಂತ ಜನಪ್ರಿಯ ಕೃತಿ. ಇದರಲ್ಲಿ ಮಧ್ಯಯುಗದ ಅದ್ಭುತ ಪ್ರೇಮಕಥೆಯೊಂದನ್ನು ಆಧುನಿಕ ಮಾನವೀಯ ಹಾಗೂ ಯಥಾರ್ಥ ಜೀವನ ರುಚಿಗೆ ಒಪ್ಪುವಂತೆ ಚಿತ್ರಿಸಿದ್ದಾನೆ.

ಇಷ್ಟೆಲ್ಲ ಹೇಳಿದರೂ ಕ್ರೀಟನ್ ಸಾಹಿತ್ಯದ ಉಜ್ವಲ ಪುನರುಜ್ಜೀವನ ಕೇವಲ 70 ವರ್ಷಗಳ ಅವಧಿಗೆ ಮಾತ್ರ ಸೀಮಿತವಾಯಿತೆಂಬುದನ್ನು ಮರೆಯಲಾಗದು. 1669ರಲ್ಲಿ ಕ್ರೀಟ್ ದ್ವೀಪ ತುರ್ಕಿಯ ಕೈವಶವಾದಾಗ ಅಲ್ಲಿಯ ಸಾಹಿತ್ಯದ ಉತ್ಕರ್ಷ ಕೊನೆಯಾಯಿತು. ಇದರ ಫಲವಾಗಿ ಗ್ರೀಕ್ ಸಂಸ್ಕೃತಿ ತನ್ನ ಪ್ರತ್ಯೇಕತೆಯನ್ನು ಬಿಟ್ಟು ಸಮಗ್ರ ಯುರೋಪಿನ ಸಂಪ್ರದಾಯದ ಪ್ರವಾಹವನ್ನು ಸೇರುವಂತಾಯಿತು. ಗ್ರೀಕ್ ಭಾಷೆ ಹಲವು ಕಡೆಗಳಿಂದ ಬೇರೆ ಬೇರೆ ಪ್ರಭಾವಗಳನ್ನು ಮೈಗೂಡಿಸಿಕೊಂಡು ಶ್ರೀಮಂತವಾಯಿತು. ಕಾವ್ಯಾತ್ಮಕವಾದ ಆಧುನಿಕ ಶೈಲಿಯ ನಿರ್ಮಾಣಕ್ಕೂ ಪ್ರೇರಣೆ ಸಿಕ್ಕಿದಂತಾಯಿತು. ಕ್ರೀಟನ್ ಸಂಸ್ಕೃತಿಯ ಸಮನ್ವಯ ಲಕ್ಷಣಗಳು ಹೇಗೆ ಹೊಸ ಸಾಹಿತ್ಯ ನಿರ್ಮಾಣಕ್ಕೆ ಕಾರಣವಾದವೆಂಬ ಅಂಶವನ್ನು 19ನೆಯ ಶತಮಾನದಲ್ಲಿ ನೋಡಬಹುದು.

ಆದರೆ ಅದಕ್ಕೆ ಪೂರ್ವಭಾವಿಯಾಗಿ ಕೆಲವು ಅಂಶಗಳನ್ನು ಗಮನಿಸಬೇಕು. 18ನೆಯ ಶತಮಾನ ಗ್ರೀಕ್ ಸಾಹಿತ್ಯದಲ್ಲಿ ತೀರ ಶುಷ್ಕವಾದ ಕಾಲ. ಕೆಲವು ಜಾನಪದ ಕವನಗಳನ್ನುಳಿದು ಗಮನಾರ್ಹ ಸಾಹಿತ್ಯವೇ ಹೊಮ್ಮಲಿಲ್ಲವೆನ್ನಬಹುದು. ಆದರೆ ಆ ಶತಮಾನದ ಉತ್ತರಾರ್ಧದಲ್ಲಿ ಭಾಷೆಗೆ ಸಂಬಂಧಿಸಿದ ಒಂದು ಸ್ವಾರಸ್ಯ ಆಂದೋಲನವುಂಟಾಯಿತು. ಗ್ರೀಕ್ ದೇಶ ತನ್ನ ಸ್ವಾತಂತ್ರ್ಯಕ್ಕಾಗಿ ಹೋರಾಟ ಪ್ರಾರಂಭಿಸಿದಾಗ ಯಾವುದು ದೇಶಭಾಷೆಯಾಗಬೇಕೆಂಬ ಬಗೆಗೆ ಪ್ರಬಲವಾದ ಚಳವಳಿ ಪ್ರಾರಂಭವಾಯಿತು. ಸುಶಿಕ್ಷಿತ ಯುರೋಪಿಯನ್ ಪಂಗಡದವರು ಕ್ಲಾಸಿಕಲ್ ಗ್ರೀಕ್ ಭಾಷೆಯನ್ನು ರೂಢಿಸಿಕೊಂಡು ಅದರಿಂದ ಸ್ವಾತಂತ್ರ್ಯ ಸಮರಕ್ಕೆ ಸ್ಫೂರ್ತಿ ಪಡೆಯಬೇಕೆಂದು ವಾದಿಸಿದರು. ಆದರೆ ಇನ್ನು ಕೆಲವರಿಗೆ, ಚರ್ಚುಗಳಲ್ಲಿ ಬಳಸುತ್ತಿದ್ದ ಫಾನೆರಿಯಟ್ ಎಂಬ ಬೈಜ಼ಾಂಟಿಯನ್ ಪರಿಶುದ್ಧ ಭಾಷೆಯಲ್ಲಿ ಆಸಕ್ತಿ ಹುಟ್ಟಿತು.

ಈ ಎರಡು ವಿರೋಧ ಪಂಗಡಗಳ ನಡುವೆ ಸಾಮರಸ್ಯ ಸಾಧಿಸಹೊರಟವರಲ್ಲಿ ಅಡಮ್ಯಾಷಿಯೋಸ್ ಕೋರೆ ಮುಖ್ಯನಾದವ. ಆದರೆ ಅಭಿಜಾತ ಗ್ರೀಕ್ ಸಾಹಿತ್ಯದಲ್ಲೇ ಅವನಿಗೆ ಹೆಚ್ಚು ಆಸಕ್ತಿಯಿದ್ದುದರಿಂದ ಜೀವಂತವಾದ ಅಭಿವ್ಯಕ್ತಿಯನ್ನು ರೂಪಿಸುವುದು ಅವನಿಂದ ಸಾಧ್ಯವಾಗಲಿಲ್ಲ. ಅವನಿಂದ ರೂಪಿತವಾದ ಪರಿಷ್ಕೃತ ಶಿಷ್ಟ ಭಾಷೆ ಸಾಮಾನ್ಯರಿಗೆ ಎಟುಕಲಿಲ್ಲ. ಇಟಲಿಯ ಕ್ಲಾಸಿಕಲ್ ಕಾವ್ಯಗಳಿಂದ ಪ್ರೇರಣೆ ಪಡೆದು ಆಂಡ್ರಿಯಾಸ್ ಕ್ಯಾಲ್ವೋಸ್ ಅತಿಕೃತಕ ಪ್ರಗಾಥಗಳನ್ನು ಬರೆದ. ಸಾಹಿತ್ಯದ ಜೀವಾಳವನ್ನು ಅರ್ಥಮಾಡಿಕೊಂಡು ಬರೆದ ಅಯೋನಿಯನ್ ದ್ವೀಪದ ಸಾಹಿತಿಗಳು ಮಾತ್ರ ಗಟ್ಟಿ ಭದ್ರ ಕೃತಿಗಳನ್ನು ರಚಿಸಿದರು. ಅಯೋನ್ಸ್ ವಿಲರಾನ್ (1771–1823) ರೊಮೈಕಾಗ್ಲೋಸಾ ಎಂಬ ಗ್ರಂಥ ಬರೆದು ಜಾನಪದ ಗ್ರೀಕ್ ಶೈಲಿಯ ಮಹತ್ತ್ವವನ್ನು ಎತ್ತಿಹಿಡಿದ. ಆತ ಜಾನಪದ ಶೈಲಿಯಲ್ಲಿ ಬರೆದ ಕವನಗಳು ನೀರಸವಾಗಿದ್ದರೂ ಅವು ಮುಂದಿನ ಕವಿಗಳಿಗೆ ಸ್ಫೂರ್ತಿ ನೀಡಿವೆ. ಡಯೊನೈಸಸ್ ಸಾಲೋಮಾಸ್ ಆಧುನಿಕ ಗ್ರೀಸಿನ ಅತ್ಯಂತ ಶ್ರೇಷ್ಠ ಕವಿ. ಅಯೋನಿಯನ್ ಜನಪದ ಕಥನಕವನಗಳಿಂದ ಸ್ಫೂರ್ತಿ ಪಡೆದು ಆ ಶೈಲಿಯಲ್ಲಿ ಆತ ಸೊಗಸಾದ ಕವನಗಳನ್ನು ಬರೆದಿದ್ದಾನೆ. ಇವನ ಓಡ್ ಟು ಲಿಬರ್ಟಿ ಎಂಬ ಕವನವನ್ನು ಸಂಗೀತಕ್ಕೆ ಅಳವಡಿಸಿ ಗ್ರೀಸಿನ ರಾಷ್ಟ್ರಗೀತೆಯಾಗಿ ಹಾಡುತ್ತಾರೆ. ಇವನು ಮಾಡಿದ ಸಾಹಿತ್ಯಕೃಷಿಯಿಂದಾಗಿ ಗ್ರೀಸ್ ದೇಶ ಮುಂದಿನ ಪೀಳಿಗೆಯ ಜಿಯಾನಿಸ್ ಸೈಕಾರಿಸರಂಥ ಶ್ರೇಷ್ಠ ಕವಿಗಳನ್ನು ಕಾಣುವಂತಾಯಿತು. ಸ್ವಾತಂತ್ರ್ಯೋತ್ತರ ಅಥೆನ್ಸ್‌ನಲ್ಲಿ ಫಾನೆರಿಯಟ್ ಪಂಥದ ಪರಿಶುದ್ಧತಾವಾದಿಗಳು ಹತ್ತೊಂಬತ್ತನೆಯ ಶತಮಾನದ ಕೊನೆಯ ವರೆಗೂ ಕಾವ್ಯ ಹಾಗೂ ಗದ್ಯ ಪ್ರಕಾರಗಳಲ್ಲಿ ಕೃಷಿ ನಡೆಸಿ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಂಡರು. ಅವರ ಕಾವ್ಯ ಸುಸ್ವನಪೂರ್ಣವಾಗಿದ್ದರೂ ಅದರಲ್ಲಿ ಸಹಜ ಸ್ಫೂರ್ತಿಯ ಕಾವಿಲ್ಲ. ಲೆಫ್‌ಕಾಸಿನ ನಿವಾಸಿ ಅರಿಸ್ಟೋಟೆಲೀಸ್ ಎಲ್ಯೋರೈಟ್ಸ್ ದಕ್ಷಿಣ ಗ್ರೀಕ್ ಭಾಷೆಯಲ್ಲಿ ಸಾಲೋಮಾಸ್ ಕವಿಯ ಶೈಲಿಯನ್ನು ಚೆನ್ನಾಗಿ ದುಡಿಸಿಕೊಂಡ.

ಕಳೆದ ಶತಮಾನದ ಕೊನೆಯಲ್ಲಿ ಗ್ರೀಕ್ ಭಾಷೆ–ಸಾಹಿತ್ಯಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನುಂಟು ಮಾಡಿದವರು ಜಿಯಾನಿಸ್ ಸೈಕಾರಿಸ್ ಮತ್ತು ಕೋಸ್ಟೆಸ್

ಪಲಾಮಸ್ ಎಂಬ ಇಬ್ಬರು ವರಕವಿಗಳು. ತನ್ನದೇ ಆದ ಗದ್ಯ ಶೈಲಿಯನ್ನು ರೂಢಿಸಿಕೊಳ್ಳಬೇಕೆಂದು ಸೈಕಾರಿಸ್ ಗ್ರೀಸಿನ ಜಾನಪದ ಸಾಹಿತ್ಯ ಮತ್ತು ಭಾಷೆಗಳೆರಡನ್ನೂ ಶಾಸ್ತ್ರೀಯವಾಗಿ ತಳಸ್ಪರ್ಶಿಯಾಗಿ ಅಧ್ಯಯನ ಮಾಡಿದ. ಈ ಪ್ರಯತ್ನದ ಫಲವೇ ಅವನ ಮಹಾಗ್ರಂಥ ಟಾಕ್ಸಿ ಡಿ ಮೌ (ನನ್ನ ಪಯಣ–1888). ಆತ ಈ ಗ್ರಂಥದಲ್ಲಿ ಪ್ರತಿಪಾದಿಸಿದ ವಿಚಾರಗಳನ್ನು ಪಲಾಮಸ್ ತನ್ನ ಕವನಗಳಲ್ಲೂ ಅಯಾನ್ ಡ್ರಗೋಮಸ್ ತನ್ನ ಗದ್ಯ ಬರೆಹಗಳಲ್ಲೂ ಯಶಸ್ವಿಯಾಗಿ ಪ್ರಯೋಗಿಸಿ ಪ್ರಸಿದ್ಧರಾಗಿದ್ದಾರೆ.

ಆಧುನಿಕ ಗ್ರೀಸಿನಲ್ಲಿ ನಾಟಕವನ್ನು ಪುನರುಜ್ಜೀವಗೊಳಿಸಬೇಕೆಂದು ನಿರಂತರ ಪ್ರಯತ್ನಗಳು ನಡೆದರೂ ನಿಜವಾಗಿ ಯಶಸ್ಸು ಗಳಿಸಿದವನೆಂದರೆ ಯಾನಿಸ್ ಕ್ಯಾಂಬಿಸಿಸ್ (1872–1902). ಇವನನ್ನು ಗ್ರೀಸಿನ ಇಬ್ಸೆನ್ ಎಂದು ಕರೆಯಲಾಗಿದೆ. ಸ್ಪೈರಾಸ್ ಮಿಲಾಸ್ ಎಂಬಾತ ರಷ್ಯನ್ ಸಾಹಿತಿ ಗಾರ್ಕಿಯಿಂದ ಪ್ರಭಾವಿತನಾಗಿ ಒಳ್ಳೆಯ ನಾಟಕಗಳನ್ನು ಬರೆದಿದ್ದಾನೆ. ಗ್ರಿಗೇರಿಯಸ್ ಕ್ಸಿನೋಫೌಲಸ್‌ನನ್ನು ಒಬ್ಬ ಪ್ರಮುಖ ನಾಟಕಕಾರನೆಂದು ಹೇಳುವುದುಂಟು. ಡೆಮಿಟ್ರಿಯೋಸ್ ಟ್ಯಾಂಗೋಪೌಲಸನ (1867–1926) ನಾಟಕಗಳಲ್ಲಿ ಆಧುನಿಕರಿಗೆ ರಚಿಸುವಂಥ ಸಂಕೀರ್ಣ ಸಾಂಕೇತಿಕ ರಚನೆ ಇದೆ.

ಇಪ್ಪತ್ತನೆಯ ಶತಮಾನದ ಪ್ರಾರಂಭದಿಂದಲೂ ಆಧುನಿಕ ಗ್ರೀಕ್ ಸಾಹಿತ್ಯ ಹೆಚ್ಚುಹೆಚ್ಚಾಗಿ ಜಾನಪದ ಶೈಲಿಯಿಂದ ಪ್ರೇರಣೆ ಪಡೆಯುತ್ತಲೇ ಇದೆ. ಹಳೆಯ ಅಭಿಜಾತ ಸಾಹಿತ್ಯದ ಪ್ರಾಚೀನ ಪ್ರಯೋಗಗಳನ್ನು ಬಳಸಿಕೊಂಡ ಒಬ್ಬನೇ ಒಬ್ಬ ಶ್ರೇಷ್ಠ ಸಾಹಿತಿ–ಅಲೆಗ್ಸಾಂಡ್ರಿಯಕ್ಕೆ ಸೇರಿದ ಕಾನ್‌ಸ್ಟಂಟೈನ್ ಕಾವಾಫಿ ಸರ್ವ ವಿಧದಲ್ಲೂ ಸ್ವೋಪಜ್ಞನೆನಿಸಿದ್ದಾನೆ. ಎರಡು ಮಹಾಯುದ್ಧಗಳ ನಡುವಣ ಅವಧಿಯಲ್ಲಿ ಗದ್ಯಶೈಲಿಯನ್ನು ಯಶಸ್ವಿಯಾಗಿ ಬಳಸಿದವರಲ್ಲಿ ಕಾದಂಬರಿಕಾರರಾದ ಸ್ಟ್ರಾಟಿಸ್ ಮಿರಿವ್ಹೆಸ್ ಮತ್ತು ಜ್ಯಾರ್ಗೊಸ್ ಥಿಯೋಟಾಕಾಸ್ ಮುಖ್ಯರು. ಇವರಲ್ಲದೆ ಏಂಜೆಲೋಸ್ ಸೈಕಲಿಯಾನಸ್ (1884–1951), ಜ್ಯಾರ್ಗೊಸ್ ಸೆಫೆರಿಸ್, ಒಡಿಸ್ಸೆಫ್ ಇಲೈಟಿಸ್–ಈ ಮೂವರು ಕವಿಗಳು ಆಧುನಿಕ ಗ್ರೀಕ್ ಸಾಹಿತ್ಯದಲ್ಲಿ ಅಗ್ರಗಣ್ಯರಾಗಿದ್ದಾರೆ. ಪುರಾತನ ಗ್ರೀಕ್ ನಾಟಕಗಳನ್ನು ಆಧುನಿಕ ರಂಗಭೂಮಿಯ ಮೇಲೆ ಪ್ರದರ್ಶಿಸಿ ಅಪಾರ ಯಶಸ್ಸಿಗೆ ಭಾಗಿಯಾದವ ಏಂಜೆಲೋಸ್ ಸೈಕಾಲಿಯಾನಸ್. (ಎಚ್.ಕೆ.ಆರ್.)

ಪ್ರಾಯಶಃ ಎಲಿಜಿಯಾಕ್‌ಗಳನ್ನು ಮೊದಲು ಬರೆದ ಕವಿ ಎಫೀಸಸ್‌ನ ಕ್ಯಾಲಿನಸ್. ಇತರ ಖ್ಯಾತ ಎಲಿಜಿಯಾಕ್ ಕವಿಗಳು, ಸ್ಪಾರ್ಟದ ಟರ್ಟೆಅಸ್, ಕೊಲೊಫಾನ್‌ನ ಮಿಮ್ನೆರ್ಮಸ್, ಪರೋಸ್‌ನ ಆರ್ಕಿಲೋಕಸ್. ಅಥೆನ್ಸ್‌ನ ಮೊದಲ ಕವಿ ಸೋಲನ್ ಮತ್ತು ಮೆಗರದ ಥಿಯೋಗ್ನಿಸ್ ಆರ್ಕಿಲೋಕಸ್ ಆಯಾಂಬಿಕ್ ಛಂದಸ್ಸನ್ನು ರೂಪಿಸಿದ, ಇದನ್ನು ಕಟುವಾದ ವಿಡಂಬನೆಗೆ ಬಳಸಿದ ಎಂದು ಹೇಳಲಾಗಿದೆ. ಸೋಲನ್ ಮತ್ತು ಇತರರು ಇವನ್ನು ಚಿಂತನಶೀಲ ಕಾವ್ಯಕ್ಕೆ ಬಳಸಿದರು. ಪ್ರಾಚೀನ ಗ್ರೀಸಿನ ಆಡು ಮಾತಿನ ಲಯಕ್ಕೆ ವಿಶಿಷ್ಟವಾಗಿ ಇದು ಹೊಂದಿಕೊಂಡದ್ದರಿಂದ ಟ್ರ್ಯಾಜೆಡಿಗಳಲ್ಲಿ ಸಂಭಾಷಣೆಗೆ ಬಳಕೆಯಾಯಿತು.

ಪ್ರಾರಂಭದಲ್ಲಿ 'ಲಿರಿಕ್' ಅನ್ನು ರಚಿಸಿದ್ದು ಲೈರ್ ಎನ್ನುವ ವಾದ್ಯದೊಂದಿಗೆ ಹಾಡಲು. ಪ್ರಾಚೀನ ಗ್ರೀಸಿನಲ್ಲಿ ಎರಡು ಬಗೆಯ ಲಿರಿಕ್‌ಗಳು ರಚಿತವಾದವು; ವೈಯಕ್ತಿಕ ಲಿರಿಕ್ ಮತ್ತು ಮೇಳದ ಲಿರಿಕ್. ಲೆಸ್‌ವಾಸ್ ಅಥವಾ ಲೆಸ್‌ಬಾಸ್ ದ್ವೀಪದಲ್ಲಿ ವೈಯಕ್ತಿಕ ಲಿರಿಕ್ ಬೆಳೆಯಿತು. ಸ್ವತಃ ಸಂಗೀತಗಾರನಾಗಿದ್ದ ಟರ್‌ಪಾಂಡರ್ ಗ್ರೀಕ್ ಭಾಷೆಯ ಮೊದಲನೆಯ ಲಿರಿಕ್ ಕವಿ ಎಂದು ಹೇಳಲಾಗಿದೆ. ಕವನವನ್ನು ಸಂಗೀತಕ್ಕೆ ಮೊಟ್ಟಮೊದಲು ಅಳವಡಿಸಿದವನು ಇವನೇ. ಇವನ ಅನಂತರ ಲೆಸ್‌ವಾಸ್‌ನಲ್ಲಿ ಹಲವರು ಶ್ರೇಷ್ಠ ಕವಿಗಳು ಅರಿಕೆಗಳನ್ನು ರಚಿಸಿದರು. ಅಲ್‌ಕೇಲಿಸ್ ಈ ವೈಯಕ್ತಿಕ ವಿಷಯಗಳನ್ನಲ್ಲದೆ ರಾಜಕೀಯ ಮತ್ತು ಧಾರ್ಮಿಕ ವಸ್ತುಗಳನ್ನು ತನ್ನ ಲಿರಿಕ್‌ಗಳಿಗೆ ಆರಿಸಿಕೊಂಡ. ಪ್ರಾಚೀನ ಗ್ರೀಸಿನ ಶ್ರೇಷ್ಠ ಕವಯಿತ್ರಿ ಸಾಫೊ, 'ಸ್ಯಾಫೊ ಸ್ಟ್ರೋಫಿ'ಯನ್ನು ರೂಪಿಸಿದಳು. ಪ್ರೇಮ ಸ್ನೇಹಗಳನ್ನು ಕುರಿತ ಅವಳ ಲಿರಿಕ್‌ಗಳು ಪಾಶ್ಚಾತ್ಯ ಪರಂಪರೆಯಲ್ಲಿ ಅತ್ಯಂತ ತೀವ್ರ ಭಾವಗಳನ್ನು ಮೂಡಿಸಿವೆ. ಪ್ರ.ಶ.ಪೂ. 6ನೆಯ ಶತಮಾನದಲ್ಲಿ ಅನಾಕ್ರಿಯನ್ ಲಘುಮನೋಭಾವದಲ್ಲಿ ಸ್ತ್ರೀ ಮತ್ತು ಮಧುವನ್ನು ಕುರಿತ ಕವನಗಳನ್ನು ಬರೆದ.

ಕೋರಲ್ ಅಥವಾ ಮೇಳದ ಲಿರಿಕ್‌ಅನ್ನು ಮೊದಲು ರಚಿಸಿದವನು ಕ್ರೀಟ್‌ನಿಂದ ಸ್ಪಾರ್ಟಕ್ಕೆ ಬಂದ ಥಟ್ಟೆಸ್ ಎಂಬ ಕವಿ ಎಂದು ಭಾವಿಸಲಾಗಿದೆ. ಇವನ ಅನಂತರ ಟರ್ಪಾಂಡರ್, ಆಲ್ಕ್‌ಮನ್ ಮತ್ತು ಏರಿಯನ್ ಕವಿಗಳು ಬಂದರು. ಸಿಸಿಲಿಯ ಸೈಸಿಕೊರಸ್ ಎನ್ನುವ ಕವಿ ಮೂರು ಮೂರು ಘಟಕಗಳ 'ಕೋರಲ್ ಓಡ್' (ಮೇಳದ ಪ್ರಗಾಥ) ಅನ್ನು ರೂಪಿಸಿದ. ಸಿಮೊನೈಡಿಸ್ ಮತ್ತು ಅವನ ಸೋದರಳಿಯ ಬ್ಯಾಕಿಲೈಡಿಸ್ ಇದನ್ನು ಮುಂದುವರೆಸಿ ಮಾರ್ಪಡಿಸಿದರು. ಕೋರಲ್ ಓಡ್‌ಗಳ ಮೇರು ಶಿಖರ ಪ್ರ.ಶ.ಪೂ. ಐದನೆಯ ಶತಮಾನದ ಪಿಂಡಾರನ ರಚನೆಗಳು. ಇವುಗಳಲ್ಲಿ ಕಾಲು ಭಾಗ ಮಾತ್ರ ಉಳಿದು ಬಂದಿವೆ.

ಪ್ರಾಚೀನ ಗ್ರೀಕ್ ನಾಟಕದಲ್ಲಿ ಕೋರಲ್ ಓಡ್ ಅದ್ಭುತವಾಗಿ ಬೆಳೆಯಿತು.

ಯೋಧ ಇತಿಹಾಸಕಾರ ಕ್ಸಿನೊಫಾನ್ ಮೂರು ಮುಖ್ಯ ಕೃತಿಗಳನ್ನು ಬರೆದ; ಅನಬೇಸಿಸ್ ಮತ್ತು ಮೆಸೊರಬಿಲಿಯ ಮೊದಲನೆಯ ಕೃತಿಯು ಗ್ರೀಕ್ ಕೂಲಿ ಯೋಧರು ಪರ್ಷಿಯದಿಂದ ತಪ್ಪಿಸಿಕೊಂಡು ಹೋಗಲು ಮಾಡಿದ ಪ್ರಯತ್ನಗಳ ವೃತ್ತಾಂತ, ಎರಡನೆಯದು ಸಾಕ್ರಟೀಸನ ವಿರುದ್ಧ ಬಂದ ಆಪಾದನೆಗಳಿಗೆ ಉತ್ತರ. ಮೂರನೆಯದು, ಹೆಲೆನಿಕ. ಇದರಲ್ಲಿ ತ್ಯೂಸಿಡಿಡೀಸ್‌ನ ಇತಿಹಾಸ ವೃತ್ತಾಂತವನ್ನು ಮುಂದುವರೆಸಿದೆ.

ಪ್ಲೇಟೊವಿನ ಸಂಭಾಷಣೆಗಳು ತತ್ವಶಾಸ್ತ್ರದ ಶ್ರೇಷ್ಠ ಕೃತಿಗಳಷ್ಟೇ ಅಲ್ಲ, ಅವು ಶ್ರೇಷ್ಠ ಸಾಹಿತ್ಯ ಕೃತಿಗಳು. ಅವನ ಗದ್ಯ ಅತ್ಯಂತ ಸ್ಪಷ್ಟ ಸುಂದರ.

ಅಲೆಕ್ಸಾಂಡ್ರಿಯದ ಅತ್ಯುತ್ತಮ ಕವಿ ಕ್ಯಾಲಿಮಾಕಸ್ ಎಂಬಾತ ಅಲ್ಲಿನ ಗ್ರಂಥಾಲಯದ ಪ್ರಧಾನ ಗ್ರಂಥ ಪಾಲಕ. 800ಕ್ಕಿಂತ ಹೆಚ್ಚು ಕೃತಿಗಳನ್ನು ಇವನು ಬರೆದನೆಂದು ಹೇಳಲಾಗಿದೆ. ಉಳಿದುಬಂದಿರುವುದು ಆರು ಸ್ತೋತ್ರಗಳು, 64 ಚಾಟೂಕ್ತಿಗಳು ಮತ್ತು ಕೆಲವು ಎಲಿಜಿಗಳು. ಮತ್ತೊಬ್ಬ ಶ್ರೇಷ್ಠ ಕವಿ ಥಿಯಾಕ್ರಿಟಸ್; ಇವನು 'ಇಂಟ್' ಗಳನ್ನು ಬರೆದನು. ಇವು ಗೊಲ್ಲ ಕವನಗಳು. ಅನಂತರ ಬಂದ ಬಿಯಾನ್, ಮಾಸ್ಕಸ್ ಮೊದಲಾದವರು ಇವನನ್ನು ಅನುಸರಿಸಿದರು. ಬಿಯಾನ್ ಬರೆದ 'ಅಡೋನಿನ್' ಎಂಬ ಶೋಕಗೀತ ಪ್ರಸಿದ್ಧವಾಗಿದೆ.

ಹೆಲಿನಿಸ್ಟಿಕ್ ಯುಗದ ವಿದ್ವಾಂಸರು ಮತ್ತು ವಿಜ್ಞಾನಿಗಳು ಅದ್ಭುತ ಕೆಲಸವನ್ನು ಮಾಡಿದರು. ಇವರಲ್ಲಿ ವೈದ್ಯ ಹಿರೊಲಸ್, ಖಗೋಳ ಶಾಸ್ತ್ರಜ್ಞವಾದ ಹಿಪಾರ್ಕಸ್, ಟಾಲೆಮಿ (ಭೂಮಿಯ ಸೂರ್ಯನ ಸುತ್ತ ಸುತ್ತುತ್ತದೆ ಎಂದು ಮೊದಲ ಬಾರಿಗೆ ಹೇಳಿದ), ಸಮೋಸ್‌ನ ಅರಿಸಾರ್ಕಸ್ ಮತ್ತು ಭೂಮಿಯ ಸುತ್ತಳತೆಯನ್ನು ನಿರ್ಧರಿಸಿದ ಗಣಿತಶಾಸ್ತ್ರಜ್ಞ ಮತ್ತು ಭೂಗೋಳ ಶಾಸ್ತ್ರಜ್ಞ ಎರ್ಯಾಟೊ ಸ್ತನೀಸ್ ಇವರನ್ನು ಹೆಸರಿಸಬೇಕು.

ಅಭಿಜಾತ ಗ್ರೀಕ್ ಸಾಹಿತ್ಯವನ್ನು ಅನುಕರಿಸಿದವರಲ್ಲಿ ಹೆಸರಿಸಬೇಕಾದವನು ವಿಡಂಬನಕಾರ ಲೂಸಿಯನ್. ಇವನ ಕೃತಿಗಳು 'ಸತ್ತವರ ಸಂವಾದಗಳು', 'ದೇವತೆಗಳ ಸಂವಾದಗಳು' ಮತ್ತು 'ನಿಜವಾದ ಇತಿಹಾಸ'.

ಆಧುನಿಕ ವಿದ್ವಾಂಸರ ಅಭಿಪ್ರಾಯದಲ್ಲಿ, ಕಾದಂಬರಿಯ ಪ್ರಾರಂಭದ ಮಾದರಿಯನ್ನು ಪ್ರ.ಶ. 2ನೆ ಶತಮಾನಕ್ಕೆ ಮೊದಲೇ ಗ್ರೀಸಿನಲ್ಲಿ ಕಾಣಬಹುದು. 'ನೀನಾಸ್ ರೊಮಾನ್ಸ್' ಎಂದು ಕರೆಯುವ ಗ್ರೀಕ್ ಕಾದಂಬರಿಯ ಭಾಗಗಳು ಉಳಿದು ಬಂದಿವೆ. ಇದು ನೀನಾಸ್ ಎನ್ನುವ ವೀರನ ಪ್ರೇಮದ ಕಥೆಯನ್ನು ಹೇಳುತ್ತದೆ, ಇದನ್ನು ಪ್ರ.ಶ.ಪೂ. ಒಂದನೆಯ ಶತಮಾನದಲ್ಲಿ ಬರೆದಿರಬೇಕು. ಪ್ರ.ಶ. ಎರಡನೆಯ ಮತ್ತು ಮೂರನೆಯ ಶತಮಾನಗಳಲ್ಲಿ ಬರೆದ ಐದು ಕಾದಂಬರಿಗಳು ಈಚೆಗೆ ಲಭ್ಯವಾಗಿವೆ. ಇವೆಲ್ಲ ಪ್ರಣಯದ ಮತ್ತು ಸಾಹಸದ ಕಥೆಗಳನ್ನು ಹೇಳುತ್ತವೆ. ಕಷ್ಟಗಳನ್ನು ಅನುಭವಿಸಿದ ಅನಂತರ ಪ್ರಣಯಿಗಳು ಅಥವಾ ಗಂಡ ಹೆಂಡತಿಯರು ಮತ್ತೆ ಸೇರುತ್ತಾರೆ.

ಎಪಿಕ್ಟೆಟಸ್ ಮತ್ತು ಮಾರ್ಕಸ್ ಅರೀಲಿಯನರು 'ಸ್ಟೋಯಿಕ್' ತತ್ವಶಾಸ್ತ್ರ ಪಂಥವನ್ನು, ಪ್ಲಾಟಿನಸ್ 'ನಿಯೊಪ್ಲೇಟಾನಿಸಂ' ಅನ್ನು ತಮ್ಮ ಬರೆಹಗಳಲ್ಲಿ ನಿರೂಪಿಸಿದರು.

ಪ್ರ.ಶ. 323ರಲ್ಲಿ ಕಾನ್‌ಸ್ಟಂಟೈನನ ಆಳ್ವಿಕೆ ಪ್ರಾರಂಭವಾಯಿತು. ಅಲ್ಲಿಂದ 1453ರಲ್ಲಿ ಪೂರ್ವ ಸಾಮ್ರಾಜ್ಯವು ಕುಸಿಯುವವರೆಗೆ ಗ್ರೀಕ್ ಸಾಹಿತ್ಯದ ಮೇಲೆ ಲ್ಯಾಟಿನ್ ಸಾಹಿತ್ಯ ಮತ್ತು ಪೂರ್ವ ದೇಶಗಳ ಸಾಹಿತ್ಯಗಳು ಪ್ರಭಾವ ಬೀರಿದವು. ಈ ಕಾಲದ ಬರೆಹಗಳು ಬಹುಮಟ್ಟಿಗೆ ಧಾರ್ಮಿಕ. ಧಾರ್ಮಿಕ ಅಭಿಪ್ರಾಯಗಳ ವಾದ ವಿವಾದಗಳು ಪ್ರಮುಖವಾದವು. ರಚಿತವಾದ ಕವನಗಳೂ ಬಹುಮಟ್ಟಿಗೆ ಸ್ತೋತ್ರಗಳೇ.

1852ರಲ್ಲಿ ಗ್ರೀಸ್ ಸ್ವಾತಂತ್ರ್ಯವನ್ನು ಪಡೆದುಕೊಂಡ ಅನಂತರ ಸಾಹಿತ್ಯದಲ್ಲಿ ಹೊಸ ಚೈತನ್ಯ ಮೂಡಿತು. ಇಮ್ಯಾನ್ಯುಎಲ್ ರಾಯ್‌ಡಿಸ್ ಗಣನೀಯ ಕಾದಂಬರಿಕಾರ, ವಿಮರ್ಶಕ ಮತ್ತು ಅನುವಾದಕ. ಅಲೆಕ್ಸಾಂಡ್ರಾಸ್ ಪಡಿಲಿಮಾಂಟಿಸ್ ಗ್ರಾಮ ಜೀವನವನ್ನು ಕಾವ್ಯಮಯವಾಗಿ ನಿರೂಪಿಸುವ ಕಾದಂಬರಿಗಳನ್ನು ಬರೆದ. ಆರ್ಜಿನಿಸ್ ಇಫ್ಥಾಲಿಯೊಸ್‌ನ 'ದ್ವೀಪದ ಕಥೆಗಳು' ಒಂದು ಪ್ರಸಿದ್ಧ ಸಂಗ್ರಹ.

19ನೆಯ ಶತಮಾನದ ಪ್ರಾರಂಭದ ನಾಟಕಕಾರರು ಅಭಿಜಾತ ನಾಟಕವನ್ನು ಮಾದರಿಯಾಗಿ ಅನುಸರಿಸಿದರು. ಪಿಯನಿಸ್ ಕಾಂಬಿಸಿನ್ ವಾಸ್ತವ ಮಾರ್ಗದ ನಾಟಕಗಳನ್ನೂ ವಿಡಂಬನಾತ್ಮಕ ನಾಟಕಗಳನ್ನೂ ಬರೆದ. ಅನಂತರದ ನಾಟಕಕಾರರ ಮೇಲೆ ರಷ್ಯದ ನಾಟಕದ ಮತ್ತು ಇಬ್ಸನನ ಪ್ರಭಾವವಾಯಿತು.

20ನೆಯ ಶತಮಾನದ ಪ್ರಾರಂಭದಲ್ಲಿ ವಿಶೇಷ ಜನಪ್ರಿಯತೆಯನ್ನು ಗಳಿಸಿದ ಕವಿ ಜಾರ್ಜಿಯಾನ್ ಡ್ರೊಸ್ಸೈನೆಸ್. ಇವನ ಸಮಕಾಲೀನ ಕೋಸ್ಟಸ್ ಪಲಾಮಸ್ ಯುರೋಪಿನ ಶ್ರೇಷ್ಠ ಕವಿಗಳ ಪಂಕ್ತಿಗೆ ಸೇರಿದವನು. ಇವನ 'ಅರಸನ ಕೊಳಲು' (1910) ಕವನ ಬೈಜಾಂಟಿಯಂನ ಇತಿಹಾಸದ ವೈಭವವನ್ನು ನಿರೂಪಿಸುತ್ತದೆ. ಈಜಿಪ್ಸಿಯ ಹನ್ನೆರಡು ಪದಗಳು (1907) ಒಂದು ಮಹಾಕಾವ್ಯ. ಗ್ರೀಕ್ ಜನತೆಯ ಆಸೆಗಳಿಗೆ, ಭರವಸೆಗಳಿಗೆ ದನಿ ನೀಡುತ್ತದೆ. ಮತ್ತೊಬ್ಬ ಶ್ರೇಷ್ಠ ಕವಿ ಕಾನ್‌ಸ್ಟ್ಯಾನ್‌ಟೈನ್ ಕನಫಿ. ಇವನು ತನ್ನ ಬದುಕಿನ ಬಹುಭಾಗವನ್ನು ಈಜಿಪ್ಟಿನ ಅಲೆಗ್ಸಾಂಡ್ರಿಯದಲ್ಲಿ ಕಳೆದ. ಇವನ ಬಹು ಕವನಗಳ ಹಿನ್ನೆಲೆ ಈ ನಗರವೇ. ಇವನ ಕವನಗಳಲ್ಲಿ ಗಾಢವಾದ ಖಿನ್ನತೆ ಇದೆ.

20ನೆಯ ಶತಮಾನದ ಪ್ರಸಿದ್ಧ ಬರೆಹಗಾರರಲ್ಲಿ ಕವಿ, ಕಾದಂಬರಿಕಾರ ನಿಕಾಸ್ ಕಝಾನ್ ನೆಟ್ ಝಾಕಿಸ್‍ನೂ ಒಬ್ಬ. ಇವನ ಪ್ರಸಿದ್ಧ ಕವನ ದಿ ಆಡಿಸಿ ಎ ಮಾಡರ್ನ್ ಸೀಕ್ವೆಲ್ ನಲ್ಲಿ ಹೋಮರನ ಪ್ರಸಿದ್ಧ ಮಹಾಕಾವ್ಯವನ್ನು ಇವನು ಮುಂದುವರೆಸುತ್ತಾನೆ. ಜೋಬ್ರದ ಗ್ರೀಕ್ (1943) ಇವನ ಪ್ರಸಿದ್ಧ ಕಾದಂಬರಿ; ಇದು ಚಲನಚಿತ್ರವೂ ಆಗಿದೆ. ಜಾರ್ಜ್ ಐರ್ಯೊರ್ಕಾಸ್‍ನ ದಿ ಡೀಮನ್ (1934) ಆಧುನಿಕ ಗ್ರೀಕ್ ಮನೋಧರ್ಮದ ವಿಶ್ಲೇಷಣೆ.

ಎರಡನೆಯ ಮಹಾಯುದ್ಧದಲ್ಲಿ ಗ್ರೀಕರು ಬಹಳ ಪಾಡುಪಟ್ಟರು. ಯುದ್ಧ ಮುಗಿದ ಅನಂತರ ಗ್ರೀಕರ ಯಾತನೆಯನ್ನು ನಿರೂಪಿಸುವ ಹಲವು ಕೃತಿಗಳು ರಚಿತವಾದವು. ತಿಮಾಸ್ ಕಾರ್‍ನರಾಸ್ ತನ್ನ ಹೈದರಿ (1946) ಎನ್ನುವ ಕೃತಿಯಲ್ಲಿ ಯುದ್ಧಕಾಲದಲ್ಲಿ ಗ್ರೀಕ್ ಯೋಧರ ಮನಸ್ಥೈರ್ಯವನ್ನು ಮುರಿಯಲು ಜರ್ಮನ್ ಅಧಿಕಾರಿಗಳು ಗ್ರೀಕ್ ಕೈದಿಗಳ ಮೇಲೆ ನಡೆಸಿದ ಕ್ರೌರ್ಯವನ್ನು ನಿರೂಪಿಸಿದ. ಜರ್ಮನಿಯನ್ನು ವಿರೋಧಿಸಿದ ಗ್ರೀಕರ ವ್ಯವಸ್ಥೆಯನ್ನು ಕುರಿತ ಕೃತಿಗಳು ಬಂದವು.

ವ್ಯಾಸಿಲಿಸ್ ವಾಸಿಲಿಕಸ್, ನಿಕಾಸ್ ಕಜಾನ್‍ನೆಟ್ ಝಾಕಿಸನ ಕಾರ್ಯವನ್ನು ಮುಂದುವರೆಸಿದ. ಅವನ ಝಡ್ (1966) ಎನ್ನುವ ಪ್ರತಿಭಟನೆಯ ಕಾದಂಬರಿ ಹಲವು ಭಾಷೆಗಳಿಗೆ ಅನುವಾದಿತವಾಯಿತು, ಚಲನಚಿತ್ರವೂ ಆಯಿತು. ಗ್ರೀಸಿನಲ್ಲಿ ರಾಜರ ಆಡಳಿತವನ್ನು ರಕ್ಷಿಸಿದ ರಾಜಕಾರಣಿಗಳ ಮತ್ತು ಸೈನ್ಯದ ಅಧಿಕಾರಿಗಳ ಭ್ರಷ್ಟಾಚಾರದ ವಿಶ್ಲೇಷಣೆ ಇಲ್ಲಿದೆ. ಕ್ಯೂಪ್ ಎಲಾನ್ (1976) ಎನ್ನುವ ಕಾದಂಬರಿತ್ರಯದಲ್ಲಿ ಈ ಕಾದಂಬರಿಕಾರನು ಯುದ್ಧದಲ್ಲಿ ಸಾವುಗಳಿಗೆ ಕಾರಣವಾದ ಶಸ್ತ್ರಾಸ್ತ್ರಗಳ ಕಾರ್ಖಾನೆಯ ಕಥೆಯನ್ನು ಬಿತ್ತರಿಸುತ್ತಾನೆ.

1960ರ ದಶಕದಿಂದ ಹಲವರು ಗ್ರೀಕ್ ಕಾದಂಬರಿಕಾರರು ಸಮಕಾಲೀನ ಬದುಕಿನ ವಿಶ್ಲೇಷಣೆಯಲ್ಲಿ ತೊಡಗಿಕೊಂಡರು.

ಯುದ್ಧಾನಂತರ ಕವಿಗಳು ತಮ್ಮ ನಾಡಿನ ಪರಂಪರೆಯ ಅರಿವಿನೊಂದಿಗೆ ಆಧುನಿಕ ಪ್ರಜ್ಞೆಯನ್ನು ಮೈಗೂಡಿಸಿಕೊಂಡಿದ್ದಾರೆ. ಭಾವನೆಗಳನ್ನು ಉದ್ದೀಪನಗೊಳಿಸುವ ಸಾಂಕೇತಿಕತೆ, ನ್ಯೂನೋಕ್ತಿ (ಅಂಡರ್ ಸ್ಟೇಟ್‍ಮೆಂಟ್) ಮತ್ತು ಹಳೆಯ ನೆನಪಿನ ಹಂಬಲಗಳ ತ್ರಿವೇಣಿ ಸಂಗಮ ಆದ ಕಾವ್ಯದ ಕವಿ ಜಾರ್ಜ್ ಸೆಫೆರಿಸನಿಗೆ 1963ರಲ್ಲಿ ನೊಬೆಲ್ ಪ್ರಶಸ್ತಿ ಲಭ್ಯವಾಯಿತು. ಯೂನಿಸ್ ರಿಟ್‍ಸಾಸ್ ರಾಜಕೀಯವಾಗಿ ಕ್ರಾಂತಿಕಾರಿ ಕವಿ.

ಸಿಕೆಲಿಯಸ್ ಮತ್ತು ಕಝಾನ್‍ಟೆ ಝಾಕಿನ್ ಟ್ರ್ಯಾಜಡಿಗಳನ್ನು ಬರೆದಿದ್ದರು, ಇವುಗಳ ಕ್ರಿಯೆ ದೂರ ಗತಕಾಲಕ್ಕೆ ಸೇರಿದ್ದು. 1950ರ ಅನಂತರದ ನಾಟಕಕಾರರು ಸಮಕಾಲೀನ ಸಮಸ್ಯೆಗಳತ್ತ ಗಮನ ಹರಿಸಿದರು. (ಎಲ್.ಎಸ್.ಎಸ್)

**ಗ್ರೀಕೋ – ಲ್ಯಾಟಿನ್ ಚೌಕಗಳು :** ಪ್ರಯೋಗಗಳ ಸಂಖ್ಯಾಕಲನೀಯ ಯೋಜನೆ ಮತ್ತು ವಿಶ್ಲೇಷಣೆಗಳಲ್ಲಿ, ವಿಶಿಷ್ಟವಾದ, ಆದರೆ ಅಪರೂಪವಾಗಿ ಉಪಯೋಗಿಸಲ್ಪಡುವ ಆಲೇಖ್ಯಗಳು (ಗ್ರೀಕೋ–ಲ್ಯಾಟಿನ್ ಸ್ಕ್ವೇರ್ ಡ್ರೈಸೆನ್ಸ್). ಬದಿ p ಇರುವ ಒಂದು ಚೌಕಾಕೃತಿಯಲ್ಲಿ p ಅಕ್ಷರಗಳನ್ನು ಪ್ರತಿಯೊಂದು ಅಕ್ಷರವೂ ಪ್ರತಿ ಅಡ್ಡಸಾಲಿನಲ್ಲಿ ಮತ್ತು ಪ್ರತಿ ನೀಟಸಾಲಿನಲ್ಲಿ ಒಂದೊಂದು ಬಾರಿ ಕಾಣಿಸಿಕೊಳ್ಳುವಂತೆ ವ್ಯವಸ್ಥೆಗೊಳಿಸಿದರೆ, ಅಂಥ ವ್ಯವಸ್ಥೆಗೆ ಒಂದು p x p ಲ್ಯಾಟಿನ್ ಚೌಕ ಎಂದು ಹೆಸರು. ಅದರಲ್ಲಿ ಪ್ರತಿ ಅಕ್ಷರವೂ ಒಟ್ಟು p ಸಲ ಕಾಣಿಸಿಕೊಳ್ಳುತ್ತದೆ.

(a)

| | | | | |
|---|---|---|---|---|
| A | B | C | D | E |
| B | C | D | E | A |
| C | D | E | A | B |
| D | E | A | B | C |
| E | A | B | C | D |

(b)

| | | | | |
|---|---|---|---|---|
| A | B | C | D | E |
| C | D | B | A | B |
| B | A | E | C | D |
| B | C | D | E | A |
| D | E | A | B | C |

(c)

| | | | | |
|---|---|---|---|---|
| A | B | C | D | E |
| D | E | A | B | C |
| B | C | D | E | A |
| E | A | B | C | D |
| C | D | E | A | B |

(d)

| | | | | |
|---|---|---|---|---|
| A | B | C | D | E |
| E | A | B | C | D |
| D | E | A | B | C |
| C | D | E | A | B |
| B | C | D | E | A |

ಚಿತ್ರ 1

ಸಮಾನ ಬದಿಗಳುಳ್ಳ ಎರಡು ಲ್ಯಾಟಿನ್ ಚೌಕಗಳನ್ನು ಒಂದರ ಮೇಲೊಂದು ಅಳವಡಿಸಲಾಗಿದೆ ಎಂದು ಭಾವಿಸಿ. ಒಂದರಲ್ಲಿ ಲ್ಯಾಟಿನ್ ಅಕ್ಷರ (A, B, C, D ಇತ್ಯಾದಿ) ಗಳನ್ನು ಮತ್ತು ಇನ್ನೊಂದರಲ್ಲಿ ಗ್ರೀಕ್ ಅಕ್ಷರ ∝, β, γ, δ ಇತ್ಯಾದಿಗಳನ್ನು ಬಳಸಲಾಗಿದೆ. ಪ್ರತಿ ಲ್ಯಾಟಿನ್ ಅಕ್ಷರವೂ ಪ್ರತಿ ಗ್ರೀಕ್ ಅಕ್ಷರದೊಂದಿಗೆ, ಸರಿಯಾಗಿ ಒಂದು ಬಾರಿ ಕಾಣಿಸಿಕೊಳ್ಳುವಂತಿದ್ದರೆ, ಆಗ ಆ ಎರಡು ಲ್ಯಾಟಿನ್ ಚೌಕಗಳು ಪರಸ್ಪರ ಲಂಬವಾಗಿವೆ (ಆರ್ತೊಗೊನಲ್) ಎನ್ನುತ್ತೇವೆ; ಮತ್ತು ಅವೆರಡೂ ಸೇರಿ ಒಂದು ಗ್ರೀಕೋ–ಲ್ಯಾಟಿನ್ ಚೌಕವನ್ನು ರಚಿಸುತ್ತವೆ. ಚಿತ್ರ (1) ರಲ್ಲಿರುವ ನಾಲ್ಕು ಲ್ಯಾಟಿನ್ ಚೌಕಗಳು ಪರಸ್ಪರ ಲಂಬವಾಗಿವೆ ಎಂಬುದನ್ನು ಗಮನಿಸಬೇಕು. ಅದರಲ್ಲಿರುವ ಚೌಕ (b) ಯಲ್ಲಿ ಲ್ಯಾಟಿನ್ ಅಕ್ಷರಗಳ ಬದಲು ಗ್ರೀಕ್ ಅಕ್ಷರಗಳನ್ನು ಬಳಸಿ ಚೌಕ (a) ಯ ಮೇಲೆ ಅಳವಡಿಸಿದಾಗ ಚಿತ್ರದಲ್ಲಿರುವ 5x5 ಗ್ರೀಕೋ–ಲ್ಯಾಟಿನ್ ಚೌಕ ದೊರೆಯುತ್ತದೆ.

3x3

| | | |
|---|---|---|
| A A | B β | C γ |
| B γ | C ∝ | A β |
| Cβ | A γ | B ∝ |

4 x 4

| | | | |
|---|---|---|---|
| A ∝ | B γ | C δ | D â |
| B â | A δ | D γ | C ∝ |
| C γ | D ∝ | A â | B δ |
| D δ | C â | B ∝ | A γ |

5 x 5

| | | | | |
|---|---|---|---|---|
| A ∝ | B â | C γ | D δ | E∈ |
| B γ | C δ | D∈ | E ∝ | A â |
| C∈ | D ∝ | E â | A γ | B δ |
| D â | E γ | A δ | B ∈ | C ∝ |
| E δ | A ∈ | B ∝ | C â | D γ |

ಚಿತ್ರ 2. ಗ್ರೀಕೋ–ಲ್ಯಾಟಿನ್ ಚೌಕಗಳು

ಮೂರನೆಯ ಒಂದು ಲ್ಯಾಟಿನ್ ಚೌಕವನ್ನು ಒಂದು ಗ್ರೀಕೋ–ಲ್ಯಾಟಿನ್ ಚೌಕದ ಮೇಲೆ, ಮೊದಲನೆಯ ಎರಡು ಚೌಕಗಳಿಗೂ ಲಂಬವಾಗಿರುವಂತೆ, ಅಳವಡಿಸಿದರೆ ಆಗ ಒಂದು ಹೈಪರ್–ಗ್ರೀಕೋ–ಲ್ಯಾಟಿನ್ ಚೌಕ ದೊರೆಯುತ್ತದೆ. ಈ ಕ್ರಮದ ಮುಂದುವರಿಕೆಯನ್ನು ಕೆಳಗಿನ ಪ್ರಮೇಯ ತಿಳಿಸುತ್ತದೆ : P ಅವಿಭಾಜ್ಯ ಸಂಖ್ಯೆ (ಪ್ರೈಮ್ ನಂಬರ್ ಅಥವಾ ಅವಿಭಾಜ್ಯ ಸಂಖ್ಯೆಯ ಘಾತವಾಗಿರುವಾಗ ಪ್ರತಿ ಅಂಕಣದಲ್ಲೂ (p-1) ಭಾಷೆಗಳ ಒಂದೊಂದು ಅಕ್ಷರಗಳಿರುವಂತೆ ಮತ್ತು ಅವುಗಳ ಪೈಕಿ ಯಾವುದೇ ಎರಡು ಭಾಷೆಗಳ ಅಕ್ಷರಗಳು ಗ್ರೀಕೋ–ಲ್ಯಾಟಿನ್ ಚೌಕದ ಸ್ವಭಾವವನ್ನು ತೋರ್ಪಡಿಸುವ ಚೌಕವನ್ನು ನಿರ್ಮಿಸುವಂತೆ, ಒಂದು ಚೌಕವನ್ನು ರಚಿಸಬಹುದು. ಚಿತ್ರ (1)ರ ಚೌಕ (b) ಯಲ್ಲಿ ಗ್ರೀಕ್ ಅಕ್ಷರಗಳನ್ನೂ ಚೌಕ (c) ಯಲ್ಲಿ ಅಂಕಿಗಳನ್ನೂ ಬಳಸಿ ಒಂದರ ಮೇಲೊಂದು ಅಳವಡಿಸಿದೆ. ಆಗ ಚಿತ್ರದ ಹೈಪರ್–ಗ್ರೀಕೋ–ಲ್ಯಾಟಿನ್ ಚೌಕ ದೊರೆಯುತ್ತದೆ.

| | | | | |
|---|---|---|---|---|
| A∝1 | B â2 | Cγ3 | Dδ4 | E∈5 |
| Bγ4 | Cδ5 | D∈1 | E∝2 | A â3 |
| C∈2 | D∝3 | Eâ4 | Aγ5 | Bδ1 |
| Dâ5 | Eγ1 | Aδ2 | B∈3 | C∝4 |
| Eδ3 | A∈4 | B∝5 | C â1 | Dγ2 |

ಚಿತ್ರ 3. 5x5 ಹೈಪರ್–ಗ್ರೀಕೋ–ಲ್ಯಾಟಿನ್ ಚೌಕ

ಕೆಳಗಿನ ಎರಡು ನಿದರ್ಶನಗಳು ಗ್ರೀಕೋ–ಲ್ಯಾಟಿನ್ ಚೌಕಗಳನ್ನು ಉಪಯೋಗಿಸಿಕೊಳ್ಳಬಹುದಾದ ಎರಡು ಸಂದರ್ಭಗಳನ್ನು ಸೂಚಿಸುತ್ತವೆ.

1. ಒಂದು ಎಕರೆಗೆ ದೊರೆಯುವ ಬತ್ತದ ಬೆಳೆಯ ಮೇಲೆ, ಉಪಯೋಗಿಸಿದ ಗೊಬ್ಬರಗಳ, ಅಡ್ಡ ಮತ್ತು ನೀಟ ದಿಕ್ಕುಗಳಲ್ಲಿ ಮಣ್ಣಿನ ಸಾರದ ಏರಿಳಿತಗಳು ಮತ್ತು ಉಪಯೋಗಿಸಿದ ಬೀಜದ ನಮೂನೆಗಳ ಪರಿಣಾಮಗಳನ್ನು ಅಧ್ಯಯಿಸುವುದು.

2. ಪ್ರಾಣಿಗಳ ತೂಕದ ಹೆಚ್ಚಳದ ಮೇಲೆ, ಅವುಗಳ ಮೊದಲ ತೂಕಗಳು, ಅವುಗಳ ತಳಿಗಳು, ಅವು ವಾಸಿಸುತ್ತಿರುವ ಕೊಟ್ಟಿಗೆಗಳು ಮತ್ತು ಅವಕ್ಕೆ ತಿನ್ನಿಸಿದ ಆಹಾರಗಳು– ಇವುಗಳ ಪರಿಣಾಮಗಳನ್ನು ಅಧ್ಯಯಿಸುವುದು.

ಗ್ರೀಕೋ–ಲ್ಯಾಟಿನ್ ಚೌಕದ ಅಡ್ಡಸಾಲುಗಳು, ನೀಟಸಾಲುಗಳು, ಲ್ಯಾಟಿನ್ ಅಕ್ಷರಗಳು– ಇವನ್ನು ಚರದ ಮೌಲ್ಯದ ಮೇಲೆ ಪರಿಣಾಮ ಬೀರುವ ನಾಲ್ಕು ಬೇರೆ ಬೇರೆ ಅಂಶಗಳನ್ನು

ಪ್ರತಿನಿಧಿಸಲು ಉಪಯೋಗಿಸಲಾಗುವುದು. p x p ಗ್ರೀಕೋ–ಲ್ಯಾಟಿನ್ ಚೌಕದಲ್ಲಿ, ಅಡ್ಡಸಾಲುಗಳು, ನೀಟಸಾಲುಗಳು, ಲ್ಯಾಟಿನ್ ಅಕ್ಷರಗಳು ಮತ್ತು ಗ್ರೀಕ್ ಅಕ್ಷರಗಳು–ಇವು ಪ್ರತಿಯೊಂದರ ಸಂಖ್ಯೆಯೂ p ಆಗಿರುವುದರಿಂದ ಅಧ್ಯಯಿಸಲ್ಪಡುತ್ತಿರುವ ನಾಲ್ಕು ಅಂಶಗಳಲ್ಲಿ ಪ್ರತಿಯೊಂದೂ p ಮಟ್ಟದಲ್ಲಿರಬೇಕೆಂಬ ನಿರ್ಬಂಧವಿದೆ. ಪ್ರಯೋಗದಿಂದ ದೊರೆಯುವ ದತ್ತಾಂಶಗಳನ್ನು ಚಲನೀಯದ ವಿಶ್ಲೇಷಣೆಯ **(ನೋಡಿ)** ವಿಧಾನದಿಂದ ಅಧ್ಯಯಿಸಬಹುದು. p x p ಗ್ರೀಕೋ–ಲ್ಯಾಟಿನ್ ಚೌಕದಲ್ಲಿ ದೋಷಗಳ ವರ್ಗ ಮೊತ್ತಕ್ಕೆ (ಎರರ್ ಸಮ್ ಆಫ್ ಸ್ಕ್ವೇರ್ಸ್) ದೊರೆಯುವ ಸ್ವಾತಂತ್ರ್ಯಾಂಕಗಳು ಕೇವಲ

$$(p^2 - 1) - 4 (p - 1) = (p - 1) (p - 3)$$

$p > 4$ ಆಗಿರದ ಹೊರತು ಇದು ಸಾಕಷ್ಟು ಚಿಕ್ಕ ಸಂಖ್ಯೆ. ಇದು ಇಂಥ ಆಲೇಖ್ಯದ ಒಂದು ದೌರ್ಬಲ್ಯ. ಪ್ರಯೋಗದ ಗಾತ್ರವನ್ನು ಹೆಚ್ಚಿಸದೆಯೇ ಹಲವು ಅಂಶಗಳ ಪರಿಣಾಮಗಳನ್ನು ಅಧ್ಯಯಿಸಲು ಗ್ರೀಕೋ–ಲ್ಯಾಟಿನ್ ಚೌಕಗಳು ಅಥವಾ ಹೈಪರ್–ಗ್ರೀಕೋ–ಲ್ಯಾಟಿನ್ ಚೌಕಗಳು ಬಹಳ ಅನುಕೂಲ ಎಂದು ತೋರಿಕೆಗೆ ಕಂಡರೂ ಅಂಶಗಳ ಸಂಖ್ಯೆ ಹೆಚ್ಚಿದಂತೆ ದೋಷಗಳ ವರ್ಗಮೊತ್ತಕ್ಕೆ ದೊರೆಯುವ ಸ್ವಾತಂತ್ರ್ಯಾಂಕಗಳು ಕಡಿಮೆಯಾಗುವುದು ಮತ್ತು ಅಸಂಕಲನೀಯತೆಯ (ನಾನ್‍ಆಡಿಟಿವಿಟಿ) ಸಮಸ್ಯೆಗಳು ಎದುರಾಗುವುದು–ಇವು ಇಂಥ ವ್ಯವಸ್ಥೆಗಳ ವ್ಯಾವಹಾರಿಕ ಉಪಯುಕ್ತತೆಯನ್ನು ಕುಂಠಿತಗೊಳಿಸುತ್ತವೆ. ಆದ್ದರಿಂದ ಇಂಥ ಚೌಕಗಳ ರಚನೆ ಮುಖ್ಯವಾಗಿ ಬೌದ್ಧಿಕ ಕುತೂಹಲಕ್ಕಾಗಿಯೇ. ಆಚರಣೆಯಲ್ಲಿ ಅವುಗಳ ಉಪಯೋಗ ತೀರ ವಿರಳ. p ಅವಿಭಾಜ್ಯ ಸಂಖ್ಯೆ ಅಥವಾ ಅವಿಭಾಜ್ಯ ಸಂಖ್ಯೆಯ ಘಾತವಾಗಿಲ್ಲದಿರುವಾಗಲೂ ಕೆಲವೊಮ್ಮೆ ಅನುರೂಪವಾದ ಗ್ರೀಕೋ–ಲ್ಯಾಟಿನ್ ಚೌಕವನ್ನು ರಚಿಸಲು ಬರುವುದಿದೆ. ಉದಾಹರಣೆಗೆ $p = 10$ ಅಥವಾ $p = 12$. ಆರ್.ಎ. ಫಿಷರ್ ಮತ್ತು ಎಫ್. ಯೇಟ್ಸ್ ಅವರ ಸ್ಟ್ಯಾಟಿಸ್ಟಿಕಲ್ ಟೇಬಲ್ಸ್ ಫಾರ್ ಬಯಲಾಜಿಕಲ್, ಅಗ್ರಿಕಲ್ಚರಲ್ ಅಂಡ್ ಮೆಡಿಕಲ್ ರಿಸರ್ಚ್ ಎಂಬ ಗ್ರಂಥ p - 3,4,5,7,8 ಮತ್ತು 9 ಈ ಮೌಲ್ಯಗಳಿಗೆ ಅನುರೂಪವಾದ ಪರಸ್ಪರ ಲಂಬವಾಗಿರುವ $(p - 1)$ ಲ್ಯಾಟಿನ್ ಚೌಕಗಳನ್ನು ಕೊಡುತ್ತದೆ. $p = 6$ ಆಗಿರುವ ಗ್ರೀಕೋ–ಲ್ಯಾಟಿನ್ ಚೌಕದ ರಚನೆ ಅಸಾಧ್ಯ. ಭಾರತೀಯ ಸಂಖ್ಯಾಕಲನ ವಿಜ್ಞಾನಿ ಆರ್.ಸಿ. ಬೋಸ್ ಅವರು p ಅವಿಭಾಜ್ಯ ಸಂಖ್ಯೆ ಅಥವಾ ಅವಿಭಾಜ್ಯ ಸಂಖ್ಯೆಯ ಘಾತವಾಗಿರುವಾಗ ಪರಸ್ಪರ ಲಂಬವಾಗಿರುವ $(p - 1)$ ಲ್ಯಾಟಿನ್ ಚೌಕಗಳನ್ನು ರಚಿಸುವ ಒಂದು ವಿಧಾನವನ್ನು ತಿಳಿಸಿದ್ದಾರೆ (1938). ಪ್ರಾಯೋಗಿಕ ಆಲೇಖ್ಯ ಸಿದ್ಧಾಂತದ ಸರ್ವತೋಮುಖ ಬೆಳೆವಣಿಗೆಗೆ ಕಾರಣನಾದ ಆರ್.ಎ. ಫಿಷರ್ (1890–1962) 'ಗ್ರೀಕೋ–ಲ್ಯಾಟಿನ್ ಮತ್ತು ಅದಕ್ಕಿಂತ ಉನ್ನತ ದರ್ಜೆಯ ಚೌಕಗಳ ಮುಖ್ಯ ಉಪಯೋಗ ಕ್ಲಿಷ್ಟತರವಾದ ಸಂಯೋಜನಾ ಸಂದರ್ಭಗಳನ್ನು ಸ್ಪಷ್ಟಪಡಿಸುವುದರಲ್ಲಿದೆ' ಎಂದಿದ್ದಾನೆ. (ಎಸ್.ಟಿ.)

**ಗ್ರೀಗ್, ನಾರ್‍ಡಾಲ್ ಬ್ರನ್ :** 1902–43. ನಾರ್ವೆಯ ನಾಟಕಕಾರ, ಕಾದಂಬರಿಕಾರ, ಕವಿ ಮತ್ತು ದೇಶಭಕ್ತ. ಹುಟ್ಟಿದ್ದು ಬರ್ಗೆನ್‍ನಲ್ಲಿ. ಆಸ್ಲೊ ಮತ್ತು ಆಕ್ಸ್‍ಫರ್ಡ್‍ಗಳಲ್ಲಿ ವಿದ್ಯಾಭ್ಯಾಸ ಮಾಡಿ ಇಂಗ್ಲಿಷ್ ಸಾಹಿತ್ಯದಲ್ಲಿ ವಿಶೇಷ ಪರಿಶ್ರಮ ಪಡೆದ. 10ನೆಯ ವಯಸ್ಸಿನಲ್ಲಿ ಸಾಧಾರಣ ನಾವಿಕನಾಗಿ ಸಮುದ್ರ ಸಂಚಾರ ಮಾಡಿದನಲ್ಲದೆ ಪತ್ರಿಕೋದ್ಯಮಿಯಾಗಿಯೂ ದೇಶ ವಿದೇಶಗಳಲ್ಲಿ ಸಂಚರಿಸಿದ. ಈತನ ಕೃತಿಗಳಲ್ಲಿ ಪ್ರಧಾನವಾಗಿ ಕಾಣುವುದು ಸಾಹಸದ ಗೀಳು, ಶ್ರೀಸಾಮಾನ್ಯನ ಬಗ್ಗೆ ಆಸಕ್ತಿ ಮತ್ತು ದೇಶಭಕ್ತಿ. ಈತನ ಶೈಲಿ ಭಾವಗೀತಮಯವಾದುದು. ರೌಂಡ್ ದಿ ಕೇಪ್ ಆಫ್ ಗುಡ್ ಹೋಪ್ (1922) ಈತನ ಮೊದಲ ಕವನ ಸಂಕಲನ. ಸ್ಟೋನ್ಸ್ ಇನ್ ದಿ ಸ್ಟ್ರೀಮ್ (1925), ನಾರ್ವೇ ಇನ್ ಅವರ್ ಹಾರ್ಟ್ಸ್ (1929)– ಈತನ ಇತರ ಕವನ ಸಂಕಲನಗಳು. ಈತನ ಪರ್ಯಟನಾಕಾಂಕ್ಷೆ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಬಗ್ಗೆ ಇದ್ದ ಪ್ರಬಲ ಉತ್ಸಾಹಗಳನ್ನು ಈ ಸಂಕಲನಗಳಲ್ಲಿ ಗುರುತಿಸಬಹುದು. ದಿ ಷಿಪ್ ಸೇಲ್ಸ್ ಆನ್ (1927) ಈತನ ಮೊದಲ ಕಾದಂಬರಿ. ಈತನ ಗಾಢ ಸಾಮಾಜಿಕ ಪ್ರಜ್ಞೆಗೆ ಇದು ಉದಾಹರಣೆಯಾಗಿದೆ. ಕೀಟ್ಸ್, ಷೆಲ್ಲಿ, ಬೈರನ್, ರೂಪರ್ಟ್ ಬ್ರೂಕ್, ಸಿ.ಎಚ್. ಸೋರ್ಲೆ, ವಿಲ್‍ಫ್ರೆಡ್ ಓವೆನ್ ಮೊದಲಾದವರನ್ನು ಕುರಿತ ಆತ್ಮೀಯ ಪ್ರಬಂಧಗಳನ್ನು ಈತ ದಿ ಯಂಗ್ ಡೆಡ್ ಒನ್ಸ್ ಎಂಬ ಗ್ರಂಥವಾಗಿ ಪ್ರಕಟಿಸಿದ್ದಾನೆ.

ಎರಡು ವರ್ಷಗಳ ಮಾಸ್ಕೋ ವಾಸ ಈತನ ಜೀವನದಲ್ಲಿ ಒಂದು ಹೊಸ ಅಧ್ಯಾಯವನ್ನು ತೆರೆಯಿತು. ಈತನ ಸಾಮಾಜಿಕ ಪ್ರಜ್ಞೆ ಕಮ್ಯೂನಿಸಮ್ ಕಡೆ ವಾಲಿತು. ಕಾರ್ಮಿಕ ವರ್ಗದ ಬಗ್ಗೆ ಈತನಿಗಿದ್ದ ಸಹಾನುಭೂತಿ ಇನ್ನಷ್ಟು ಹೆಚ್ಚಿತು. ಸೋವಿಯತ್ ರಂಗಭೂಮಿಯಿಂದಲೂ ಪ್ರಭಾವಿತನಾಗಿ, ಸಾಮಾಜಿಕ ಸಮಸ್ಯೆಗಳನ್ನು ವಸ್ತುವನ್ನಾಗಿ ಮಾಡಿಕೊಂಡು ಹೊಸ ತಂತ್ರಗಳನ್ನು ಬಳಸಿ ಈತ ನಾಟಕಗಳನ್ನು ಬರೆದ. ಅವು ಮುಖ್ಯವಾಗಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅನ್ಯಾಯಗಳನ್ನು ನಿಷ್ಠುರವಾಗಿ ಖಂಡಿಸುತ್ತವೆ, ವಿಡಂಬಿಸುತ್ತವೆ. ಈತ ಬರೆದ ಒಟ್ಟು ಆರು ನಾಟಕಗಳಲ್ಲಿ ಅವರ್ ಆನರ್ ಅಂಡ್ ಅವರ್ ಪವರ್ (1935) ಮತ್ತು ದಿ ಡಿಫೀಟ್ (1937) ಪ್ರಮುಖವಾದವು. ಮೊದಲ ನಾಟಕದಲ್ಲಿ ಒಂದನೆಯ ಮಹಾಯುದ್ಧ ಕಾಲದ ನಾರ್ವೆಯ ಹಡಗುಗಳ ನಾಯಕರ ದುರಾಶೆಯ ಖಂಡನೆ ಇದೆ. ಎರಡನೆಯ ನಾಟಕದಲ್ಲಿ 1871 ರ ಪ್ಯಾರಿಸ್ ಕಮ್ಯೂನಿನ ದುರಂತ ಚಿತ್ರಣವಿದೆ.

1940ರಲ್ಲಿ ಜರ್ಮನರು ನಾರ್ವೆಯನ್ನು ಆಕ್ರಮಿಸಿಕೊಂಡಾಗ ಗ್ರೀಗ್ ಇಂಗ್ಲೆಂಡಿಗೆ ಪಲಾಯನಮಾಡಿದ. ಅಲ್ಲಿಂದ ಈತ ಪ್ರಸಾರ ಮಾಡಿದ ಕಾವ್ಯ ಆಕ್ರಮಣಕಾರ ರಾಷ್ಟ್ರದ ವಿರುದ್ಧ ನಾರ್ವೇ ಜನರ ಪ್ರತಿಭಟನೆಯನ್ನು ಜಾಗೃತಗೊಳಿಸಿತು. ಈತ ತನ್ನ ಯುದ್ಧಗೀತೆಗಳಲ್ಲಿ ನಾರ್ವೆಯ ಬಗ್ಗೆ ತೀವ್ರ ಆಸಕ್ತಿಯನ್ನೂ ಶಾಂತಿಯ ಜರ್ಝರಿತ ಮೌಲ್ಯಗಳನ್ನೂ ವ್ಯಕ್ತಪಡಿಸುತ್ತ– ನಾವು ಕೊಲ್ಲುತ್ತೇವೆ, ನಮ್ಮ ಮಕ್ಕಳು ನಮ್ಮಂತಾಗದಿರಲೆಂದು– ಭಾವಪೂರ್ಣವಾಗಿ ಹೇಳಿದ್ದಾನೆ. 1943ರ ಡಿಸೆಂಬರ್ 2 ರಂದು ನಡೆದ ವಿಮಾನ ದಾಳಿಯಲ್ಲಿ ಗ್ರೀಗ್ ಸಾವಿಗೀಡಾದ. (ಎಸ್.ವಿ.ಎಸ್‍ಯು.)


**ಗ್ರೀನ್, ಜಾನ್ ರಿಚರ್ಡ್ :** 1837–83. ಇಂಗ್ಲಿಷ್ ಇತಿಹಾಸಕಾರ. ಆಕ್ಸ್‍ಫರ್ಡಿನಲ್ಲಿ ಜನಿಸಿದ. ಮ್ಯಾಗ್ಡಲೀನ್ ಕಾಲೇಜ್ ಶಾಲೆ ಮತ್ತು ಜೀಸಸ್ ಕಾಲೇಜಿನಲ್ಲಿ ವಿದ್ಯೆಗಳಿಸಿದ. ಚಿಕ್ಕಂದಿನಲ್ಲೇ ಈತನಿಗೆ ಇತಿಹಾಸದಲ್ಲಿ ಆಸಕ್ತಿ ಮೂಡಿತು. ಆಕ್ಸ್‍ಫರ್ಡ್ ಅನ್ನು ಬಿಟ್ಟ ಮೇಲೆ (1860) ಈತ ಕ್ರೈಸ್ತ ಪುರೋಹಿತ ದೀಕ್ಷೆ ಪಡೆದನಾದರೂ ಇತಿಹಾಸ ವಿಷಯಕ ಲೇಖನಗಳ ಬರೆಹವನ್ನು ಬಿಡಲಿಲ್ಲ. 1868 ರಲ್ಲಿ ಲ್ಯಾಂಬೆತಿನಲ್ಲಿ ಗ್ರಂಥಪಾಲನಾದ. ಒಂದು ವರ್ಷ ಕಳೆಯುವುದರಲ್ಲಿ ಇವನು ತೀವ್ರ ಕ್ಷಯವ್ಯಾಧಿಗೆ ತುತ್ತಾದ. ಆದ್ದರಿಂದ ಆ ಕೆಲಸ ಬಿಡಬೇಕಾಯಿತು. ಆಗ ಇತಿಹಾಸವೇ ಇವನ ಸರ್ವಕಾಲದ ಕಾಳಜಿಯಾಯಿತು. ಈತ ಷಾರ್ಟ್ ಹಿಸ್ಟರಿ ಆಫ್ ದಿ ಇಂಗ್ಲಿಷ್ ಪೀಪಲ್ ಎಂಬ ಗ್ರಂಥವನ್ನು ಬರೆಯತೊಡಗಿದ. 1874ರಲ್ಲಿ ಅದು ಪ್ರಕಟವಾದೊಡನೆಯೇ ವಿಶೇಷ ಜನಪ್ರಿಯವಾಯಿತು. 1877–80ರಲ್ಲಿ ಈತನ ಎ ಹಿಸ್ಟರಿ ಆಫ್ ದಿ ಇಂಗ್ಲಿಷ್ ಪೀಪಲ್ ಎಂಬ ನಾಲ್ಕು ಸಂಪುಟಗಳ ಬೃಹತ್ ಗ್ರಂಥ ಹೊರಬಂದಿತು. ವಿದ್ವಾಂಸರಿಗಾಗಿ ಪ್ರಾಚೀನ ಇಂಗ್ಲೆಂಡಿನ ಇತಿಹಾಸ ಕುರಿತ ಗ್ರಂಥವೊಂದನ್ನು ಬರೆಯುವುದು ಇವನ ಇಚ್ಛೆಯಾಗಿತ್ತು. ಮೇಕಿಂಗ್ ಆಫ್ ಇಂಗ್ಲೆಂಡ್ ಮತ್ತು ಕಾನ್‍ಕ್ವೆಸ್ಟ್ ಆಫ್ ಇಂಗ್ಲೆಂಡ್ ಎಂಬ ಗ್ರಂಥಗಳು ಆ ಉದ್ದೇಶಿತ ಗ್ರಂಥಗಳ ಕೆಲವು ಭಾಗಗಳು. ಮೊದಲನೆಯ ಗ್ರಂಥ 1881 ರಲ್ಲೂ ಎರಡನೆಯದು ಗ್ರೀನನ ಮರಣಾನಂತರವೂ 1883ರಲ್ಲೂ ಪ್ರಕಟವಾದವು. ಆಧುನಿಕ ವಿಮರ್ಶಾತ್ಮಕ ದೃಷ್ಟಿ ಬೆಳೆಯುವ ಮುನ್ನ ಬರೆಯಲಾದ ಈ ಗ್ರಂಥಗಳು ಅವುಗಳ ಸಾಹಿತ್ಯ ಗುಣದಿಂದಾಗಿ ಇಂದಿಗೂ ವಿದ್ವಾಂಸರ ಮೆಚ್ಚುಗೆಗಳಿಸಿವೆ. ಶಾರ್ಟ್ ಹಿಸ್ಟರಿ ಆಫ್ ಇಂಗ್ಲೆಂಡ್ ಒಂದು ಜನಪ್ರಿಯ ಗ್ರಂಥ. ರಾಜಕೀಯಕ್ಕಿಂತ ಇಂಗ್ಲೆಂಡಿನ ಸಾಮಾಜಿಕ ಇತಿಹಾಸಕ್ಕೆ ಅದು ಪ್ರಾಧಾನ್ಯ ನೀಡುತ್ತದೆ. ಇದರಲ್ಲಿ ಮಿಂಚುವ ರಿಚರ್ಡನ ಮಾನವೀಯ ದೃಷ್ಟಿ ಹಾಗೂ ಕೌಶಲ್ಯದಿಂದಾಗಿ ಇಂದಿಗೂ ಅದು ಹೊಸದಾಗಿ ತೋರುತ್ತದೆ. (ಆರ್.ಆರ್.ಎ.)

**ಗ್ರೀನ್, ಜಾರ್ಜ್ :** 1793–1841. ಇಂಗ್ಲಿಷ್ ಗಣಿತಜ್ಞ. ಗಣಿತೀಯ ಭೌತಶಾಸ್ತ್ರಕ್ಕೆ ಇವನ ಕೊಡುಗೆ ಅಪಾರ. ವೃತ್ತಿಯಿಂದ ಗಿರಣಿ ಕೆಲಸವನ್ನು ಅನುಸರಿಸಿದರೂ ಗಣಿತಶಾಸ್ತ್ರದಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಶಾಲೆಯಲ್ಲಿ ಕಲಿಯುವುದಕ್ಕಿಂತ ಹೆಚ್ಚಿನ ಅಭ್ಯಾಸವನ್ನು ತಾನೇ ಮಾಡಿಕೊಂಡ. ಭೌತಸಮಸ್ಯೆಗಳಿಗೆ ಪರಿಹಾರ ನೀಡುವಲ್ಲಿ ಈತ ಅನುಸರಿಸುತ್ತಿದ್ದುದು ಒಂದು ಅಸಾಧಾರಣ ಮಾರ್ಗ. ಎಸ್ಸೆ ಆನ್ ದಿ ಅಪ್ಲಿಕೇಷನ್ ಆಫ್ ಮ್ಯಾಥಮ್ಯಾಟಿಕಲ್ ಅನಾಲಿಸಿಸ್ ಟು ದಿ ಥಿಯೊರಿ ಆಫ್ ಎಲೆಕ್ಟ್ರಿಸಿಟಿ ಅಂಡ್ ಮ್ಯಾಥಮ್ಯಾಟಿಕ್ಸ್ ಎಂಬ ಪ್ರೌಢ ಪ್ರಬಂಧವನ್ನು ರಚಿಸಿ ನಾಟಿಂಗ್‍ಹ್ಯಾಮಿನಲ್ಲಿ ಈತ ಪ್ರಕಟಿಸಿದ (1828). ಈ ಪ್ರಬಂಧದಲ್ಲಿ ಫ್ರೆಂಚ್ ಗಣಿತಜ್ಞ ಎಸ್. ಡಿ ಪಾಯ್‍ಸಾನನ (1781–1840) ವಿದ್ಯುತ್ ಮತ್ತು ಕಾಂತವಿಭಾಗಗಳ ಸಂಶೋಧನೆಗಳನ್ನು ಕುರಿತಂತೆ ಪ್ರಸಾಮಾನ್ಯೀಕರಣಗಳನ್ನೂ ವಿವರಣೆಗಳನ್ನೂ ಗ್ರೀನ್ ನೀಡಿದ್ದಾನೆ. ವಿದ್ಯುತ್ ಮತ್ತು ಕಾಂತ ಪ್ರಕರಣಗಳಲ್ಲಿ ಕಾಣಬರುವ ಪೊಟೆನ್ಶಿಯಲ್ (ವಿಭವ) ಎಂಬ ಪದವನ್ನು ಮೊಟ್ಟಮೊದಲಿಗೆ ಬಳಸಿದ್ದು ಈತನೇ. ಈ ಎರಡೂ ಕ್ಷೇತ್ರಗಳನ್ನು ಕುರಿತಂತೆ ವಿಭವದ ಗುಣಧರ್ಮಗಳನ್ನು ತಿಳಿಸುವ ಪ್ರಮೇಯ (ಗ್ರೀನನ ಪ್ರಮೇಯ) ಇವನ ಹೆಸರನ್ನು ಗಣಿತೀಯ ಭೌತಶಾಸ್ತ್ರದಲ್ಲಿ ಅಮರವಾಗಿಸಿದೆ **(ನೋಡಿ–ಗ್ರೀನನ ಪ್ರಮೇಯ)**. ಸ್ಕಾಟ್‍ಲೆಂಡಿನ ಗಣಿತಜ್ಞ ಲಾರ್ಡ್‍ಕೆಲ್ವಿನ್ (1824–1907) ಗ್ರೀನನ ಪ್ರೌಢಪ್ರಬಂಧಗಳನ್ನು 1846ರಲ್ಲಿ ಪುನರ್ ಮುದ್ರಿಸುವವರೆಗೂ ಅದರ ವಿಷಯ ಬಹಳ ಮಂದಿಗೆ ತಿಳಿದಿರಲಿಲ್ಲ. *

**ಗ್ರೀನ್, ಥಾಮಸ್ ಹಿಲ್ :** 1836–82. ಇಂಗ್ಲಿಷ್ ದಾರ್ಶನಿಕ. ಆಗಿನ ಕಾಲದ ಯುರೋಪಿನಲ್ಲಿ ನಿಯೊ–ಕಾಂಟಿಯಾನಿಸಮ್ ಅಥವಾ ನಿಯೊ ಹೆಗೆಲಿಯಾನಿಸಮ್ ಎಂದು ಯಾವ ಪಂಥ ಪ್ರಚಾರದಲ್ಲಿತ್ತೊ ಅದನ್ನು ಇಂಗ್ಲೆಂಡಿನಲ್ಲಿ ಎತ್ತಿಹಿಡಿದವನೆಂದು ಪ್ರಸಿದ್ಧನಾಗಿದ್ದಾನೆ. ಈತ ಹುಟ್ಟಿದ್ದು ಯಾರ್ಕ್‍ಸ್‍ನ ಬರ್‍ಕಿನ್‍ನಲ್ಲಿ. ಆಕ್ಸ್‍ಫರ್ಡ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ. 1860ರಲ್ಲಿ ಅಲ್ಲಿಯ ಫೆಲೊ ಆಗಿ ಆಯ್ಕೆಯಾದನಲ್ಲದೆ

ಅಲ್ಲೇ ತತ್ತ್ವಶಾಸ್ತ್ರ ಬೋಧಕನಾಗಿ ತನ್ನ ಜೀವಿತ ಕಾಲವೆಲ್ಲ ದುಡಿದ. ಇಂದ್ರಿಯಾನುಭವಗಳಿಗೇ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿದ್ದ ವಾದಗಳು ಈತನ ಕಾಲದಲ್ಲಿ ತಾಂಡವವಾಡುತ್ತಿದ್ದುವಲ್ಲದೆ ಪ್ರಯೋಜನವಾದ ಪ್ರಚಲಿತವಾಗಿತ್ತು. ಇವನ್ನು ಈತ ಪ್ರತಿಭಟಿಸಲು ತೊಡಗಿದ. ಇದಕ್ಕಾಗಿ ಕಾಂಟ್ ಮತ್ತು ಹೆಗೆಲರ ದರ್ಶನಗಳಿಂದ ಸ್ಫೂರ್ತಿಪಡೆದ.

ಈತನ ಅಭಿಪ್ರಾಯದಲ್ಲಿ ಈ ಜಗತ್ತೆಂಬುದು ಅನೇಕ ರೀತಿಯ ಸಂಬಂಧಗಳ ಒಂದು ಜಾಲ. ಈ ಸಂಬಂಧಗಳ ಜ್ಞಾನವನ್ನು ಪಡೆಯುವಂಥದು ಮನಸ್ಸು. ಭಾವದಿಂದಾಗಲೀ ವೇದನೆಗಳಿಂದಾಗಲೀ ನಮಗೆ ಈ ಸಂಬಂಧಜ್ಞಾನ ಬರುವಂಥದಲ್ಲ. ಬುದ್ಧಿಗೆ ಗೋಚರವಾಗುವ ಅನುಭವದಿಂದ ಮಾತ್ರ ಪ್ರಾಪ್ತವಾಗುವಂಥದು. ಇದೇ ಪ್ರಜ್ಞೆ. ವಸ್ತುಗಳ ನೈಜಸ್ಥಿತಿಗೂ ಅವುಗಳ ತೋರಿಕೆಗೂ ವ್ಯತ್ಯಾಸವಿದೆ. ಆದರೆ ಈ ವ್ಯತ್ಯಾಸ ಎರಡು ಭಿನ್ನ ತತ್ತ್ವಗಳಿಂದ ಉನ್ನತವಾದ ವ್ಯತ್ಯಾಸವಲ್ಲ. ಇವು ಒಂದೇ ತತ್ತ್ವದ ಎರಡು ಮುಖಗಳು. ಒಂದು ಉಪಾಧಿಸಹಿತವಾದ ಪ್ರಜ್ಞೆ, ಮತ್ತೊಂದು ಉಪಾಧಿರಹಿತವಾದ ಪ್ರಜ್ಞೆ. ಈ ಉಪಾಧಿರಹಿತವಾದ ಪ್ರಜ್ಞೆಯನ್ನೇ ಪರಾತ್ಪರತತ್ತ್ವವೆಂದು ಕರೆಯುತ್ತೇವೆ. ಇದೇ ಜಗತ್ತಿಗೆಲ್ಲಕ್ಕೂ ಆಧಾರಭೂತವಾದ ತತ್ತ್ವ.



ನೀತಿಶಾಸ್ತ್ರದಲ್ಲೂ ಗ್ರೀನ್ ಹೆಸರುವಾಸಿಯಾಗಿದ್ದ. ಇಲ್ಲಿಯೂ ಹೆಗೆಲ್‍ನ ಪ್ರಭಾವ ಕಂಡುಬರುತ್ತದೆ. ಇಚ್ಛೆಯನ್ನು ಕುರಿತ ವ್ಯಾಖ್ಯಾನವನ್ನು ಈತ ಮುಂದಿಡುತ್ತಾನೆ. ಪ್ರಾಣಿಗಳಲ್ಲಿ ಇಚ್ಛೆಗಳು ಪ್ರತ್ಯೇಕಶಕ್ತಿಗಳು. ಆದರೆ ಮನುಷ್ಯರಲ್ಲಿ ಅವು ಆತ್ಮದಲ್ಲಿ ಸಮನ್ವಯಗೊಳ್ಳುತ್ತವೆ. ಆತ್ಮತೃಪ್ತಿಗಾಗಿ, ಆತ್ಮವಿಕಾಸಕ್ಕಾಗಿ, ಆತ್ಮಸಾಕ್ಷಾತ್ಕಾರಕ್ಕಾಗಿ ಮಾನವ ಹಾತೊರೆಯುತ್ತಾನೆ. ಇವನಲ್ಲಿ ಜ್ಞಾನಶಕ್ತಿ, ಇಚ್ಛಾಶಕ್ತಿ, ಕ್ರಿಯಾಶಕ್ತಿಗಳು ಆತ್ಮವಿಕಾಸದ ವಿವಿಧ ಮುಖಗಳಾಗಿರುತ್ತವೆ. ಇದರಿಂದಲೇ ಮನುಷ್ಯನಲ್ಲಿ ಕರ್ತೃತ್ವಶಕ್ತಿ ಏರ್ಪಡುತ್ತದೆ. ಈ ಶಕ್ತಿಯ ಹಿಂದಿರುವ ಇಚ್ಛಾಶಕ್ತಿ ಇವನಿಗೆ ಇಚ್ಛಾಸ್ವಾತಂತ್ರ್ಯವನ್ನು ನೀಡುತ್ತದೆ. ಪ್ರತಿ ಮಾನವನ ಆತ್ಮವಿಕಾಸ ಕೇವಲ ಅವನದೇ ಆಗಿರುವುದಿಲ್ಲ. ಇತರರ ವಿಕಾಸದಲ್ಲಿ ತನ್ನ ವಿಕಾಸವನ್ನು ಸಾಧಿಸಿಕೊಂಡಾಗ ಮಾತ್ರ ಇವನದು ಸುಗಮವಾಗುತ್ತದೆ. ಗ್ರೀನ್‍ಗೆ ಒಂದೇ ಒಂದು ಸಮಷ್ಟಿ ಆತ್ಮದಲ್ಲಿ ನಂಬಿಕೆ ಇರಲಿಲ್ಲ. ಆತ್ಮಗಳ ಪ್ರತ್ಯೇಕತೆಯನ್ನು ಈತ ಒಪ್ಪಿಕೊಂಡಿದ್ದ. ಪ್ರತಿ ಜೀವಾತ್ಮನ ವ್ಯಕ್ತಿತ್ವಕ್ಕೆ ಈತ ಕೊಟ್ಟ ಬೆಲೆ ಈತನ ರಾಜ್ಯ ತತ್ತ್ವದ ಆಧಾರವಾಯಿತು. ವ್ಯಕ್ತಿಗಳ ಪ್ರತ್ಯೇಕ ಹಿತ ಸಾಮುದಾಯಿಕ ಹಿತದಲ್ಲಿ ಬೆರೆತಿದೆ ಎಂದೂ ಈತ ಬೋಧಿಸಿದ. ಹಕ್ಕುಗಳನ್ನು ಪಡೆಯಲು ವ್ಯಕ್ತಿಗೆ ಕರ್ತವ್ಯಪಾಲನೆ ಅರ್ಹತೆ ನೀಡುವುದೆಂದೂ ತಿಳಿಸಿದ. ರಾಜ್ಯಕ್ಕೆ ಆಧಾರವಾದ್ದು ದಂಡವಲ್ಲವೆಂದೂ ಧರ್ಮವೆಂದೂ ಸರ್ವಸಮ್ಮತಿ ಎಂದೂ ಪ್ರತಿಪಾದಿಸಿದ.

ಗ್ರೀನನ ಗ್ರಂಥಗಳಲ್ಲಿ ಮುಖ್ಯವಾದವು ಇವು : ಇಂಟ್ರೊಡಕ್ಷನ್ ಟು ಹ್ಯೂಮ್ (1874); ಪ್ರೋಲಿಗೊಮೆನಾ ಟು ಎಥಿಕ್ಸ್ (1883) ಮತ್ತು ಲೆಕ್ಚರ್ಸ್ ಆನ್ ದಿ ಪ್ರಿನ್ಸಿಪಲ್ಸ್ ಆಫ್ ಪೊಲಿಟಿಕಲ್ ಆಬ್ಲಿಗೇಷನ್ (1895). ಗ್ರೀನನ ಸಮಗ್ರ ಬರೆಹಗಳನ್ನು ಆರ್.ಎಲ್. ನೆಟಲ್‍ಷಿಪ್ ಎಂಬಾತ 1885–8ರ ಅವಧಿಯಲ್ಲಿ ಮೂರು ಸಂಪುಟಗಳಲ್ಲಿ ಸಂಪಾದಿಸಿದ್ದಾನೆ. ಇದರಲ್ಲಿ ಸಂಪಾದಕನೇ ವಿಸ್ತಾರವಾಗಿ ಬರೆದ ಗ್ರೀನ್‍ನ ಜೀವನ ಚರಿತ್ರೆಯೂ ಇದೆ. (ಎಂ.ವೈ.)


**ಗ್ರೀನ್, ರಾಬರ್ಟ್ :** 1558–92. ಅತ್ಯುತ್ತಮ ಇಂಗ್ಲಿಷ್ ಬರೆಹಗಾರರಲ್ಲೊಬ್ಬ. ಜನನ ಬಹುಶಃ ನಾರ್ವಿಚ್‍ನಲ್ಲಿ. ಶಿಕ್ಷಣ ಕೇಂಬ್ರಿಜಿನ ಸೇಂಟ್ ಜಾನ್ಸ್ ಕಾಲೇಜಿನಲ್ಲಿ. 1578ರಲ್ಲಿ ಬಿ.ಎ., 1583ರಲ್ಲಿ ಎಂ.ಎ. ಪದವಿ ಪಡೆದ. ಇಲ್ಲಿ ಥಾಮಸ್ ನ್ಯಾಷನೊಂದಿಗೆ ಸ್ನೇಹ ಬೆಳೆಸಿದ. ಇವನಿಗೆ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸದಸ್ಯತ್ವ ದೊರಕಿತ್ತು. ಊರೂರ ಅಲೆತ ಈತನ ಪ್ರವೃತ್ತಿ. ಅನೇಕ ಐರೋಪ್ಯ ದೇಶಗಳಲ್ಲಿ ಅಲೆದು ಕೊನೆಗೆ ಲಂಡನಿಗೆ ಬಂದು ನೆಲೆನಿಂತ. ಆ ಹೊತ್ತಿಗಾಗಲೇ ಮದುವೆಯಾಗಿ ಹೆಂಡತಿ ಮತ್ತು ಮಗುವನ್ನು ತ್ಯಜಿಸಿದ್ದ.

ವಿಶ್ವವಿದ್ಯಾಲಯದಲ್ಲಿದ್ದಾಗಲೇ ಬರೆಹಕ್ಕೆ ಕೈ ಹಾಕಿದ್ದ ಈತ ಮ್ಯಾಮಿಲಿಯ ಎಂಬ ಕೃತಿಯನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಿದ್ದ. ನಾಟಕಕಾರನಾಗಿ ಈತ ಇಂಗ್ಲಿಷ್ ನಾಟಕಗಳಿಗೆ ತಳಹದಿ ಹಾಕಿದನೆನ್ನಬಹುದು. ಗ್ರೀನ್ ರಚಿಸಿದ ನಾಟಕಗಳಲ್ಲಿ ಈಗ ದೊರೆತಿರುವವು ಕೆಲವು ಮಾತ್ರ ಆಲ್ಫಾನ್ಸಸ್ ಕಿಂಗ್ ಆಫ್ ಅರಗಾನ್ ಮತ್ತು ಆರ್ಲ್ಯಾಂಡೊ ಫ್ಯೂರಿಯೋಸ ನಾಟಕಗಳ ಮೇಲೆ ಮಾರ್ಲೋನ ಪ್ರಭಾವ ಕಂಡುಬರುತ್ತದೆ. ಫ್ರೈಯರ್ ಬೇಕನ್ ಅಂಡ್ ಫ್ರೈಯರ್ ಬಿಂಗೆ, ಜೇಮ್ಸ್ IV– ಇವು ರೊಮ್ಯಾಂಟಿಕ್ ಹರ್ಷನಾಟಕಗಳು. ಜೇಮ್ಸ್ IV ಚಾರಿತ್ರಿಕವಾಗಿರದೆ ಯಕ್ಷರಾಜ ಓಟೆರಾನ್ ಬಗ್ಗೆ ರಚಿತವಾದ ಕಾಲ್ಪನಿಕ ನಾಟಕ. ಇದರಲ್ಲಿ ಯಕ್ಷಿಣಿಯ ಪ್ರಯೋಗ ತಂದದ್ದು ಈತನ ವೈಶಿಷ್ಟ್ಯ.

ಗ್ರೀನ್ ಬರೆದವುಗಳಲ್ಲಿ ಗಮನಿಸಬೇಕಾದ ಸಾಹಿತ್ಯಕೃತಿಗಳೆಂದರೆ ಕಿರುಪುಸ್ತಕಗಳು (ಪ್ಯಾಂಫ್ಲೆಟ್ಸ್). ಇವು ಕಾದಂಬರಿಗೆ ತುಂಬ ಹತ್ತಿರದವು. ಇವುಗಳಲ್ಲಿ ಎಲಿಜಬೀತನ್ ಕಾಲದ ಕೆಳಮಟ್ಟದ ಲಂಡನ್ ಜನಜೀವನದ ಬಗ್ಗೆ ಬರೆದದ್ದೇ ಹೆಚ್ಚು. ಗೈಡೋನಿಯನ್, ಕಾರ್ಡ್ ಆಫ್ ಫ್ಯಾನ್ಸಿ (1584), ಪ್ಯಾಂಡೋಸ್ಟೊ (1588), ಪೆರಿಮೆಡೀಸ್ (1588), ಮೆನಾಫಾನ್ (1589), ಮೌರ್ನಿಂಗ್ ಗಾರ್ಮೆಟ್ (1590), ನೆವರ್ ಟೂ ಲೇಟ್ (1590), ಫೇರ್‌ವೆಲ್ ಟು ಫಾಲಿ (1591), ಎ ಕ್ವಿಪ್ ಫಾರ್ ಎನ್ ಅಪ್‌ಸ್ಟಾರ್ಟ್ ಕೋರ್ಟಿಯರ್ (1592), ಫಿಲೊಮೆಲಾ (1592)–ಇವು ಈತನ ಕೆಲವು ಪ್ರಸಿದ್ಧ ಕಿರುಪುಸ್ತಕಗಳು. ಅನೇಕವುಗಳಲ್ಲಿ ಸಮಾಜದ ವಿವಿಧ ವ್ಯಕ್ತಿಗಳನ್ನು ವಿಡಂಬಿಸಿದ್ದಾನೆ. ವಿಡಂಬನೆ, ಹಾಸ್ಯ ಈತನ ಕೃತಿಗಳಲ್ಲಿ ಪ್ರಧಾನವಾಗಿ ತೋರುವ ಗುಣಗಳು.

ವಿಶ್ವವಿದ್ಯಾಲಯದಲ್ಲಿರುವಾಗಲೇ ಗ್ರೀನ್ ಕೆಳದರ್ಜೆಯ ಜನರೊಡನೆ ಬೆರೆಯಲು ಪ್ರಾರಂಭಿಸಿದ. ಅಲ್ಲಿಯ ಜೀವನದಲ್ಲಿಯೇ ಆಕರ್ಷಣೆ ಕಂಡು ಅಲ್ಲಿಯೇ ಮುಳುಗಿದ. ಜೇಬುಗಳ್ಳರ, ಕುಡುಕರ, ವೇಶ್ಯೆಯರ ಸಹವಾಸ ಆತನ ನಿತ್ಯದ ಬಾಳಾಯಿತು. ಈ ಸಹವಾಸದಿಂದಲೇ ಈ ಕೃತಿಗಳಲ್ಲಿಯ ಕೆಳಪಾತ್ರಗಳ ಚಿತ್ರಣದಲ್ಲಿ ಜೀವಂತಿಕೆ ಕಾಣುತ್ತದೆ. ಸಹವಾಸ ದೋಷದಿಂದ ಈತನಿಗೆ ಕುಡಿತದ ಚಟ ಅಂಟಿಕೊಂಡಿತು. ಜೀವನದ ಕೊನೆಗಾಲದಲ್ಲಿ ತನ್ನ ಹಿಂದಿನ ಜೀವನದ ಬಗ್ಗೆ ವಿಷಾದಪಟ್ಟು ಅನೇಕ ಲೇಖನಗಳನ್ನು ಬರೆದ. ಮರಣಶಯ್ಯೆಯಲ್ಲಿದ್ದಾಗ ಈತ ಕಡುಬಡವ. ಊಟಕ್ಕೂ ಗತಿ ಇಲ್ಲದವ. ಸಾಯುವ ಮೊದಲು ಹೆಂಡತಿಗೆ ತನ್ನ ತಪ್ಪುಗಳನ್ನು ಕ್ಷಮಿಸುವಂತೆ ಬರೆದು ತೀರಿಕೊಂಡ. ಇವನ ಸಂಸಾರಕ್ಕೆ ಇದ್ದವರು ಇಬ್ಬರೇ. ಈತನ ಚಮ್ಮಾರ ಗೆಳೆಯ ಮತ್ತು ಗೆಳೆಯನ ಹೆಂಡತಿ. ಹೀಗೆ ಇಂಗ್ಲಿಷಿನ ಆದ್ಯ ವೃತ್ತಿಬರೆಹಗಾರರಲ್ಲೊಬ್ಬನಾದ ಗ್ರೀನ್ ರಿಕ್ತಹಸ್ತನಾಗಿ ಅಸುನೀಗಿದ. (ಟಿ.ಎಸ್.ಎಆರ್.)

**ಗ್ರೀನ್, ಹೆನ್ರಿ ಗ್ರಹಾಮ್ :** 1904–91. ನವ್ಯಕಾವ್ಯ ತಂತ್ರವನ್ನು ಯಶಸ್ವಿಯಾಗಿ ಬಳಸಿಕೊಂಡು, ಧರ್ಮ ಅಧರ್ಮಗಳ ಜಂಜಾಟಕ್ಕೆ ಸಿಕ್ಕಿ ತೊಳಲುವ ಮಾನವನ ಸ್ಥಿತಿ ಮತ್ತು ದೇವಮಾನವರ ಸಂಬಂಧವನ್ನು ಅದ್ಭುತವಾಗಿ ಚಿತ್ರಿಸಿರುವ ಇಂಗ್ಲಿಷ್ ಕಾದಂಬರಿಕಾರ. ಹಾರ್ಟ್‌ಫರ್ಡ್‌ಷೈರಿನ ಬರ್ಕ್‌ಹ್ಯಾಮ್ ಸ್ಟೆಡ್‌ನಲ್ಲಿ ಹುಟ್ಟಿದ ಈತ ಅದೇ ಹಳ್ಳಿಯ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಬ್ಯಾಲಿಯಲ್ ಕಾಲೇಜಿನಲ್ಲಿ ಉನ್ನತ ವ್ಯಾಸಂಗವನ್ನು ಪಡೆದ. 1926ರಲ್ಲಿ ಸ್ವಪ್ರೇರಣೆಯಿಂದ ರೋಮನ್ ಕೆಥೊಲಿಕ್ ಪಂಗಡವನ್ನು ಸೇರಿದ. ಈ ಮತಾಂತರ ಈತನ ಜೀವನದಲ್ಲಿ ಎಷ್ಟು ಮಹತ್ತ್ವಪೂರ್ಣವೋ ಸಾಹಿತ್ಯ ಸೃಷ್ಟಿಯಲ್ಲೂ ಅಷ್ಟೇ ಮಹತ್ತ್ವಪೂರ್ಣವಾಗಿದೆ. ಅದು ಈತನ ಜೀವನದಲ್ಲಿ ಸ್ಥಿರತೆ ದೊರಕಿಸಿಕೊಟ್ಟದ್ದಲ್ಲದೆ ಹಲವು ಕಾದಂಬರಿಗಳಿಗೆ ಸ್ಫೂರ್ತಿ ನೀಡಿತು.



ವಿಮರ್ಶಕರು ಈತನ ಕಾದಂಬರಿಗಳನ್ನು ಎರಡು ಗುಂಪುಗಳಾಗಿ ವರ್ಗೀಕರಿಸುತ್ತಾರೆ. ಮೊದಲನೆಯ ಗುಂಪಿನಲ್ಲಿ ಕೇವಲ ಮನೋರಂಜನೆಗಾಗಿ ರಚಿಸಿದ ಕಾದಂಬರಿಗಳು ಬರುತ್ತವೆ. ಉದಾ : ಸ್ಟಾಮ್‌ಬೌಲ್ ಟ್ರೇನ್ (1932), ಎ ಗನ್ ಫಾರ್ ಸೇಲ್ (1936), ಇಟ್ಸ್ ಎ ಬ್ಯಾಟಲ್‌ಫೀಲ್ಡ್ (1934) ಇತ್ಯಾದಿ. ಎರಡನೆಯ ಗುಂಪಿನಲ್ಲಿ ಗಂಭೀರವಾದ, ವೈಶಿಷ್ಟ್ಯಪೂರ್ಣವಾದ ಕಾದಂಬರಿ ಗಳು ಬರುತ್ತವೆ. ಉದಾ: ದಿ ಪವರ್ ಅಂಡ್ ದಿ ಗ್ಲೋರಿ (1940), ದಿ ಹಾರ್ಟ್ ಆಫ್ ದಿ ಮ್ಯಾಟರ್ (1948), ದಿ ಎಂಡ್ ಆಫ್ ದಿ ಅಫೇರ್ (1951) ಇತ್ಯಾದಿ. ದಿ ಪವರ್ ಅಂಡ್ ದಿ ಗ್ಲೋರಿಗೆ ಹಾತಾರನ್‌ಡನ್ ಬಹುಮಾನ ಬಂದಿದೆ. ಈತನ ರಚನಾತಂತ್ರ, ಪ್ರತಿಭೆ ಮತ್ತು ವಿಶಿಷ್ಟಶಕ್ತಿಯನ್ನು ಎರಡನೆಯ ಗುಂಪಿನ ಕಾದಂಬರಿಗಳಲ್ಲಿ ಕಾಣಬಹುದು. ದಿ ಮ್ಯಾನ್ ವಿದಿನ್ (1929), ದಿ ನೇಮ್ ಆಫ್ ಆಕ್ಷನ್ (1930), ದಿ ರೂಮರ್ ಅಟ್ ನೈಟ್‌ಫಾಲ್ (1931)–ಇವು ಮೊದಲ ಮೂರು ಕಾದಂಬರಿಗಳು. ಇವುಗಳಲ್ಲಿ ಇಂಗ್ಲೆಂಡಿನ ಪ್ರಸಿದ್ಧ ಕಾದಂಬರಿಕಾರರಾದ ರಾಬರ್ಟ್ ಲೂಯಿ ಸ್ಟೀವನ್‌ಸನ್, ವರ್ಜಿನಿಯ ವುಲ್ಫ್ ಮತ್ತು ಜೋಸೆಫ್ ಕಾನ್ರಾಡ್ ಅವರ ಪ್ರಭಾವವನ್ನು ಕಾಣಬಹುದು. 1936ರಲ್ಲಿ ಪ್ರಕಟವಾದ ಇಂಗ್ಲೆಂಡ್ ಮೇಡ್ ಮಿ ಎಂಬ ಕೃತಿಯಲ್ಲಿ ಈತನದೇ ಆದ ವೈಯಕ್ತಿಕ ಶೈಲಿ ರೂಪುಗೊಂಡಿದೆ.

ಧಾರ್ಮಿಕ ಮೌಲ್ಯಗಳು ಕ್ಷೀಣಿಸುತ್ತಿರುವ ಈ ಕಾಲದಲ್ಲಿ ಸೂಕ್ಷ್ಮವಾದ ನೈತಿಕ ವಿಷಯಗಳನ್ನೋ ಆಧ್ಯಾತ್ಮಿಕ ತತ್ತ್ವಗಳನ್ನೋ ತನ್ನ ಕೃತಿಗಳಲ್ಲಿ ಅಳವಡಿಸುವ ಸಾಹಸವನ್ನು ಈತ ಮಾಡಿದ್ದಾನೆ. ಗ್ರೀಕ್ ದುರಂತನಾಟಕಗಳಲ್ಲಿ ಕಾಣುವ ಪ್ರಧಾನಾಂಶವನ್ನು, ಹಿಂಸಾಚಾರದಿಂದ ಹೊರಹೊಮ್ಮುವ ವಿಧಿಪ್ರಾಬಲ್ಯವನ್ನು ಈತನ ಕೆಲವು ಕಾದಂಬರಿಗಳಲ್ಲಿ ಕಾಣುತ್ತೇವೆ.

ಈತ ನಿಷ್ಠಾವಂತ ರೋಮನ್ ಕೆಥೊಲಿಕ್ ಸಂಪ್ರದಾಯದವ. ದೈವ ನಿಯಮದಂತೆ ಎಲ್ಲವೂ ನಡೆಯುತ್ತದೆ; ಅದನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, ಪಾಪಿಗೂ ದೈವ ರಕ್ಷಣೆಯಿದೆ ಎಂಬ ತತ್ತ್ವಕ್ಕೆ ಅಂಟಿದವ. ಆದ್ದರಿಂದಲೇ ದಿ ಪವರ್ ಅಂಡ್ ದಿ ಗ್ಲೋರಿಯಲ್ಲಿ ಕುಡುಕನೂ ವ್ಯಭಿಚಾರಿಯೂ ಆದ ಪಾದ್ರಿ ಪಾಪದಿಂದ ಪಾಪಕ್ಕೆ ಜಿಗಿಯುತ್ತ ಹೋಗುತ್ತಿದ್ದರೂ ಅಂತಿಮವಾಗಿ ಹುತಾತ್ಮರ ದಿವ್ಯವಲಯದಲ್ಲಿ ವಿರಾಜಿಸುತ್ತಾನೆ; ದಿ ಹಾರ್ಟ್ ಆಫ್ ದಿ ಮ್ಯಾಟರ್ ಕಾದಂಬರಿಯಲ್ಲಿ ತನ್ನ ಸರ್ವಸ್ವವನ್ನೂ ಕಳೆದುಕೊಂಡ ಸ್ಕೋಬಿ ಕೊನೆಯ ಗಳಿಗೆಯಲ್ಲಿ ರಕ್ಷಣೆ ಪಡೆಯುತ್ತಾನೆ.

ಈತನ ಕಾದಂಬರಿಗಳಲ್ಲಿ ಬರುವ ಘಟನಾವಳಿಗಳು ಮತ್ತು ಪಾತ್ರಗಳು ಒಂದು ವಿಶಿಷ್ಟವಾದ ಇಂಗ್ಲಿಷ್ ಸಂಪ್ರದಾಯ ಹಾಗೂ ವಿದೇಶಗಳ ಹಿನ್ನೆಲೆಯನ್ನು ಪಡೆದಿವೆ. ಮೆಕ್ಸಿಕೋದಲ್ಲಿಯ ಮತೀಯ ಕಿರುಕುಳಗಳು, ಇಂಡೋ–ಚೀನದಲ್ಲಿಯ ಯುದ್ಧ, ಆಫ್ರಿಕದ ಕುಷ್ಠರೋಗಪೀಡಿತ ಪ್ರದೇಶಗಳು, ಹೈತಿಯಲ್ಲಿನ ರಾಜಕೀಯ ದಬ್ಬಾಳಿಕೆ–ಇವು ಕೆಲವು ಕಾದಂಬರಿಗಳಲ್ಲಿ ಹಿನ್ನೆಲೆಯಾಗಿ ಬಂದು ಕಥೆಗಳಿಗೆ ಅವರ್ಣನೀಯ ಸೌಂದರ್ಯವನ್ನು ನೀಡುತ್ತವೆ. ಕಥಾನಾಯಕನ ಕಷ್ಟನಷ್ಟ, ಧೈರ್ಯಸ್ಥೈರ್ಯಗಳು, ಜನರ ಡಂಭಾಚಾರ, ನೀಚತನ, ಸ್ವಾರ್ಥ ಜನರಿಂದ ಸುತ್ತುವರಿಯಲ್ಪಟ್ಟ ಮಾನವ ಹೇಗೆ ಜೀವನದಲ್ಲಿ ಹೋರಾಡಿ, ಬದುಕಿ ಬಾಳುತ್ತಾನೆ ಎಂಬ ವಿಚಾರಗಳು ಈತನ ಕಾದಂಬರಿಗಳಲ್ಲಿ ವಸ್ತುನಿಷ್ಠವಾಗಿ ಮೂಡಿವೆ.

ಭೌಗೋಳಿಕ ಹಿನ್ನೆಲೆ ಈತನ ರಚನಾತಂತ್ರದ ಒಂದು ವಿಶಿಷ್ಟ ಅಂಶವಾದರೆ ಮಾರ್ಮಿಕ ಸಂಭಾಷಣೆ, ಪ್ರತಿಮೆಗಳು ಮತ್ತು ಸಾಂಕೇತಿಕ ಶಬ್ದಗಳ ಬಳಕೆ ಈತನ ತಂತ್ರದ ಮತ್ತೊಂದು ಅಂಶ. ಕೆಲವು ಕಡೆ ಬರುವ ರೂಪಕಾಲಂಕಾರ ಕಾದಂಬರಿಗಳಿಗೆ ಸ್ಥಳೀಯ ಬಣ್ಣವನ್ನು ನೀಡುವುದರ ಜೊತೆಗೆ ಕೇಂದ್ರತತ್ತ್ವಕ್ಕೆ ಬಲವನ್ನೂ ನೀಡುತ್ತದೆ. ಈತನ ಕಾದಂಬರಿಗಳೆಲ್ಲವನ್ನೂ ಸಮಗ್ರವಾಗಿ ಪರಿಶೀಲಿಸಿದರೆ ಮೂರು ದಶಕಗಳ (1930–60) ಸಾಮಾಜಿಕ ಜೀವನ, ಅಂತಾರಾಷ್ಟ್ರೀಯ ಪರಿಸ್ಥಿತಿ, ರಾಜಕೀಯ ಬದಲಾವಣೆಗಳು–ಇವು ಓದುಗರ ಕಣ್ಣಮುಂದೆ ನಿಲ್ಲುತ್ತವೆ.

ಈತನ ಕಾದಂಬರಿಗಳಲ್ಲಿ ಬರುವ ಕೆಲವು ಪದಗಳು ಸಾಂಕೇತಿಕ ಅರ್ಥವನ್ನು ಕೊಡುತ್ತವೆಂದು ವಿಮರ್ಶಕರ ಅಭಿಪ್ರಾಯ. ಉದಾ: ಬ್ರೈಟನ್ ರಾಕ್ (1938) ಕಾದಂಬರಿಯಲ್ಲಿ ಲಂಚಕೋರ ವಕೀಲ ಡ್ರೂಯಿಟ್ಟನ ಮಾತುಗಳು ಆ ಕಾಲದ ಒಟ್ಟು ಜೀವನದ ಸ್ಥಿತಿ, ಬ್ರೈಟನ್ ಊರಿನ ಪರಿಸ್ಥಿತಿ, ಕಾದಂಬರಿಯ ಮುಖ್ಯ ವ್ಯಕ್ತಿಯಾದ ಪಿಂಕೀಯ ಅವಸ್ಥೆಯ ಚಿತ್ರವನ್ನು ಕಣ್ಣಿನ ಮುಂದೆ ತಂದು ನಿಲ್ಲಿಸುತ್ತವೆ. ಗ್ರೀನನ ಪ್ರಸಿದ್ಧ ಕಾದಂಬರಿ ದಿ ಹಾರ್ಟ್ ಆಫ್ ದಿ ಮ್ಯಾಟರ್‌ನ ಕಥೆ ಪಶ್ಚಿಮ ಆಫ್ರಿಕದ ಬ್ರಿಟಿಷ್ ನೆಲಸುನಾಡಿನಲ್ಲಿ ನಡೆಯುತ್ತದೆ. ಇದು ಈತನ ಅತ್ಯುತ್ತಮ ಕಾದಂಬರಿ. ಈ ಕಾದಂಬರಿ ಈತನ ರಚನಾಕೌಶಲ, ಪಾತ್ರಸೃಷ್ಟಿ, ಮೋಹಕಗದ್ಯ ಶೈಲಿ–ಎಲ್ಲಕ್ಕೂ ಉತ್ಕೃಷ್ಟ ನಿದರ್ಶನವಾಗಿದೆ. ಈ ಕೃತಿಗೆ ಈತ 1948ರಲ್ಲಿ ಜೇಮ್ಸ್ ಟೈಟ್ ಬ್ಲಾಕ್ ಮೆಮೊರಿಯಲ್ ಪ್ರಶಸ್ತಿಯನ್ನು ಪಡೆದ.

ಈತ ಕಾದಂಬರಿಗಳನ್ನಲ್ಲದೆ ದಿ ಲಿವಿಂಗ್ ರೂಮ್ (1953) ಎಂಬ ಜನಪ್ರಿಯ ನಾಟಕವನ್ನೂ ರಚಿಸಿದ್ದಾನೆ. ನಾರ್ವೇಜಿಯನ್ ನಾಟಕಕಾರ ಹೆನ್ರಿಕ್ ಇಬ್ಸೆನನ ತಂತ್ರವನ್ನು ಪ್ರಯೋಗಿಸಿ ಬರೆದ ಈ ನಾಟಕ ಬಹು ಜನರ ಮೆಚ್ಚುಗೆ ಪಡೆದಿದೆ. ದಿ ಪಾಟಿಂಗ್ ಷೆಡ್ (1957), ದಿ ಕಾಂಪ್ಲೇಸೆಂಟ್ ಲವರ್ (1959) ಎಂಬ ಮತ್ತೆರಡು ನಾಟಕಗಳಿಂದಲೂ ಈತನ ಕೀರ್ತಿ ಹೆಚ್ಚಿದೆ.

ಮೇ ವಿ ಬಾರೋ ಯುವರ್ ಹಸ್ಬೆಂಡ್? (1967) ಮತ್ತು ದಿ ಲಾಸ್ಟ್ ವರ್ಡ್ (1990) ಇವು ಈತನ ಕಿರುಕಥಾ ಸಂಕಲನಗಳು. ಎ ಸಾರ್ಟ್ ಆಫ್ ಲೈಫ್ (1971) ಹಾಗೂ ವೇಸ್ ಆಫ್ ಎಸ್ಕೇಪ್ (1980) ಎಂಬ ಶೀರ್ಷಿಕೆಗಳಡಿಯಲ್ಲಿ ಇವನ ಆತ್ಮಚರಿತ್ರೆ ಪ್ರಕಟವಾಗಿದೆ. ನೋ ಮ್ಯಾನ್ಸ್ ಲ್ಯಾಂಡ್ ಎಂಬ ಈತನ ಮತ್ತೊಂದು ಕೃತಿ 2005ರಲ್ಲಿ ಪ್ರಕಟಗೊಂಡಿತು. 1986ರಲ್ಲಿ ಈತ ಬ್ರಿಟನಿನ ಆರ್ಡರ್ ಆಫ್ ಮೆರಿಟ್ ಪ್ರಶಸ್ತಿಯನ್ನು ಪಡೆದ. ಈತನ ಅನೇಕ ಕೃತಿಗಳು ಸಿನೆಮಾ ಹಾಗೂ ನಾಟಕಗಳಿಗೆ ವಸ್ತುವಾಗಿವೆ.

ಮಕ್ಕಳ ಕಥೆಗಳನ್ನೂ ಪ್ರವಾಸಿ ಸಾಹಿತ್ಯವನ್ನೂ ಕೆಲವು ಪ್ರಬಂಧಗಳನ್ನೂ ರಚಿಸಿದ ಗ್ರೀನ್ ಕೆಲವು ಕಾಲ ಪತ್ರಿಕೋದ್ಯಮಿಯಾಗಿಯೂ ಇದ್ದ.

ಗ್ರಹಾಂ ಗ್ರೀನನ ನೆನಪಿನಲ್ಲಿ, ಗ್ರಹಾಂ ಗ್ರೀನ್ ಬರ್ತ್‌ಪ್ಲೇಸ್ ಟ್ರಸ್ಟ್ ಎಂಬ ಸಂಘ ಪ್ರತಿವರ್ಷ ಇವನ ಜನ್ಮದಿನದ ಸಂದರ್ಭದಲ್ಲಿ ನಾಲ್ಕು ದಿನಗಳ ಕಾಲ ಗ್ರಹಾಂ ಗ್ರೀನ್ ಅಂತಾರಾಷ್ಟ್ರೀಯ ಹಬ್ಬವನ್ನು (ಗ್ರಹಾಂ ಗ್ರೀನ್ ಇಂಟರ್‌ನ್ಯಾಷನಲ್ ಫೆಸ್ಟಿವಲ್) ಆಚರಿಸುತ್ತದೆ.

20ನೆಯ ಶತಮಾನದ ಪ್ರಭಾವಶಾಲಿ ಸಾಹಿತಿಗಳಲ್ಲಿ ಈತನ ಸ್ಥಾನ ವಿಶಿಷ್ಟವಾದುದು.

(ಎನ್.ಎನ್.ಎಸ್.ಎ.)

**ಗ್ರೀನನ ಪ್ರಮೇಯ :** ಯಾವುದೇ ತಲಕ್ಕೆ (ಸರ್ಫೇಸ್) ಅನ್ವಯವಾಗುವ ಸ್ಟೋಕ್ಸನ ಪ್ರಮೇಯವನ್ನು (**ನೋಡಿ**) ಸಮತಲಕ್ಕೆ (ಪ್ಲೇನ್) ಅನ್ವಯಿಸಿದಾಗ ದೊರೆಯುವ ವಿಶೇಷ ರೂಪ. ಇದನ್ನು ಆವಿಷ್ಕರಿಸಿದವ ಜಾರ್ಜ್ ಗ್ರೀನ್ (**ನೋಡಿ–ಗ್ರೀನ್, ಜಾರ್ಜ್**). ಆದ್ದರಿಂದ ಆತನ ಹೆಸರಿನಿಂದಲೇ ಪ್ರಸಿದ್ಧವಾಗಿದೆ. ಇದರ ನಿರೂಪಣೆ ಹೀಗಿದೆ.

ಗ್ರೀನನ ಪ್ರಮೇಯ 1 : L ಎಂಬ ಸಂವೃತ ಎಲ್ಲೆಯಿಂದ (ಕ್ಲೋಸ್ಡ್ ಕಾಂಟೂರ್) ಬಂಧಿತವಾದ ಒಂದು ಸಮತಲ ಉಂಟೆಂದು ಭಾವಿಸೋಣ. $P(x_1,x_2)$, $Q(x_1,x_2)$ ಎಂಬ ಎರಡು ಉತ್ಪನ್ನಗಳೂ $\partial P/Vx_2$,